10/03/2026	The Hon'ble High Court in W.P.No.33961/2025, vide its order dated 10..03.2026, has directed the State Government to consider our case as per the directions issued by the Hon'ble High Court of Karnataka in CCC.655/2023 c/w W.P.No.29219/2023, 444513/2024 and the Supreme Court in Special Leave Petition to Appeal (C) No.(s) 35000/2025, in accordance with law and pass appropriate order within 8 weeks from the date of receipt of the Certified Copy.

The news articles published contains several false, baseless, and unsubstantiated allegations against our organisation.

We categorically deny these claims in their entirety. They lack any factual basis, evidence, or merit and appear designed to mislead the public and damage our reputation. "Our records confirm full compliance with all legal requirements as clarified above".

We would further clarify and dismiss the allegations calling it as a scam as our fight for our rights have commenced since four decades and that nothing is being worked in the backdoors for the legalizing our rights as all the above-mentioned events are in the Public Domain. We urge the General Public to immediately cease disseminating such misinformation and any continued publication will compel us to pursue appropriate legal remedies to safeguard our rights and interests.

We are issuing these clarifications, together with the date wise events for people who are short of information and ensure that no further adverse or speculative comments are made against us in official communications or public statements without verifying the facts.

CHAMUNDESHWARI NAGARA SARVODAYA SANGHA (R)

President Secretary

Mysore
Dated : 21-04-2026

No.1131/1, C/o Shantha Somashekar, 9th Main Road, SJH Road, Vidyaranyapuram, Mysore – 570 008

ನಕ್ಕರೆ ಅದೇ ಸ್ವರ್ಗ

ಗೆಳೆಯ 1 : ಲೇ ದೋಸ್ತ ಗುಟ್ಕಾ ರೇಟ್ ಜಾಸ್ತಿ ಮಾಡ್ತಾರೋ ಏನ್ ಮಾಡೋದು...?
ಗೆಳೆಯ 2 : ಅದಕ್ಯಾಕೆ ಟೆನ್ಷನ್ ಮಾಡಿಕೊಂಡಿಯಾ ಒಂದ ಅರ್ಧ ಗಂಟೆ ಲೇಟಾಗಿ ತಿಂದು ಉಗಿ ಅಷ್ಟೆ !

ಮೈಸೂರು ಮಿತ್ರ
ಗುರುವಾರ, ಏಪ್ರಿಲ್ 23, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ದೃಷ್ಟಿ ಬದಲಿಸಿ ನೋಡು ದೃಶ್ಯವೇ ಬದಲಾದೀತು. ಹವ್ಯಾಸ ಬದಲಿಸಿ ನೋಡು ಹಣೆಬರಹವೇ ಬದಲಾದೀತು. ವಿಚಾರ ಬದಲಿಸಿ ನೋಡು ದೇಶವೇ ಬದಲಾದೀತು. ದೋಣಿ ಬದಲಿಸಬೇಕೆಂದಿಲ್ಲ ದಿಕ್ಕು ಬದಲಿಸಿದರೆ ಸಾಕು, ನೀ ಸೇರುವ ದಡ ಎದುರಾದೀತು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ

ನಿಮ್ಮ ಪತ್ರಗಳು

ಶಂಕರ ಜಯಂತಿಯಂದು ಪ್ರಸಾದದ ವ್ಯವಸ್ಥೆ ಕಲ್ಪಿಸಲಿ

ಮಾನ್ಯರೆ,

ಇತ್ತೀಚೆಗಷ್ಟೇ ಮೈಸೂರಿನ ಗನ್‌ಹೌಸ್ ಬಳಿ ಇರುವ ಶಂಕರಮಠದಲ್ಲಿ ಶಂಕರ ಜಯಂತಿಯನ್ನು ಪ್ರತಿ ವರ್ಷದಂತೆ ಅದ್ದೂರಿಯಾಗಿ ಆಚರಿಸಲಾಯಿತು. ಭಕ್ತಾದಿಗಳು ದೇವರ ದರ್ಶನ ಪಡೆದು ಧನ್ಯರಾದರು. ಆದರೆ ಒಂದು ಕೊರತೆ ಏನೆಂದರೆ ಬಂದ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆ ಮಾಡದಿರುವುದು ನೋವಿನ ಸಂಗತಿ. ಎಷ್ಟೋ ದೂರದಿಂದ ಮಕ್ಕಳು, ವಯಸ್ಸಾದವರು ಬಿರು ಬಿಸಿಲಿನಲ್ಲಿ ಬಂದಿದ್ದರು. ಅವರು ಅಲ್ಲಿ ಸಮೀಪವಿರುವ ಹೋಟೆಲ್‌ನಲ್ಲಿ ಊಟ ಮಾಡಿ ತಮ್ಮ ಸ್ಥಳಗಳಿಗೆ ನಿರಾಸೆಯಿಂದ ತೆರಳಿದರು.

ಊಟ ಕೊಡುವುದು ಬೇಡ ಕಡೇ ಪಕ್ಷ ಬಿಸಿಬೇಳೆಬಾತ್, ಮೊಸರನ್ನ ಅಥವಾ ಪುಳಿಯೋಗರೆ ನೀಡಿದ್ದರೆ ತುಂಬಾ ಅನುಕೂಲವಾಗಿರುತ್ತಿತ್ತು. ವರ್ಷಕ್ಕೆ ಒಮ್ಮೆ ಶಂಕರ ಜಯಂತಿ ಬರುತ್ತದೆ. ಆಡಳಿತ ಮಂಡಳಿ ಬರೀ ಪಾನಕ ಹಾಗೂ ಕೋಸಂಬರಿ ಕೊಟ್ಟು ಕೈ ತೊಳೆದುಕೊಂಡರು. ಅಲ್ಲಿನ ಸಿಬ್ಬಂದಿಗೆ ಈ ವಿಚಾರ ಗಮನಕ್ಕೆ ತಂದರೆ ಗ್ಯಾಸ್ ಲಭ್ಯವಿಲ್ಲ ಎಂದು ಸಬೂಬು ಹೇಳುತ್ತಾರೆ.

ಈಗ ಮೊದಲಿನಂತೆ ಗ್ಯಾಸ್ ಸುಲಭವಾಗಿ ಸಿಗುತ್ತಿದೆ. ಹೋಗಲಿ ಸೌದೆ ಒಲೆಯಲ್ಲಿ ಯಾದರೂ ಪ್ರಸಾದ ತಯಾರು ಮಾಡಿ ಬಂದ ಭಕ್ತಾದಿಗಳಿಗೆ ನೀಡಬಹುದಿತ್ತು. ಇದು ಇಲ್ಲಿನ ಟ್ರಸ್ಟ್ ಗಮನಕ್ಕೆ ಬಂದು ಇನ್ನು ಮುಂದಾದರೂ ಶಂಕರ ಜಯಂತಿ ಅಥವಾ ವಿಶೇಷ ದಿನಗಳಂದು ಬಂದ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಿಕೊಡಲಿ ಎಂದು ಮನವಿ.

– ಬಿಂಡುವಿನವಿಲೆ ಪ್ರದೀಪ, ವಿದ್ಯಾರಣ್ಯಪುರಂ, ಮೈಸೂರು

ಹೈಕೋರ್ಟ್ ನಿಲುವು ಸರಿಯಾಗಿದೆ

ಮಾನ್ಯರೆ,

ಎಸ್.ಎಸ್.ಎಲ್.ಸಿ. ಫಲಿತಾಂಶ ಪ್ರಕಟವಾಗುವ ಹತ್ತಿರದಲ್ಲಿ ಹಿಂದಿ ವಿಷಯಕ್ಕೆ ಅಂಕ ನೀಡಬೇಕೆ ಅಥವಾ ಗ್ರೇಡ್ ನೀಡಬೇಕೆ ಎಂಬ ಗೊಂದಲದಿಂದ ವಿದ್ಯಾರ್ಥಿಗಳಿಗೆ ಅತಂಕ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಈ ವರ್ಷ ಅಂಕವನ್ನೇ ನೀಡಿ ಎಂದು ಹೈಕೋರ್ಟ್ ತೀರ್ಪು ನೀಡಿರುವುದು ಸರಿಯಾಗಿಯೇ ಇದೆ. ಹಿಂದಿ ಭಾಷೆಯಲ್ಲಿ ಅನುತ್ತೀರ್ಣರಾಗುತ್ತಿರುವುದಕ್ಕೆ ಪ್ರಾಥಮಿಕ ಶಿಕ್ಷಣದಲ್ಲಿ ಸರಿಯಾದ ಹಿಂದಿ ಕಲಿಕೆ ಇಲ್ಲ ಮತ್ತು ಶಿಕ್ಷಕರ ಕೊರತೆಯು ಇದೆ. ಇದಕ್ಕೆ ಸರ್ಕಾರ ಕ್ರಮ ವಹಿಸಬೇಕು. ಇತ್ತೀಚಿನ ದಿನಗಳಲ್ಲಿ ಹಿಂದಿ ಭಾಷಾ ಜ್ಞಾನ ವ್ಯವಹಾರಿಕವಾಗಿ ತುಂಬಾ ಅವಶ್ಯಕ. ಆದ್ದರಿಂದ ಈ ವರ್ಷ ಯಥಾಸ್ಥಿತಿ ಮುಂದುವರಿಸಿ ಮುಂದಿನ ವರ್ಷದಿಂದ ಅವಶ್ಯಕತೆ ಬಿದ್ದರೆ ಗ್ರೇಡ್ ನೀಡುವುದು ಸೂಕ್ತ.

–ದಡದಹಳ್ಳಿರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಅಮೆರಿಕಗೆ ಕುತ್ತಾಗುತ್ತಿರುವ ಟ್ರಂಪ್!



ಮಾನ್ಯರೆ,

ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧಕ್ಕೆ ಸಂಬಂಧಿಸಿದಂತೆ ಅಮೆರಿಕ ದೇಶದ ಮಾನ ಮರ್ಯಾದೆಗಳನ್ನು ಆ ದೇಶದ ಅಧ್ಯಕ್ಷರೇ ಸ್ವತಃ ಜಾಗತಿಕ ಮಟ್ಟದಲ್ಲಿ ಹರಾಜು ಹಾಕುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಕದನ ವಿರಾಮಕ್ಕೆ ಸಂಬಂಧಿಸಿದ ಹಾಗೆ ಟ್ರಂಪ್ ಅವರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದು, ಇದರಿಂದಾಗಿ ಅಮೆರಿಕದ ವರ್ಚಸ್ಸಿಗೆ ಭಾರೀ ಮುಖಭಂಗವಾಗುತ್ತಿದೆ. ಅಮೆರಿಕದ ಕಾಂಗ್ರೆಸ್ ಮತ್ತು ಸೆನೆಟ್‌ಗಳು ಅಧ್ಯಕ್ಷರನ್ನು ನಿಯಂತ್ರಿಸಲು ವಿಫಲವಾಗಿವೆ. ಅಮೆರಿಕ ದೇಶದ ಜನರೇ ಟ್ರಂಪ್ ವಿರುದ್ಧ ತಿರುಗಿ ಬಿದ್ದಿದ್ದರೂ, ಈ ಹುಚ್ಚು ದೊರೆಗೆ ಬುದ್ಧಿ ಬರದೇ ಇರುವುದು ವಿಪರ್ಯಾಸವೇ ಸರಿ. ಜಾರ್ಜ್ ವಾಷಿಂಗ್ಟನ್, ನಿಕ್ಸನ್, ಜಾರ್ಜ್ ಬುಶ್, ಬರಾಕ್ ಒಬಾಮಾ ಮುಂತಾದ ಯಶಸ್ವಿ ಅಧ್ಯಕ್ಷರನ್ನು ನೋಡಿರುವ ಅಮೆರಿಕ ಟ್ರಂಪ್ ಅವರ ಕೈಯ್ಯಲ್ಲಿ ಸಿಲುಕಿ ನರಳುತ್ತಿರುವುದು ದುರ್ದೈವದ ಸಂಗತಿಯಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಗರುಡ ವಾಹನಗಳೇ ಇಲ್ಲದ ಮೈಸೂರಿನ ಪೊಲೀಸ್ ಠಾಣೆಗಳು

ಮಾನ್ಯರೇ

ಈ ಹಿಂದೆ ಪೊಲೀಸ್ ಸ್ಟೇಷನ್‌ಗಳಲ್ಲಿ ಗರುಡ ವಾಹನಗಳಿದ್ದವು. ರಾತ್ರಿ ವೇಳೆ ಸೈರನ್ ಮಾಡಿಕೊಂಡು ಎಲ್ಲಾ ಬಡಾವಣೆಗಳಲ್ಲಿ ಈ ವಾಹನಗಳಲ್ಲೇ ಪೊಲೀಸರು ಬೀಟ್ ಮಾಡುತ್ತಿದ್ದರು. ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ಖದೀಮರನ್ನು ಹಿಡಿದು ಪೊಲೀಸ್ ಸ್ಟೇಷನ್‌ನಲ್ಲಿ ರುಬ್ಬಿ ನಂತರ ಜೈಲಿಗಟ್ಟುತ್ತಿದ್ದರು. ಗರುಡ ವಾಹನಗಳ ಸದ್ದು ಕೇಳುತ್ತಿದ್ದಂತೆ ದರೋಡೆಕೋರರು ಎದ್ದೆನೊ, ಬಿದ್ದೆನೊ ಅಂತ ಓಡುತ್ತಿದ್ದರು.

ಪ್ರಸ್ತುತ ಗರುಡ ವಾಹನಗಳಿಲ್ಲದೆ ಪೊಲೀಸ್ ಬೀಟ್‌ಗೆ ದರೋಡೆಕೋರರಾಗಲಿ, ಕಳ್ಳರಾಗಲಿ ಕ್ಯಾರೆ ಎನ್ನದಂತಾಗಿದೆ. ದರೋಡೆಕೋರರಿಗೆ ಒಂಟಿ ಯಾಗಿ ಸಿಕ್ಕವರು, ಒಂಟಿ ಮನೆಗಳೇ ಟಾರ್ಗೆಟ್. ವಿಜಯನಗರ 4ನೇ ಹಂತದಲ್ಲಿ 29/03/2026 ರಂದು ರಾತ್ರಿ ಮನೆಗಳ್ಳತನವಾಗಿದ್ದು, ರಾತ್ರಿ ಮನೆಯಲ್ಲಿ ಯಾರೂ ಇಲ್ಲದ್ದನ್ನು ನೋಡಿಕೊಂಡ ಖದೀಮರು ಆ ಮನೆ ಬಾಗಿಲು ಒಡೆದು ಮನೆಯಲ್ಲಿದ್ದ ಹಣ–ಚಿನ್ನ–ಬೆಳ್ಳಿ ಆಭರಣ ದೋಚಿದ್ದಾರೆ.

ಲಭ್ಯವಾದ ಮಾಹಿತಿ ಪ್ರಕಾರ ಮೈಸೂರು ನಗರದಲ್ಲಿ 19 ಗರುಡ ವಾಹನಗಳಿದ್ದವು. ಅವುಗಳು 15 ವರ್ಷ ಮೀರಿವೆ ಎನ್ನುವ ಕಾರಣಕ್ಕೆ ಅವೆಲ್ಲಾ ಗುಜರಿ ಸೇರಿವೆ. ಅಲ್ಲಿಂದ ಈವರೆಗೆ ಯಾವ ಪೊಲೀಸ್ ಠಾಣೆಗೂ ಗರುಡ ವಾಹನಗಳು ಬಂದಿಲ್ಲ ಎಂಬ ಮಾಹಿತಿ ಇದೆ. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಈ ದುಸ್ಥಿತಿ ಬಂದರೆ ಇನ್ನು ಬೇರೆ ಕಡೆ ಹೇಗಿರಬೇಡ. ಆದ ಕಾರಣ ಮುಖ್ಯಮಂತ್ರಿಗಳು ಮೈಸೂರು ನಗರದ ಪೊಲೀಸ್ ಠಾಣೆಗಳಿಗೆ ಅಗತ್ಯವಿರುವ ಗರುಡ ವಾಹನಗಳನ್ನು ಕೊಡಿಸಿ, ಮಿತಿ ಮೀರಿರುವ ದರೋಡೆ ಹಾಗೂ ಮನೆಗಳ್ಳತನವನ್ನು ತಡೆಯಲು ಅಗತ್ಯ ತುರ್ತುಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಮನವಿ.

– ಬಿ.ಜಿ.ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.




ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.
niveditha.manthana26@gmail.com

ಮಂಥನ


ಕರಿಯರ ನೋವಿನ ಜೀವನ ಸ್ಫೂರ್ತಿದಾಯಕ



ಮಾರ್ಟಿನ್ ಲೂಥರ್ ಕಿಂಗ್



ಚಿನುವಾ ಅಚಿಬೆ



ವೋಲೇ ಷೊಯಿಂಕಾ



ಟೋನಿ ಮಾರಿಸನ್



ಮಾಯಾ ಏಂಜಲೋ

ಸಂಪತ್ತಿನ ಆಸೆ, ಹೊಸ ಹೊಸ ದೇಶಗಳನ್ನು ಕಂಡುಹಿಡಿಯಬೇಕೆಂಬ ಹುಚ್ಚಿಗೆ ಬಿದ್ದ ಯುರೋಪಿಯನ್ನರ ಕಣ್ಣಿಗೆ ಬಿದ್ದ ಹೊಸ ಪ್ರದೇಶಗಳೆಲ್ಲವೂ ಅನುಭವಿಸಿದ ಪಾಡು ಅಷ್ಟಿಷ್ಟಲ್ಲ. ತಾವು ಕಾಲಿಟ್ಟ ಕಡೆಗೆಲ್ಲ ಅಭಿವೃದ್ಧಿಯ ಹೆಸರಿನಲ್ಲಿ ಅವರು ನಡೆಸಿದ ದೌರ್ಜನ್ಯ, ಅವತ್ತಿನವರೆಗೆ ಜಗತ್ತು ಕಂಡು ಕೇಳರಿಯದ ಅಮಾನವೀಯ ಕೃತ್ಯಗಳ ಸರಮಾಲೆ ಇಂದಿಗೂ ಎದೆ ನಡುಗಿಸುತ್ತವೆ. ಹೊಸ ಜಾಗಗಳ ಕಂಡುಹಿಡಿದು, ಅಲ್ಲಿನ ಸಂಪತ್ತನ್ನು ಲೂಟಿ ಮಾಡಿ, ಅಲ್ಲಿನ ಸ್ಥಳೀಯರ ಮೇಲೆ ಅತ್ಯಾಚಾರವೆಸಗುತ್ತಾ, ಅವರ ಸಂಸ್ಕೃತಿ, ಆಚಾರ–ವಿಚಾರಗಳ ಅವಹೇಳನ ಮಾಡುತ್ತಾ, ಅವರನ್ನು ಕೀಳಾಗಿ ಕಾಣುತ್ತಾ ಅಟ್ಟಹಾಸಗೈಯ್ಯುವುದು ಅವರ ಸಂಪ್ರದಾಯವೇ ಆಗಿಹೋಗಿತ್ತು.

ಕಗ್ಗತ್ತಲೆಯ ಖಂಡವೆನಿಸಿದ್ದ ಆಫ್ರಿಕಾಗೆ ಕಾಲಿಟ್ಟ ಬಿಳಿಯರು ಅಲ್ಲಿನ ಸ್ಥಳೀಯರ ಮಾರಣ ಹೋಮ ನಡೆಸಿ, ಅವರ ಸಂಪತ್ತನ್ನು ಲೂಟಿ ಮಾಡಿದರು. ಅಷ್ಟು ಸಾಲದೆಂಬಂತೆ ಅವರ ಸಂಸ್ಕೃತಿಯನ್ನು ಬುಡಮೇಲು ಮಾಡಿದರು. ಅಲ್ಲಿ ಅವರು ಮಾಡಿದ ಅತ್ಯಂತ ಹೇಯ ಕೆಲಸವೆಂದರೆ, ಆಫ್ರಿಕನ್ನರನ್ನು ಗುಲಾಮರಾಗಿಸಿ ಯುರೋಪಿಗೆ ಕರೆದುಕೊಂಡು ಹೋಗಿ ಅವರನ್ನು ಅತಂತ್ರರನ್ನಾಗಿ ಮಾಡಿದ್ದು, ಅವರ ಕುಟುಂಬಗಳನ್ನು ಛಿದ್ರ ಛಿದ್ರ ಮಾಡಿದ್ದು.

ಅಮೆರಿಕೆಯಂತಹಾ ಸಂಪದ್ಭರಿತ ಪ್ರದೇಶವನ್ನು ಕಂಡುಹಿಡಿದ ಮೇಲೆ, ಅಮೆರಿಕೆಯನ್ನು ತಮ್ಮಿಚ್ಛೆಯಂತೆ ರೂಪಿಸಲು, ಕಟ್ಟಿಕೊಳ್ಳಲು ಅವರಿಗೆ ಸುಲಭವಾಗಿ ಸಿಕ್ಕಿದವರು ಆಫ್ರಿಕನ್ನರು. ಪಶುಗಳಿಗಿಂತಲೂ ಕಡೆಯಾಗಿ ಅವರ ಹರಾಜು ನಡೆಸಿ, ಹಡಗುಗಳಲ್ಲಿ ತುಂಬಿಕೊಂಡು ಅಮೆರಿಕೆಗೆ ಕರೆತಂದರು. ಆ ಪ್ರಕ್ರಿಯೆಯಲ್ಲಿ ಕುಟುಂಬಗಳೇ ನಾಶವಾದವು. ಅಪ್ಪ ಅಮ್ಮ ಮಕ್ಕಳು ಬೇರೆಬೇರೆಯಾದರು.

ತಮ್ಮ ಕನಸಿನ ನ್ಯೂ ಇಂಗ್ಲೆಂಡ್ ಅನ್ನು ಕಟ್ಟಲು ಆಫ್ರಿಕನ್ನರನ್ನು ಬಳಸಿಕೊಂಡ ಯೂರೋಪಿಯನ್ನರು, ನಂತರ ಅವರ ಬದುಕನ್ನು ಅಸಹನೀಯವಾಗಿಸಿದರು. ಗುಲಾಮರನ್ನಾಗಿಸಿಕೊಂಡು ಅವರನ್ನು ತಮ್ಮ ಮನೆ ಹೊಲ ತೋಟಗಳಲ್ಲಿ ದುಡಿಯಲು ಬಳಸಿಕೊಂಡರು. ವಿಶ್ರಾಂತಿ ಇಲ್ಲದೆ, ಸರಿಯಾದ ಊಟ ನಿದ್ರೆಗಳಿಲ್ಲದೆ ದುಡಿಯುತ್ತಿದ್ದ ಅವರನ್ನು ಸಣ್ಣ ಸಣ್ಣ ತಪ್ಪುಗಳಿಗೂ ಅಮಾನವೀಯವಾಗಿ ಶಿಕ್ಷಿಸಲಾಗುತ್ತಿತ್ತು. ಕರಿಯ ಹೆಂಗಸರು ಮತ್ತು ಹುಡುಗಿಯರನ್ನು ಯುರೋಪಿಯನ್ನರು ತಮ್ಮ ತೃಷೆಗಾಗಿ ಬಳಸಿಕೊಂಡು ಮುಲಾಟೋ ಎಂಬ ಹೊಸ ಜನಾಂಗದ ಹುಟ್ಟಿಗೆ ಕಾರಣರಾದರು.

ಅಮೆರಿಕೆ ಅಭಿವೃದ್ಧಿಯಾಗತೊಡಗಿ, Dream Land ಎನಿಸಿಕೊಂಡು, ಪ್ರಪಂಚದೆಲ್ಲೆಡೆಯಿಂದ ಜನರನ್ನು ಸೆಳೆದುಕೊಳ್ಳತೊಡಗಿತು. ಆದರೆ ಅದರ ಆ ಮಟ್ಟಿಗಿನ ಬೆಳವಣಿಗೆಗೆ ಕಾರಣರಾದ ಆಫ್ರಿಕನ್ನರ ಜೀವನ ಆ ಆಧುನಿಕ ಅಮೆರಿಕೆಯಲ್ಲಿಯೂ ಬರ್ಬರವಾಗಿತ್ತು. ಗುಲಾಮಗಿರಿ ಅವರ ಜೀವನದ ಹಕ್ಕನ್ನೇ ಕಿತ್ತುಕೊಂಡಿತ್ತು.

ನಿಧಾನವಾಗಿ ಕರಿಯರೂ ತಮ್ಮ ಮೇಲಾಗುತ್ತಿರುವ ದೌರ್ಜನ್ಯಗಳನ್ನು ವಿರೋಧಿಸತೊಡಗಿ ಅವರ ದನಿ ಗಟ್ಟಿಯಾಗಿ ಒಂದಷ್ಟು ಬಿಳಿಯರೂ ಅವರ ಬೆಂಬಲಕ್ಕೆ ನಿಂತರು. ಗುಲಾಮಗಿರಿಯ ವಿರುದ್ಧ ಹೋರಾಟ ಪ್ರಾರಂಭವಾಗಿ, 1865ರಲ್ಲಿ ಅಮೆರಿಕೆಯಲ್ಲಿ ಗುಲಾಮಗಿರಿಯನ್ನು ನಿರ್ಬಂಧಿಸಲಾಯಿತು. ಅಂದಿನ ಅಮೆರಿಕೆಯ ಅಧ್ಯಕ್ಷ ಅಬ್ರಹಾಂ ಲಿಂಕನ್ ತೆಗೆದುಕೊಂಡ ನಿರ್ಧಾರ ಆಫ್ರಿಕನ್ನರ ಜೀವನವನ್ನು ಸ್ವಲ್ಪ ಮಟ್ಟಿಗೆ ಮಾತ್ರ ಬದಲಾಯಿಸಲು ಸಾಧ್ಯವಾಗಿದ್ದು ದುರದೃಷ್ಟಕರ. ಹೌದು, ಗುಲಾಮಗಿರಿಯನ್ನು ತೆಗೆದು ಹಾಕಲಾಯಿತಾದರೂ, ಕರಿಯರನ್ನು ಕುರಿತ ಬಿಳಿಯರ ಧೋರಣೆ ಬದಲಾಗಲಿಲ್ಲ.

Segregation And Discrimination ಅಂದರೆ, ಕರಿಯರನ್ನು ಪ್ರತ್ಯೇಕತೆ ಮತ್ತು ತಾರತಮ್ಯಕ್ಕೆ ಒಳಪಡಿಸಲಾಯಿತು. ಸಂವಿಧಾನ ಅವರಿಗೆ ಸಮಾನ ಹಕ್ಕುಗಳನ್ನು ನೀಡಿದರೂ, ಅದರ ಜಾರಿಯಾಗಿರಲಿಲ್ಲ. ಅಂದಿನ ದಿನಮಾನಗಳಲ್ಲಿ ಕರಿಯರು ಎದುರಿಸುತ್ತಿದ್ದ ಸಮಸ್ಯೆಗಳು ಭೀಕರವಾಗಿದ್ದವು. ಅವರಿಗೆ ಸಮಾನ ವೇತನ ದೊರೆಯುತ್ತಿರಲಿಲ್ಲ, ನಗರದ ಹೊರಭಾಗಗಳಲ್ಲಿ ಅವರ ವಸತಿಗಳಿರುತ್ತಿದ್ದವು. ಬಿಳಿಯರ ಮನೆಗಳಿದ್ದ ಕಡೆ ಅವರಿಗೆ ಮನೆ ಸ್ವಂತಕ್ಕಾಗಲೀ ಬಾಡಿಗೆಗಾಗಲೀ ದೊರೆಯುತ್ತಿರಲಿಲ್ಲ. ಬಸ್ಸು ಟ್ರೇನುಗಳಲ್ಲಿ ಸೀಟುಗಳು ಖಾಲಿಯಿದ್ದರೂ ಕೂರುವಂತಿರಲಿಲ್ಲ, ಬಹುಮಹಡಿ ಕಟ್ಟಡಗಳಲ್ಲಿ ಲಿಫ್ಟ್‌ಗಳನ್ನು ಬಳಸುವಂತಿರಲಿಲ್ಲ, ಸಾರ್ವಜನಿಕ ಈಜುಕೊಳಗಳಿಗೆ ಅವರಿಗೆ ಪ್ರವೇಶವಿರುತ್ತಿರಲಿಲ್ಲ. ಅಂಗಡಿ ಮತ್ತು ಮಾಲ್‌ಗಳಲ್ಲಿ ಅವರು ಹಿಂದಿನ ಬಾಗಿಲುಗಳನ್ನು ಬಳಸಬೇಕಿತ್ತು. ಹೋಟೆಲ್‌ಗಳಲ್ಲಿ ಬೇರೆ ಬೇರೆ ಅಂಗಡಿಗಳಲ್ಲಿ ಅವರಿಗೆ ಸೇವಾ ಸೌಲಭ್ಯವಿರುತ್ತಿರಲಿಲ್ಲ, ಬಹುತೇಕ ಲಾಡ್ಜ್‌ಗಳಲ್ಲಿ ಅವರಿಗೆ ಪ್ರವೇಶವಿರುತ್ತಿರಲಿಲ್ಲ. ಅತಿಭಯಂಕರವಾದದ್ದು ಎಂದರೆ, ಯಾವುದೇ ಬಿಳಿಯ ಚರ್ಮದವರು ಕರಿಯರ ಮೇಲೆ ದೌರ್ಜನ್ಯವೆಸಗಿ ಕೊಲೆ ಮಾಡಿದರೂ, ಅವರ ಮೇಲೆ ಪೊಲೀಸರು ಕೇಸುಗಳನ್ನು ಹಾಕುತ್ತಿರಲಿಲ್ಲ. ಶಾಲೆ ಕಾಲೇಜುಗಳಲ್ಲಿಯೂ ಇದೇ ಪರಿಸ್ಥಿತಿ. ಕರಿಯರಿಗೆ ಮತದಾನದ ಹಕ್ಕಿರಲಿಲ್ಲ.

ಇದೆಲ್ಲದರ ವಿರುದ್ಧ ಸಿಡಿದೆದ್ದ ಅಮೆರಿಕದ ಕರಿಯರ ಸಮುದಾಯ ಸಿವಿಲ್ ರೈಟ್ಸ್ ವಾರ್ ಆರಂಭಿಸಿತು. ಮಾರ್ಟಿನ್ ಲೂಥರ್, ರೋಸಾ ಪಾರ್ಕ್ಸ್, ಬಯಾರ್ಡ್ ರಸ್ಟಿನ್, ಜಾನ್ ಲೂಯಿಸ್, ಜೇಮ್ಸ್ ಫಾರ್ಮರ್, ಫಿಲಿಪ್ಸ್ ರಾಂಡಾಲ್ಫ್, ಫಿಲ್ಪ್ ಡೇವಿಡ್ ಅಬೆರ್ನಾತಿ ಸೇರಿದಂತೆ ಇನ್ನೂ ಹಲವರು ಈ ಹೋರಾಟದ ಮುಂದಾಳತ್ವ ವಹಿಸಿದ್ದರು.

ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಇದೇ ಹೋರಾಟದಲ್ಲಿ ಹುತಾತ್ಮನಾದದ್ದು ಏಪ್ರಿಲ್ 4 1968ರಲ್ಲಿ. ಗಾಂಧೀಜಿ ಅವರ ಹೋರಾಟದ ಶೈಲಿಯಿಂದ ಪ್ರಭಾವಿತನಾಗಿದ್ದ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಅಮೆರಿಕದೆಲ್ಲೆಡೆ ಸಂಚರಿಸಿ ಭಾಷಣಗಳನ್ನು ಮಾಡುತ್ತಾ, ಜನರನ್ನು ಒಟ್ಟುಗೂಡಿಸುತ್ತಿದ್ದ.

ಅಮೆರಿಕದ ಗಾಂಧಿ ಎಂದು ಕರೆಯಲ್ಪಡುತ್ತಿದ್ದ, ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಅಮೆರಿಕದ ಕರಿಯರ ಶಕ್ತಿಯಾಗಿದ್ದ. ಅವರ ವಿಮೋಚನೆಗೆ ಟೊಂಕ ಕಟ್ಟಿ ನಿಂತಿದ್ದ ಅವನು ಅವರ ಆಶಾಕಿರಣವಾಗಿದ್ದ.

ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್, ಭಾಷಣಗಳನ್ನು ಪ್ರಚೋದನಾಕಾರಿಯಾಗಿ ಮಾಡುತ್ತಿರಲಿಲ್ಲ. ಬದಲಿಗೆ ಜನರಲ್ಲಿ ಆತ್ಮವಿಶ್ವಾಸ ತುಂಬುತ್ತಾ, ತಮಗೆ ಸಿಗಬೇಕಾದ ಹಕ್ಕುಗಳಿಗೆ ಶಾಂತಿಯುತ ಹೋರಾಟ ನಡೆಸಬೇಕೆಂದು ಕೋರಿಕೊಳ್ಳುತ್ತಿದ್ದ. ತಮಗಾಗಿ ಮಿಡಿಯುವ ಬಿಳಿಯರೂ ನಮ್ಮ ಜೊತೆ ಇದ್ದಾರೆ ಎಂದು ಒತ್ತಿ ಹೇಳಿ, ಸಾಮರಸ್ಯವನ್ನು ಕಾಪಾಡುವಂತೆ ಜನರಲ್ಲಿ ಮನವಿ ಮಾಡುತ್ತಿದ್ದ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್‌ನ ಬಹಳಷ್ಟು ಪ್ರಸಿದ್ಧ ಭಾಷಣಗಳಲ್ಲಿ, I Have A Dream ಎನ್ನುವ ಭಾಷಣ ಬಹಳ ಪ್ರಸಿದ್ಧ.

ಆ ಭಾಷಣದಲ್ಲಿ ಅವನು ತಾನು ನೋಡಲಿಚ್ಛಿಸುವ ದಿನಗಳ ಕನಸುಗಳನ್ನು ಅಂದು ನೆರೆದವರೊಂದಿಗೆ ಹಂಚಿಕೊಳ್ಳುತ್ತಾನೆ.

- **ಈ ದೇಶ ಎಲ್ಲರೂ ಸಮಾನರೆಂಬುದನ್ನು ನಿಜವಾಗಿಯೂ ಆಚರಣೆಗೆ ತರಬೇಕು.**
- **ತನ್ನ ಗುಲಾಮಗಿರಿಯ ದಿನಗಳ ಒಡೆಯನ ಮಗನೊಂದಿಗೆ ಒಬ್ಬ ಕರಿಯನ ಮಗ ಜೊತೆಯಾಗಿ ಹೆಜ್ಜೆ ಹಾಕಬೇಕು.**
- **ಇಂದು ಅನ್ಯಾಯ ಅಸಮಾನತೆ, ಶೋಷಣೆಯ ಧಗೆಯಲ್ಲಿ ಬೇಯುತ್ತಿರುವ ಮಿಸ್ಸಿಸ್ಸಿಪಿ ರಾಜ್ಯದಲ್ಲಿ ಸ್ವಾತಂತ್ರ್ಯ ನ್ಯಾಯದ ಅವಿರತ ಬುಗ್ಗೆ ಹೊಮ್ಮಬೇಕು.**
- **ನನ್ನ ನಾಲ್ಕು ಮಕ್ಕಳನ್ನು ಅವರ ಚರ್ಮದ ಬಣ್ಣದಿಂದ ಜನ ಅಳೆಯದೆ, ಅವರ ಯೋಗ್ಯತೆಯಿಂದ ಅವರನ್ನು ಅಳೆಯಬೇಕು.**
- **ಜನಾಂಗೀಯತೆಯ ವಿಷಗಾಳಿಯಿರುವ ಅಲಾಬಾಮದಲ್ಲಿ ಒಂದು ದಿನ ಬಿಳಿಯರ ಮತ್ತು ಕರಿಯರ ಮಕ್ಕಳು ಕೈಕೈಹಿಡಿದು ನಡೆಯಬೇಕು.**
- **ಒಂದು ದಿನ ಸಮಾಜದಲ್ಲಿನ ಎಲ್ಲ ಮೇಲು ಕೀಳು, ತಾರತಮ್ಯ ಅಳಿದು ದೇವರ ಕೃಪೆ ಎಲ್ಲರಿಗೂ ಸಮನಾಗಿ ಸಿಗಬೇಕು.**

ಹೀಗೆ ಕರಿಯರ ಶ್ರೇಯಸ್ಸಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್‌ನನ್ನು 1968 ಏಪ್ರಿಲ್ 4ರಂದು ಸಂಜೆ 6 ಗಂಟೆ 1ನಿಮಿಷಕ್ಕೆ ಟೆನ್ನಿಸ್ಸೀ ರಾಜ್ಯದ ಮೆಂಫಿಸ್‌ನಲ್ಲಿರುವ ಲೊರ್ರೈನ್ ಮೋಟೆಲ್‌ನಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಯಿತು.

ಆದರೆ ಅವನ ಹೋರಾಟ ವ್ಯರ್ಥವಾಗಲಿಲ್ಲ. ಅಮೆರಿಕದ ಕರಿಯರಿಗೆ ಅವರಿಗೆ ಸಿಗಬೇಕಾದ ಹಕ್ಕುಗಳೆಲ್ಲವೂ ಸಿಕ್ಕಿದವು. ಗೌರವಯುತವಾದ ಜೀವನವೂ ದೊರೆಯಿತು. ನೀಗ್ರೋ, ನಿಗ್ಗರ್ಸ್ ಎಂದೆಲ್ಲಾ ತುಚ್ಛವಾಗಿ ಸಂಬೋಧಿಸಲ್ಪಡುತ್ತಿದ್ದ ಆಫ್ರಿಕನ್ನರು, ತಮ್ಮನ್ನು ತಾವು ಬ್ಲಾಕ್ಸ್ ಎಂದು ಇಂದು ಹೆಮ್ಮೆಯಿಂದ ಕರೆದುಕೊಳ್ಳುತ್ತಾರೆ. ಆಫ್ರಿಕನ್ ಅಮೆರಿಕನ್ಸ್ ಎಂದು ತಲೆಯೆತ್ತಿ ಬಾಳುತ್ತಿರುವ ಇಂದಿನ ಪೀಳಿಗೆಯ ಆತ್ಮಸಮ್ಮಾನಕ್ಕೆ ಕಾರಣ ಲೂಥರ್ ಕಿಂಗ್ ಜ್ಯೂನಿಯರ್‌ನಂತಹ ಹಲವು ಹೋರಾಟಗಾರರು. ಇಂದು ಅಮೆರಿಕೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ, ವಿಜ್ಞಾನ, ವೈದ್ಯಕೀಯ, ಕಾನೂನು, ಶಿಕ್ಷಣ, ಸಂಶೋಧನೆ, ರಾಜಕೀಯ, ವ್ಯಾಪಾರಗಳಲ್ಲಿ ಕರಿಯರು ಮೇಲುಗೈ ಸಾಧಿಸಿದ್ದಾರೆ. ಬರಾಕ್ ಒಬಾಮ ಅಮೆರಿಕೆಯ ಅಧ್ಯಕ್ಷರೇ ಆದರು.

ಶಾಲೆಯಲ್ಲಿ ಇತಿಹಾಸ ಓದುವಾಗ 2ಅಂಕದ ಪ್ರಶ್ನೆಗೆ ಉತ್ತರವಾಗಿ ಮಾತ್ರ ಅರ್ಥವಾಗಿದ್ದ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಸರಿಯಾಗಿ ಅರ್ಥವಾಗಿದ್ದು, ಪದವಿ ತರಗತಿಗಳಲ್ಲಿಯೇ. ಅದೂ, ಆಫ್ರಿಕನ್ ಅಮೆರಿಕನ್, ನೈಜೀರಿಯನ್ ಸಾಹಿತಿಗಳ ಕೃತಿಗಳನ್ನು ಓದಿದಾಗ. ವೋಲೆ ಶೋಯಿಂಕ ನ ಪದ್ಯಗಳು, ಚಿನುವಾ ಅಚಿಬೆಯ ಕಾದಂಬರಿಗಳನ್ನು ಓದಿದಾಗ ಉಂಟಾದ ಅಸಮಾಧಾನ, ಮಾನಸಿಕ ಕ್ಷೋಭೆ ಹೇಳಲಾಗದು. ಅಚಿಬೆಯ Things Fall Apart, The Anthills of Savannah, Arrow of God ಕಾದಂಬರಿಗಳನ್ನು ಓದಿದಾಗ ಬ್ರಿಟಿಷರ ಕ್ರೌರ್ಯ ಅಮಾನವೀಯತೆಯ ಬಗ್ಗೆ ಅಸಹ್ಯ ಹುಟ್ಟಿತು. Experiences of a Slave in North Carolina ಅನ್ನು ಪಾಠ ಹೇಳುವಾಗ ಉದ್ವಿಗ್ನತೆ ಉಂಟಾಗುತ್ತಿತ್ತು.

ಇವೆಲ್ಲಕ್ಕಿಂತಲೂ ಅತಿ ಹೆಚ್ಚು ಕಾಡಿದ್ದು, ನೊಬೆಲ್ ವಿಜೇತೆ ಟೋನಿ ಮಾರಿಸನ್‌ಳ The Bluest Eye ಕಾದಂಬರಿ. ಎಂಎನಲ್ಲಿ ನಮಗೆ ಪಠ್ಯವಾಗಿದ್ದ ಈ ಕಾದಂಬರಿಯನ್ನು 3–4 ಗಂಟೆಗಳಲ್ಲಿ ಓದಿ ಮುಗಿಸಿದೆ. 11 ವರುಷದ ಪುಟ್ಟ ಹುಡುಗಿ ಪೆಕೋಲಾ ಬ್ರೀಡ್ ಲವ್‌ಳ ಕತೆ ಈ ಕಾದಂಬರಿ. ಪೆಕೋಲಾ ಯಾವಾಗಲೂ ಜಗಳವಾಡುವ ಅಪ್ಪ ಅಮ್ಮನ ಕುಟುಂಬದಲ್ಲಿ ಬೆಳೆದ ಕಪ್ಪು ಹುಡುಗಿ. ಆಕೆಯ ಅಮ್ಮ ಪೌಲೀನ್‌ಳಿಗೆ ಕುಂಟು ಕಾಲು. ಸದಾ ಚಲನಚಿತ್ರಗಳ ಲೋಕದಲ್ಲಿರುವ ಆಕೆ ತನ್ನ ಕನಸಿನ ಜೀವನವನ್ನು ಅಲ್ಲಿ ಜೀವಿಸುತ್ತಿರುತ್ತಾಳೆ. ಹೊಡೆಯುವ ಗಂಡನನ್ನು ಪರೋಕ್ಷವಾಗಿ ಪ್ರೋತ್ಸಾಹಿಸುತ್ತಾ, ತಾನು ಸಂತ್ರಸ್ತೆ ಎಂದು ತೋರಿಸಿಕೊಳ್ಳಲು ಆಕೆಗೆ ಒಂದುರೀತಿ ಹೆಮ್ಮೆ! ಬಿಳಿಯರಿಂದ ತನ್ನ ಹದಿಹರೆಯದಲ್ಲಿ ಅವಮಾನಕ್ಕೊಳಗಾಗಿದ್ದ ಅವಳ ಅಪ್ಪ ಚಾಲಿ ಅಂದಿನಿಂದ ಕ್ರೂರ ಮನಸ್ಥಿತಿಯವನಾಗಿದ್ದಾನೆ. ಇಂತಹಾ ಅಪ್ಪ ಅಮ್ಮನ ನಡುವೆ, ಅಮೆರಿಕೆಯ ಓಹಾಯೋದ ಬಿಳಿಯರ ಸಮಾಜದಲ್ಲಿ ಸದಾ ಅವಹೇಳನ, ಅಪಹಾಸ್ಯ, ಅವಮಾನಗಳಿಗೆ ಗುರಿಯಾಗಿದ್ದ ಅವಳಿಗೆ ತನ್ನ ಬಣ್ಣ ಮತ್ತು ರೂಪದ ಬಗೆಗೆ ಸಂತೋಷವಿಲ್ಲ. ತಾನೂ ಬಿಳಿಯಳಾಗಿದ್ದರೆ ತನ್ನನ್ನೂ ಜನರು ಪ್ರೀತಿ ಸುತ್ತಿದ್ದರೇನೋ ಎಂಬ ಭ್ರಮೆಯಲ್ಲಿ ಆ ಪುಟ್ಟ ಹುಡುಗಿ ದೇವರಲ್ಲಿ ತನಗಾಗಿ ಗಾಢ ನೀಲಿ ಬಣ್ಣದ ಕಣ್ಣುಗಳನ್ನು ಬೇಡುತ್ತಿರುತ್ತಾಳೆ. ಬಿಳಿಯರಂತೆ ತನಗೂ ನೀಲಿ ಬಣ್ಣದ ಕಣ್ಣುಗಳಿದ್ದರೆ, ಸಮಾಜದ Acceptance ತನಗೆ ದೊರೆಯುತ್ತದೆ ಎಂಬ ಮುಗ್ಧ ನಂಬಿಕೆ ಆ ಮಗುವಿಗೆ.

ಪ್ರೀತಿಗಾಗಿಯೇ ಹಂಬಲಿಸುತ್ತಿದ್ದ ಪೆಕೋಲ ಒಂದು ವಿಷಘಳಿಗೆಯಲ್ಲಿ ತನ್ನ ಅಪ್ಪನಿಂದಲೇ ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾಗಿಬಿಡುತ್ತಾಳೆ. ಅಕಾಲಿಕ ಪ್ರಸವದಲ್ಲಿ ಆ ಮಗು ಸಾಯುತ್ತದೆ. ನಂತರವೂ ಒಮ್ಮೆ ಚಾಲಿ ಅವಳ ಮೇಲೆ ಅತ್ಯಾಚಾರವೆಸಗಿ ಓಡಿಹೋಗಿಬಿಡುತ್ತಾನೆ. ಈ ಎಲ್ಲಾ ನೋವುಗಳಿಂದ ಜರ್ಝರಿತಳಾದ ಪೆಕೋಲಾ ವಿಭ್ರಮೆಗೊಳಗಾಗಿ ಹುಚ್ಚಿಯಾಗಿಬಿಡುತ್ತಾಳೆ. ತನಗೆ ಗಾಢ ನೀಲಿ ಕಣ್ಣುಗಳು ದೊರೆತಿವೆ ಎನ್ನುವ ಭ್ರಮೆಯಲ್ಲಿ ಸಂತೋಷವಾಗಿರುವ ಪೆಕೋಲಾಳೊಂದಿಗೆ ಕಾದಂಬರಿ ಮುಗಿಯುತ್ತದೆ.

ಈ ಕಾದಂಬರಿ ಅಮೆರಿಕೆಯಲ್ಲಿ ಕರಿಯರು ಅನುಭವಿಸಿದ ಸಂಕಟಗಳನ್ನು ಒಂದು ನೆಲೆಯಲ್ಲಿ ಬಿಚ್ಚಿ ಇಡುತ್ತದೆ. ಕೇವಲ ಮೈಬಣ್ಣದ ಆಧಾರದ ಮೇಲೆ ಸೌಂದರ್ಯವನ್ನು ಅಳೆಯುವ ಬಿಳಿಯರ ಪ್ರವೃತ್ತಿ ಹೇಗೆ ಒಂದು ಜನಾಂಗವನ್ನು ಖಿನ್ನವಾಗಿಸುತ್ತಿದೆ ಎಂದು ತೋರಿಸುತ್ತದೆ. ಅದಷ್ಟೇ ಅಲ್ಲದೆ, ಬಿಳಿಯರ ದೌರ್ಜನ್ಯ ಒಂದು ಜನಾಂಗದ ಆತ್ಮವಿಶ್ವಾಸ, ಕೌಟುಂಬಿಕ ವ್ಯವಸ್ಥೆ, ಸಂಸ್ಕೃತಿ, ನಂಬಿಕೆಗಳನ್ನು ಬುಡಮೇಲು ಮಾಡಿ ಅವರನ್ನು ಅತಂತ್ರರನ್ನಾಗಿಸಿ, ಎಡಬಿಡಂಗಿಗಳನ್ನಾಗಿಸಿ ತ್ರಿಶಂಕು ಸ್ಥಿತಿಯಲ್ಲಿ ಇರಿಸಿದೆ ಎಂದು ಮನ ಮುಟ್ಟುವಂತೆ ತೆರೆದಿಡುತ್ತದೆ.

ಹಾಗೆಯೇ ಅಮೆರಿಕೆಯ ಕವಯತ್ರಿ ಮಾಯಾ ಏಂಜೆಲೋ ನನ್ನನ್ನು ಬಹಳಷ್ಟು ಕಾಡಿದವಳು. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ನೊಂದಿಗೆ ಹೋರಾಟಗಳಲ್ಲಿ ಪಾಲ್ಗೊಂಡಿದ್ದ ಈಕೆ ಅವನಿಂದ ಪ್ರಭಾವಿತಳು. ಏಪ್ರಿಲ್ 4 ಇವಳು ಹುಟ್ಟಿದ ದಿನ! I Know Why the Caged Bird Sings ಇಂದ ಪ್ರಾರಂಭಿಸಿ ಏಳು ಭಾಗಗಳಲ್ಲಿ ತನ್ನ ಆತ್ಮಕಥೆ ಪ್ರಕಟಿಸಿದ ಈಕೆ, ಹಲವಾರು ಪ್ರಬಂಧ ಸಂಕಲನಗಳು, ಕವಿತಾ ಸಂಕಲನಗಳನ್ನು ಪ್ರಕಟಿಸಿರುವ ಈಕೆಗೆ ದೊರೆತಿರುವ ಪ್ರಶಸ್ತಿಗಳು ಗೌರವಗಳು ಹಲವು. ಬಹಳಷ್ಟು ಸಂಘರ್ಷಗಳನ್ನು ಎದುರಿಸಿರುವ ಈಕೆಯ ಜೀವನ ಸ್ಫೂರ್ತಿದಾಯಕ. ಈಕೆಯ Still I Rise ಕವನ ಶೋಷಕರ ಮುಖಕ್ಕೆ ಬೀಸಿದ ಚಾಟಿ ಏಟು.

ನಾನು ಉದಾಹರಿಸಿರುವ ಇವು ಒಂದೆರಡು ತುಣುಕುಗಳಷ್ಟೇ. ಕರಿಯರ ನೋವುಗಳನ್ನು ಹೇಳುವ ವಿಪುಲ ಸಾಹಿತ್ಯ ಇಂದು ನಮ್ಮ ಮುಂದಿದೆ.

ಇದೇ ಏ.4ರಂದು ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಹುತಾತ್ಮನಾದ ದಿನ ಮೆಂಫಿಸ್‌ನ ಅದೇ ಮೋಟೆಲ್ ಬಳಿ ಶ್ರದ್ಧಾಂಜಲಿ ಅರ್ಪಿಸಿದ ಸುದ್ದಿ ಓದಿದ ಮೇಲೆ, ಇವೆಲ್ಲವೂ ನೆನಪಾದವು.

ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಕಾರ್ಯ ದೇಶದಲ್ಲೇ ವಿಶಿಷ್ಟ

ಕೇಂದ್ರದ ನಿರ್ದೇಶಕ ಡಾ.ಎನ್.ಎಲ್. ರಾಜೇಶ್ ಪ್ರಶಂಸೆ



ಮೈಸೂರು ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಕೆಎಸ್‌ಆರ್‌ಎಸ್‌ಎಸಿ ವತಿಯಿಂದ ಸ್ಥಳೀಯ ಆಡಳಿತಕ್ಕಾಗಿ ಜಿಐಎಸ್ ಆಧಾರಿತ ಮಾಹಿತಿ ತಲುಪಿಸುವ ತಾಂತ್ರಿಕ ಕಾರ್ಯಾಗಾರ ನಡೆಯಿತು.

ಮೈಸೂರು, ಏ.22(ಎಂಕೆ)– ನಿಖರ ಮಾಹಿತಿಯೊಂದಿಗೆ ಸಾರ್ವಜನಿಕರಿಗೆ ಸರ್ಕಾರಿ ಸೌಲಭ್ಯಗಳು ಸುಲಭವಾಗಿ ಲಭ್ಯವಾಗುವಂತೆ ಹಾಗೂ ಆಡಳಿತದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ)ವು ಗುಣಮಟ್ಟದ ಆ್ಯಪ್ ಮತ್ತು ವೆಬ್‌ಸೈಟ್ ಪೋರ್ಟಲ್‌ಗಳನ್ನು ಅಭಿವೃದ್ಧಿಪಡಿಸುವಲ್ಲಿ ದೇಶದಲ್ಲಿಯೇ ಮೊದಲ ಸ್ಥಾನ ಪಡೆದಿದೆ ಎಂದು ಕೇಂದ್ರದ ನಿರ್ದೇಶಕ ಡಾ.ಎನ್.ಎಲ್.ರಾಜೇಶ್ ತಿಳಿಸಿದರು.

ಮೈಸೂರು ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ಥಳೀಯ ಆಡಳಿತಕ್ಕಾಗಿ ಕೆ–ಜಿಐಎಸ್(ಕರ್ನಾಟಕ ಜಿಯೋಗ್ರಾಫಿಕ್ ಇನ್ಫಾರ್ಮೇಶನ್ ಸಿಸ್ಟಂ) ಆಧಾರಿತ ಮಾಹಿತಿಯನ್ನು ತಲುಪಿಸುವ ತಾಂತ್ರಿಕ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ(ಇ–ಆಡಳಿತ) ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಲವು ಮಹತ್ವದ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ ಎಂದರು.

ಕೆ–ಜಿಐಎಸ್ 1.0 ಆವೃತ್ತಿಯನ್ನು 2016ರಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಸುಮಾರು 600 ಜಿಐಎಸ್ ಪದರಗಳು ಮತ್ತು 20 ಲಕ್ಷ ಸರ್ಕಾರಿ ಆಸ್ತಿಗಳ ಮಾಹಿತಿ ಲಭ್ಯವಾಗುವಂತೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಇದರಲ್ಲಿ 41 ಮೊಬೈಲ್ ಅನ್ವಯಿಕೆಗಳು ಮತ್ತು 60 ವೆಬ್ ಅನ್ವಯಿಕೆಗಳು ಲಭ್ಯವಿದ್ದು, ನಾಗರಿಕರು ಮತ್ತು ಇಲಾಖೆಗಳು ಬಳಸಿಕೊಳ್ಳುತ್ತಿರುವುದಾಗಿ ತಿಳಿಸಿದರು.

ದಿಶಾಂಕ್ ಆ್ಯಪ್ ಮೂಲಕ ನಿಂತಿರುವ ಸ್ಥಳದ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂಬುದನ್ನು ತಿಳಿಯಬಹುದಾಗಿದೆ. ಅದೇ ರೀತಿ ಎರಡು ಮೂರು ದಿನಗಳ ಮುಂಚೆಯೇ ಹವಾಮಾನ ವರದಿಯನ್ನು ಆ್ಯಪ್ ಮೂಲಕ ಪಡೆಯಬಹುದಾಗಿದೆ. 2009ರಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಆಸ್ತಿಗಳ ಕುರಿತು ಜಿಯೋ ಮ್ಯಾಪಿಂಗ್ ಮಾಡಿಕೊಡಲಾಗಿತ್ತು 2022ರಲ್ಲಿ ಕೆ–ಜಿಐಎಸ್ 2.0 ಆವೃತ್ತಿಯನ್ನು ಅಭಿವೃದ್ಧಿಪಡಿಸಲಾಗಿದ್ದು, ಇದಕ್ಕೆ ಗೋಲ್ಡ್ ಅವಾರ್ಡ್ ದೊರೆತಿದೆ ಹಾಗೆಯೇ ರಾಷ್ಟ್ರೀಯ ಇ–ಆಡಳಿತ ಚಿನ್ನದ ಪ್ರಶಸ್ತಿಯು ಕೇಂದ್ರಕ್ಕೆ ಲಭಿಸಿದೆ ಎಂದು ಮಾಹಿತಿ ನೀಡಿದರು.

ಪ್ರತಿ ಜಿಲ್ಲೆ, ತಾಲೂಕು, ಗ್ರಾಮ ಪಂಚಾಯಿತಿ ತನ್ನದೇ ಆದ ವೈಶಿಷ್ಟ್ಯಗಳ ಜೊತೆಗೆ ಸ್ಥಳೀಯ ಸಮಸ್ಯೆಗಳನ್ನು ಹೊಂದಿದ್ದು, ಈ ಸಮಸ್ಯೆಗಳಿಗೆ ಭೂ ದೈಶಿಕ ದತ್ತಾಂಶದ ಮೂಲಕ ಪರಿಹಾರ ಕಂಡುಕೊಳ್ಳಲು ಹಾಗೂ ವೆಬ್ ಮತ್ತು ಮೊಬೈಲ್ ಅನ್ವಯಿಕೆಗಳನ್ನು ತಯಾರಿಸಲು ಈ ಜಿಲ್ಲಾ ಮಟ್ಟದ ಕೆ–ಜಿಐಎಸ್ 2.0 ಕಾರ್ಯಾಗಾರವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ತಿಳಿಸಿದರು.

ನಂಬರ್ ಒನ್ ಸಂಸ್ಥೆ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಅಭಿವೃದ್ಧಿಪಡಿಸಿರುವ ಅಪ್ಲಿಕೇಶನ್‌ಗಳು ಕರಾರುವಾಕ್ಕಾಗಿವೆ. ಈ ಅಪ್ಲಿಕೇಶನ್‌ಗಳು ಸುರಕ್ಷಿತವಾಗಿವೆ. ವಿವಿಧ ಇಲಾಖೆ ಅಧಿಕಾರಿ–ಸಿಬ್ಬಂದಿ ಈ ಕೇಂದ್ರಕ್ಕೆ ಭೇಟಿ ನೀಡಿ ಅಪ್ಲಿಕೇಶನ್‌ಗಳ ಕುರಿತ ಹೆಚ್ಚಿನ ಜ್ಞಾನ ಪಡೆದುಕೊಳ್ಳಿ. ದೇಶದಲ್ಲಿ ಈ ಸಂಸ್ಥೆ ಇಂದಿಗೂ ನಂ.ಒನ್ ಸ್ಥಾನವನ್ನು ಉಳಿಸಿಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಗೆ ಅನುಕೂಲ: ಸಿಸಿಎಫ್ ರವಿಶಂಕರ್ ಮಾತನಾಡಿ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಾಗಿದೆ. ದಿಶಾಂಕ್ ಆ್ಯಪ್‌ನಲ್ಲಿ ಭೂಮಿಯ ಮಾಲೀಕತ್ವದ ಬಗ್ಗೆ ತಿಳಿಯಬಹುದಾಗಿದೆ. ಅರಣ್ಯ ಇಲಾಖೆಯ ಭೂ ಗಡಿ ಸಮಸ್ಯೆ ಬಂದಾಗ ನಾವು ಈ ಕೇಂದ್ರವನ್ನು ಸಂಪರ್ಕಿಸುತ್ತೇವೆ. ಈ ಸಂಸ್ಥೆಯು ಅರಣ್ಯ ಇಲಾಖೆ ಜೊತೆಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಉಪ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್, ಡಿಸಿಪಿ ಸುಂದರ್‌ರಾಜ್, ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಉಪ ಕಾರ್ಯದರ್ಶಿ ಸವಿತಾ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಗುರುವಾರ 23 ಏಪ್ರಿಲ್ 2026

ಮಾದಕ ವ್ಯಸನದ ದುಷ್ಪರಿಣಾಮಗಳ ಬಗ್ಗೆ ಯುವ ಜನತೆಯಲ್ಲಿ ಅರಿವು ಮೂಡಿಸಿ

ಮೈಸೂರು ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್ ಸಲಹೆ



ಮೈಸೂರಲ್ಲಿ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆ ನಡೆಯಿತು.

ಮೈಸೂರು, ಏ.22(ಎಂಕೆ)– ಮಾದಕ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಯುವ ಜನತೆಯಲ್ಲಿ ಅರಿವು ಮೂಡಿಸುವಂತೆ ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆ ನಡೆಸಿದ ಅವರು, ಡ್ರಗ್ಸ್ ಹಾಗೂ ಇನ್ನಿತರೆ ಮಾದಕ ವಸ್ತುಗಳ ಬಳಕೆ ಅಪರಾಧ ಎಂಬುದರ ಬಗ್ಗೆ ಅರಿವು ಮೂಡಿಸಬೇಕು. ಹಾಗೆಯೇ ಅಮಲಿನಲ್ಲಿದ್ದಂತೆ ಕಂಡು ಬಂದವರನ್ನು ಪರೀಕ್ಷೆಗೆ ಒಳಪಡಿಸಬೇಕು ಎಂದು ಸೂಚಿಸಿದರು.

ಅಬಕಾರಿ ಇಲಾಖೆ ಅಧಿಕಾರಿಗಳು ವ್ಯಾಪಕ ಪರಿಶೀಲನೆ ನಡೆಸಬೇಕು. ಅನುಮಾನವಿದ್ದ ಸ್ಥಳಗಳಿಗೆ ರೈಡ್ ಮಾಡಬೇಕು. ಕೃಷಿ ಭೂಮಿ, ಮನೆಯ ಹಿತ್ತಲಿನಲ್ಲಿ ಗಾಂಜಾ ಗಿಡಗಳನ್ನು ಬೆಳೆಯುವ ಸಾಧ್ಯತೆಗಳು ಇರಲಿದ್ದು, ನಿಯಮಿತವಾಗಿ ರೈಡ್ ಮಾಡುವ ಮೂಲಕ ಮಾದಕ ವಸ್ತು ಬಳಕೆ ತಡೆಗಟ್ಟಬೇಕು ಎಂದರು.

ಸಾರ್ವಜನಿಕ ಸ್ಥಳಗಳಲ್ಲಿ ಬೀಡಿ–ಸಿಗರೇಟ್ ಸೇವನೆ ನಿಷೇಧವಾಗಿದ್ದು, ಸೇವನೆ ಮಾಡುವವರು ಮತ್ತು ಅವರ ಪಕ್ಕದಲ್ಲಿ ಇರುವವರಿಗೂ ಬೀಡಿ–ಸಿಗರೇಟ್ ಹೊಗೆಯಿಂದ ಆರೋಗ್ಯ ಹಾಳಾಗುತ್ತದೆ. ಆದ್ದರಿಂದ ಸಾರ್ವಜನಿಕ ಸ್ಥಳದಲ್ಲಿ ಬೀಡಿ–ಸಿಗರೇಟ್ ಸೇವನೆ ಕಂಡು ಬಂದರೆ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮದ್ಯ ವ್ಯಸನಿಗಳನ್ನು ವ್ಯಸನ ಮುಕ್ತರನ್ನಾಗಿಸಲು ರಿ–ಹ್ಯಾಬಿಟೇಶನ್ ಸೆಂಟರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಎಷ್ಟೋ ವ್ಯಸನಿಗಳು ರಿ–ಹ್ಯಾಬಿಟೇಶನ್ ಸೆಂಟರ್‌ಗಳಿಂದ ಮಾದಕ ವ್ಯಸನವನ್ನು ತ್ಯಜಿಸಿದ್ದಾರೆ ಎಂದು ತಿಳಿಸಿದರಲ್ಲದೆ ಕಳೆದ ತಿಂಗಳು ಜಿಲ್ಲೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ 80 ಜನರ ವಿರುದ್ಧ 71 ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಡಿಸಿಪಿ ಸುಂದರ್‌ರಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರಿ ಕೆಲಸ ಸಿಗದಿದ್ದರೆ ನಿರುದ್ಯೋಗ...!?

• ಯುವ ಪೀಳಿಗೆಯ ಮನೋಭಾವನೆಗೆ ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಬೇಸರ • ಖಾಸಗಿ ವಲಯದಲ್ಲಿ ಬೇಕಾದಷ್ಟು ಉದ್ಯೋಗಗಳು ಲಭ್ಯವಿದೆ; ನಿರುದ್ಯೋಗ ಈಗ ಸಮಸ್ಯೆಯೇ ಅಲ್ಲ



ಮೈಸೂರಿನ ಯುವರಾಜ ಕಾಲೇಜಿನಲ್ಲಿ ಬುಧವಾರ 2025–26ನೇ ಶೈಕ್ಷಣಿಕ ಸಾಲಿನ ಜ್ಞಾನವಾಹಿನಿ ಸಾಂಸ್ಕೃತಿಕ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ಎನ್‌ಸಿಸಿ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಚಿಂತಕ ಪ್ರೊ.ಕೃಷ್ಣೇಗೌಡರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೈಸೂರು, ಏ.22(ಬಿಎಲ್‌ಯು)– ಸರ್ಕಾರಿ ಉದ್ಯೋಗ ಸಿಗದಿದ್ದರೆ ಅದನ್ನೇ ನಿರುದ್ಯೋಗ ಎಂದು ಇಂದಿನ ಯುವಕರು ಭಾವಿಸಿದ್ದಾರೆ. ಆದರೆ ಕೆಲಸ ಮಾಡುತ್ತೇನೆ ಎಂದರೆ ಖಾಸಗಿ ಕಂಪನಿಗಳಲ್ಲಿ ವಿಫುಲ ಅವಕಾಶಗಳಿವೆ ಎಂದು ಚಿಂತಕ ಹಾಗೂ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಯುವರಾಜ ಕಾಲೇಜಿನಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಜ್ಞಾನವಾಹಿನಿ ಸಾಂಸ್ಕೃತಿಕ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ಎನ್‌ಸಿಸಿ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ಸರ್ಕಾರಿ ಉದ್ಯೋಗವೇ ಬೇಕೆಂದು ಕಾಯುತ್ತಾ ಸಮಯ ವ್ಯರ್ಥ ಮಾಡದೆ ದೊರೆತ ಉದ್ಯೋಗದಲ್ಲೇ ಬದುಕು ಸಾಗಿಸಿ ಎಂದು ಸಲಹೆ ನೀಡಿದರು.

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ 15 ಲಕ್ಷ ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇನ್ನು 10 ಲಕ್ಷ ಉದ್ಯೋಗ ಖಾಲಿ ಇವೆ. ಆದರೆ ಯುವಕ, ಯುವತಿಯರು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡಲು ನಿರಾಸಕ್ತಿ ತೋರುತ್ತಿದ್ದಾರೆ. ಇದನ್ನು ಅವಲೋಕಿಸಿದರೆ ವಾಸ್ತವವಾಗಿ ನಿರುದ್ಯೋಗ ಸಮಸ್ಯೆಯೇ ಇಲ್ಲ ಎಂದು ಪ್ರೊ.ಕೃಷ್ಣೇಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕೌಶಲ್ಯ ತರಬೇತಿ ಕೇಂದ್ರವಿದ್ದು, ಇಲ್ಲಿ ತರಬೇತಿ ಪಡೆದ ಒಂದು ತಿಂಗಳಿಗೆ ಉದ್ಯೋಗಾವಕಾಶ ಖಚಿತ. ಆದರೆ ತರಬೇತಿ ಪಡೆಯಲು ಯುವಕರು ನಿರಾಸಕ್ತಿ ತೋರುತ್ತಿದ್ದಾರೆ. ಇತ್ತೀಚಿಗೆ ತರಬೇತಿಗೆ ಅರ್ಜಿ ಆಹ್ವಾನಿಸಿದ ಸಂದರ್ಭದಲ್ಲಿ 1,460 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆದರೆ ಇವರಲ್ಲಿ 412 ಮಂದಿ ಮಾತ್ರ ತರಬೇತಿ ಪಡೆದರು ಎಂದರು.

ಉದ್ಯೋಗವಿಲ್ಲ ಎಂಬ ಕಾರಣದಿಂದ ರಾಜ್ಯ ಸರ್ಕಾರದ ಯುವ ನಿಧಿಗೆ 2.80 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಆದರೆ ಇಲ್ಲಿ ಉದ್ಯೋಗವಿದ್ದರೂ ಕೆಲಸಕ್ಕೆ ಹೋಗಲು ಮೀನಾಮೇಷ ಎಣಿಸುತ್ತಿದ್ದಾರೆ. ಕೆಲಸ ಮಾಡುತ್ತೇನೆ ಎಂದರೆ ವಿಫುಲ ಅವಕಾಶವಿದೆ. ಆದರೆ ಸಾಕಷ್ಟು ಮಂದಿ ಸರ್ಕಾರಿ ಕೆಲಸ ನೆಚ್ಚಿಕೊಂಡು ಸಮಯ ವ್ಯರ್ಥ ಮಾಡುತ್ತಿದ್ದಾರೆ. ಇವರ ಪ್ರಕಾರ ಸರ್ಕಾರಿ ಕೆಲಸ ಸಿಗದಿರುವುದೇ ನಿರುದ್ಯೋಗ ಎಂದು ವ್ಯಾಖ್ಯಾನಿಸಿದ್ದಾರೆ ಎಂದರು.

ಪ್ರಸ್ತುತ ಜ್ಞಾನ ಮತ್ತು ಕೌಶಲ್ಯವಿದ್ದರೆ ವಿಶ್ವವೇ ಕೈಬೀಸಿ ಕರೆಯುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಜನೆಯ ಜೊತೆಗೆ ಜ್ಞಾನ ಹಾಗೂ ಕೌಶಲ್ಯವನ್ನು ಮೈಗೂಡಿಸಿಕೊಳ್ಳಬೇಕು. ಇದೊಂದಿದ್ದರೆ ಉದ್ಯೋಗಕ್ಕಾಗಿ ಪರದಾಡುವ ಪ್ರಮೇಯವಿರುವುದಿಲ್ಲ ಎಂದು ಸಲಹೆ ನೀಡಿದರು.

1950ರ ನಂತರ ಅಮೆರಿಕ ವಿಶ್ವದಲ್ಲೇ ಸೂಪರ್‌ಪವರ್ ಆಗಲಿದೆ ಎಂದು ವಿಶ್ವೇಶ್ವರಯ್ಯ ಅವರೇ ಹೇಳಿ ದ್ದರು. ಅದರಂತೆ ಅಮೆರಿಕ ಜನರು ಶ್ರಮವಹಿಸಿ ದುಡಿಮೆ ಮಾಡಿ ಹಣ ಸಂಪಾ ದಿಸಿದರು. ಅಂದು ಅತಿಯಾಗಿ ಮಾಡಿದ ಸಂಪತ್ತು ಆ ದೇಶವನ್ನು ಹಾಳು ಮಾಡು ತ್ತಿದೆ. ಇತ್ತೀಚಿನ ಪೀಳಿಗೆಯ ಜನರಲ್ಲಿ ಜ್ಞಾನ ವಿಲ್ಲ, ದುಡಿಮೆ ಮಾಡುತ್ತಿಲ್ಲ ಎಂದರು.

ವೀಕ್ ಎಂಡ್ ಕಲ್ಚರ್‌ನಲ್ಲಿ ಐಷಾರಾಮಿ ಜೀವನಕ್ಕೆ ಒಗ್ಗಿಕೊಂಡಿದ್ದಾರೆ. ಮಾದಕ ವಸ್ತುಗಳ ಸೇವನೆಗೆ ಒಳಗಾಗಿ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಭಾರತದಲ್ಲಿ ಈಗ ಪರಿಚಯಗೊಂಡಿರುವ ವೀಕ್ ಎಂಡ್ ಕಲ್ಚರ್ ಹಲವು ವರ್ಷಗಳ ಹಿಂದೆಯೇ ಅಮೆರಿಕದಲ್ಲಿ ಇದೆ. ಪ್ರಸ್ತುತ ಅಮೆರಿಕದಲ್ಲಿ ಕೆಲಸ ಮಾಡುವವರಿಲ್ಲ. ಭಾರತ ಸೇರಿದಂತೆ ವಿಶ್ವದ ಹಲವು ದೇಶಗಳ ಜ್ಞಾನವಂತರಿಗೆ ಉದ್ಯೋಗಾವಕಾಶ ನೀಡಿ ಸೂಪರ್ ಪವರ್ ಎನಿಸಿಕೊಂಡಿದೆ ಎಂದು ಅಭಿಪ್ರಾಯಪಟ್ಟರು. ಈ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್. ಮಹದೇವ ಮೂರ್ತಿ, ಆಡಳಿತಾಧಿಕಾರಿ ಪ್ರೊ.ಹೆಚ್.ಎಸ್. ಜಯಂತ್, ಜ್ಞಾನವಾಹಿನಿ ಸಮಿತಿ ಸಂಚಾಲಕ ಡಾ.ಸಿ.ಡಿ.ಪರಶುರಾಮ್, ಪ್ರತಿಭಾನ್ವೇಷಣೆ ಸಹಸಂಚಾಲಕಿ ಡಾ.ರೂಬಿ ಸೆಲೆಸ್ಟೀನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿ ಉದ್ಯೋಗ ಮೇಳ

ಮೈಸೂರು, ಏ.22(ಜಿಎ)–ಸಿಐಐನ ಯಂಗ್ ಇಂಡಿಯನ್ಸ್ ವಿಭಾಗದ ವತಿಯಿಂದ ಏ.25ರಂದು ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿ ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಅಧ್ಯಕ್ಷೆ ಪ್ರಿಯಾಂಕಾ ಶ್ರೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 3500 ಉದ್ಯೋಗಾವಕಾಶಗಳು ಇದ್ದು, ವಿಶೇಷ ಚೇತನರು, ಮಹಿಳೆಯರಿಗೆ ವಿಶೇಷ ಒತ್ತು ನೀಡಲಾಗುತ್ತಿದೆ ಎಂಜಿನಿಯರಿಂಗ್, ಕಲೆ, ಆತಿಥ್ಯ, ಅರೆ ವೈದ್ಯಕೀಯ, ಕೈಗಾರಿಕೆ ಮೊದಲಾದ ಕ್ಷೇತ್ರಗಳಲ್ಲಿ ಇರುವ ವಿಪುಲ ಅವಕಾಶಗಳನ್ನು ಇಲ್ಲಿ ಪಾಲ್ಗೊಳ್ಳುವ ಮೂಲಕ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. 50ಕ್ಕೂ ಹೆಚ್ಚು ಪ್ರಮುಖ ಕಂಪನಿಗಳು ಇಲ್ಲಿ ಪಾಲ್ಗೊಂಡು ತಮಗೆ ಅಗತ್ಯವಾದ ಉದ್ಯೋಗಗಳಿಗೆ ನೇಮಕಾತಿ ಮಾಡಿಕೊಳ್ಳಲಿವೆ. ಹೆಚ್ಚಿನ ಮಾಹಿತಿಗೆ ದೂ. 95356 39537 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸುಜಯ್, ಚರಣ್ ಉಪಸ್ಥಿತರಿದ್ದರು.

ಮದನ್ ಮಾದೇಶ್‌ಗೆ ಅಭಿನಂದನೆ...



ಜೆಡಿಎಸ್ ಮೈಸೂರು ಯುವ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮದನ್ ಮಾದೇಶ್ ಅವರನ್ನು ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಯುವ ಮುಖಂಡರಾದ ಪಡುವಾರಹಳ್ಳಿ ಕೃಷ್ಣ, ಬಸವೇಶ್ವರ ಟ್ರಸ್ಟ್ ಅಧ್ಯಕ್ಷ ಮರೀಗೌಡ, ರಾಮಣ್ಣ ಸರೋಜ, ಆರ್.ಸತ್ಯನಾರಾಯಣ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮೈಸೂರು ಮಹಾ ನಗರಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್ ಉಪಸ್ಥಿತರಿದ್ದರು.

ವಾಲ್ಮೀಕಿ ಸಮುದಾಯ ಭವನ ಉದ್ಘಾಟನೆ...



ವರುಣಾ ಕ್ಷೇತ್ರದ ನಗರ್ಲೆ ಗ್ರಾಮದಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ವಾಲ್ಮೀಕಿ ಸಮುದಾಯ ಭವನ ಹಾಗೂ ಶಾಲಾ ಕೊಠಡಿಗಳ ಉದ್ಘಾಟನೆ, 40 ಲಕ್ಷ ವೆಚ್ಚದ ಶ್ರೀರಾಮಮಂದಿರ ನಿರ್ಮಾಣಕ್ಕೆ ಗುದ್ದಲಿಪೂಜೆಯನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ನೆರವೇರಿಸಿದರು. ಈ ಸಂದರ್ಭದಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಾರಾಯಣನಾಯ್ಕ, ನರಸಿಂಹಮೂರ್ತಿ, ಅಲ್ತಾಫ್ ಪಾಷಾ, ಆಪ್ತ ಸಹಾಯಕರಾದ ಪ್ರದೀಪ್‌ಕುಮಾರ್, ಮಹೇಶ್ ಉಪಸ್ಥಿತರಿದ್ದರು.

ಕಬ್ಬಿಗೆ ಸರ್ಕಾರದ ಪಾಲು 50 ರೂ. ಏ.29ರೊಳಗೆ ಬಿಡುಗಡೆ ಭರವಸೆ; ಪ್ರತಿಭಟನೆ ಕೈಬಿಟ್ಟ ರೈತರು



ಮೈಸೂರಲ್ಲಿ ಕಬ್ಬು ಬೆಳೆಗಾರರು ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಆಗಮಿಸಿ, ಅಹವಾಲು ಆಲಿಸಿದರು.

ಮೈಸೂರು, ಏ.22(ಎಂಟಿವೈ)– ಟನ್ ಕಬ್ಬಿಗೆ ಘೋಷಣೆಯಾಗಿದ್ದ ಹೆಚ್ಚುವರಿ 100 ರೂ.ನಲ್ಲಿ ಸರ್ಕಾರದ ಪಾಲು 50 ರೂ.ಗಳನ್ನು ಏ.29ರೊಳಗಾಗಿ ರೈತರ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ನೀಡಿದ ಭರವಸೆ ಮೇರೆಗೆ ಕಬ್ಬು ಬೆಳೆಗಾರರು ಪ್ರತಿಭಟನೆಯ ತಾತ್ಕಾಲಿಕವಾಗಿ ಕೈಬಿಟ್ಟಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿಕ ಕಳೆದ ಎರಡು ದಿನಗಳಿಂದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಅಹೋರಾತ್ರಿ ಧರಣಿ ನಡೆಸುತ್ತಿದ್ದ ಕಬ್ಬು ಬೆಳೆಗಾರರು ಜಿಲ್ಲಾಧಿಕಾರಿಗಳು ನೀಡಿದ ಭರವಸೆ ಮೇರೆಗೆ ಪ್ರತಿಭಟನೆಯಿಂದ ಇಂದು ಹಿಂದೆ ಸರಿದರು.

ಪ್ರತಿಭಟನಾಕಾರರ ಅಹವಾಲು ಆಲಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಕಬ್ಬಿಗೆ ರಾಜ್ಯ ಸರ್ಕಾರ ಹೆಚ್ಚುವರಿ 100 ರೂ. ನಿಗದಿ ಮಾಡಿತ್ತು. ಅದರಲ್ಲಿ ಸಕ್ಕರೆ ಕಾರ್ಖಾನೆಗಳು 50 ರೂ., ಸರ್ಕಾರ 50 ರೂ. ಪಾವತಿಸುವ ಆದೇಶ ಹೊರಡಿಸಿತ್ತು. ಆದರೆ, ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟದವರು ಸರ್ಕಾರದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುವ ಕಾರಣ ಪ್ರಕರಣ ತೀರ್ಮಾನವಾಗುವವರೆಗೆ ಹಣ ಪಾವತಿ ಸಾಧ್ಯವಿಲ್ಲ ಎಂದು ಕಾರ್ಖಾನೆಯವರು ತಿಳಿಸಿದ್ದಾರೆ. ಆದರೆ ಸರ್ಕಾರದ ವತಿಯಿಂದ ಪಾವತಿಸಬೇಕಾದ ಟನ್‌ಗೆ ರೂ.50 ರೈತರ ಖಾತೆಗೆ ಏಪ್ರಿಲ್ 29ರೊಳಗಾಗಿ ಜಮಾ ಆಗಲಿದೆ. ಚಳುವಳಿ ಕೈಬಿಡಿ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಸರ್ಕಾರದ ಎಲ್ಲಾ ಆದೇಶಗಳಿಗೂ ಕಾರ್ಖಾನೆಯವರು ತಡೆಯಾಜ್ಞೆ ತರುತ್ತಾರೆ. ಈ ರೀತಿ ಆದರೆ ರೈತರಿಗೆ ನ್ಯಾಯ ಹೇಗೆ ಸಿಗುತ್ತದೆ. ಉಚ್ಚ ನ್ಯಾಯಾಲಯದಲ್ಲಿ ಒಬ್ಬರು ನ್ಯಾಯಾಧೀಶರು ಮೂರು ತಿಂಗಳ ಹಿಂದೆ ಇದೇ ಆದೇಶಕ್ಕೆ ಸಂಬಂಧಿಸಿದಂತೆ ತಡೆಯಾಜ್ಞೆ ನೀಡುವುದಿಲ್ಲ ಎಂದಿದ್ದರು. ಇದೇ ಉಚ್ಚ ನ್ಯಾಯಾಲಯದ ಮತ್ತೊಬ್ಬ ನ್ಯಾಯಾಧೀಶರು ಈ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಗುಜರಾತ್‌ನಲ್ಲಿ ಒಂದು ಟನ್ ಕಬ್ಬಿಗೆ 5 ಸಾವಿರ ರೂ. ಪಾವತಿಸಿದ್ದಾರೆ. ಬಳ್ಳಾರಿ ಕಾರ್ಖಾನೆಯವರು ಟನ್ ಕಬಿಗೆ 3400 ರೂ. ಕೊಡಲು ಕಷ್ಟ ಎನ್ನುತ್ತಾರೆ. ರೈತರಿಗೆ ನ್ಯಾಯ ಸಿಗುತ್ತಿಲ್ಲ. ಆದರೂ ಜಿಲ್ಲಾಧಿಕಾರಿಗಳು ನೀಡಿದ ಭರವಸೆ ಮೇರೆಗೆ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆಯುತ್ತಿರುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಮುಖಂಡರಾದ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಸೋಮಶೇಖರ್, ಮಾರ್ಬಳ್ಳಿ ನೀಲಕಂಠಪ್ಪ, ವರಕೋಡು ನಾಗೇಶ್, ಕುರುಬೂರು ಸಿದ್ದೇಶ್, ಲಕ್ಷ್ಮೀಪುರ ವೆಂಕಟೇಶ್, ಕೆಂಡಗಣ್ಣಪ್ಪ, ಪ್ರಸಾದ್ ನಾಯಕ, ಮಹದೇವಸ್ವಾಮಿ, ನಾಗೇಶ್, ಬಸವರಾಜ, ಮಹಾದೇವು, ನಾಗೇಂದ್ರ, ಅಂಬಳೆ ಮಂಜುನಾಥ್, ಸುನೀಲ್, ಜಯರಾಮು, ನಂಜುಂಡಸ್ವಾಮಿ, ಶಿವಣ್ಣ, ಬಾಲು, ಸತೀಶ್, ಕಮಲಮ್ಮ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಒಳ ಮೀಸಲಾತಿ ವಿಚಾರದಲ್ಲಿ ಪರಿಶಿಷ್ಟ ಐಕ್ಯತೆಗೆ ಧಕ್ಕೆ ತರುವ ಯತ್ನ

ಬಂಜಾರ ಯುವಕರ, ವಿದ್ಯಾರ್ಥಿ ಸಂಘದ ರಾಜ್ಯಾಧ್ಯಕ್ಷ ಗಿರೀಶ್ ಆಕ್ರೋಶ


ಮೈಸೂರು, ಏ.22(ಜಿಎ)–ಕೆಲವರು ಬಂಜಾರ, ಭೋವಿ, ಕೊರಚ, ಕೊರಮ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡಬೇಕೆಂದು ಆಗ್ರಹಿಸಿ ವಿನಾಕಾರಣ ಹೇಳಿಕೆ ನೀಡುತ್ತ ಪರಿಶಿಷ್ಟರ ಐಕ್ಯತೆಗೆ ಧಕ್ಕೆ ತರುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಬಂಜಾರ ಯುವಕರ ಮತ್ತು ವಿದ್ಯಾರ್ಥಿ ಸಂಘದ ರಾಜ್ಯಾಧ್ಯಕ್ಷ ಡಿ.ಆರ್.ಗಿರೀಶ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ತರುವ ಜೊತೆಗೆ ಸಮಾಜದಲ್ಲಿ ಗೊಂದಲ ಹಾಗೂ ಪರಸ್ಪರ ದ್ವೇಷಕ್ಕೆ ಕಾರಣವಾಗುತ್ತವೆ. ಸರ್ಕಾರ ಸಹ ಯಾವುದೇ ಒಂದು ಸಮುದಾಯವನ್ನು ಓಲೈಸುವ ಸಲುವಾಗಿ ಒಳ ಮೀಸಲಾತಿ ವಿಷಯದಲ್ಲಿ ಆತುರದ ನಿರ್ಧಾರ ಕೈಗೊಳ್ಳಬಾರದು. ಕೇಂದ್ರ ಸರ್ಕಾರ 2026–27ನೇ ಸಾಲಿನಲ್ಲಿ ನಡೆಸುವ ಸಮಗ್ರ ಜಾತಿಗಣತಿ ವರದಿ ಬಂದ ಮೇಲೆ ಒಳಮೀಸಲಾತಿ ವಿಷಯದಲ್ಲಿ ನಿರ್ಧಾರ ಕೈಗೊಳ್ಳಬೇಕು. ಇದೇ ಏ.24ರಂದು ಕರೆದಿರುವ ವಿಶೇಷ ಸಂಪುಟ ಸಭೆಯಲ್ಲಿ ಹಿಂದಿನ ಶೇ.50ರ ಮೀಸಲಾತಿ ಅನ್ವಯ ರಾಜ್ಯದಲ್ಲಿ ಖಾಲಿ ಇರುವ 56,432 ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಬೇಕೆಂದು ಆಗ್ರಹಿಸಿದರು.

ಬ್ರಿಟಿಷ್ ಸರ್ಕಾರದ ಆಡಳಿತ ಅವಧಿಯಲ್ಲಿ 1871ರಲ್ಲಿ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳನ್ನು ಕ್ರಿಮಿನಲ್ ಟ್ರೈಬ್ಸ್ ಅಥವಾ ಅಪರಾಧ ಬುಡಕಟ್ಟುಗಳು ಎಂಬ ಹಣೆಪಟ್ಟಿ ಕಟ್ಟಿ ಶಿಕ್ಷಣ, ಉದ್ಯೋಗ ಮತ್ತು ಇತರೆ ಸಾಮಾಜಿಕ ಅವಕಾಶಗಳಿಂದ ದೂರ ಇಟ್ಟು, ಅಸ್ಪೃಶ್ಯರ ಜೊತೆಗೆ ಕಳ್ಳರು ಎನ್ನುವ ಆರೋಪ ಕಟ್ಟಿ ನಾಗರಿಕ ಸಮಾಜದಿಂದ ದೂರವಾಗಿ ದಟ್ಟ ಅರಣ್ಯಗಳಲ್ಲಿ ಜೀವಿಸುವಂತೆ ಮಾಡಲಾಗಿತ್ತು. ಸಾಮಾಜಿಕ ಹರಿಕಾರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ದಮನಿತ ವರ್ಗಗಳಿಗೆ ಶಿಕ್ಷಣ, ಉದ್ಯೋಗ ಪ್ರಾತಿನಿಧ್ಯ ನೀಡಬೇಕೆಂದು ಇವರಿಗೆ ದಮನಿತರ ಪಟ್ಟಿಗೆ ಸೇರಿಸಿ ಅನುಕೂಲ ಮಾಡಿಕೊಟ್ಟರು. ಈ ಸಮುದಾಯಗಳ 1950ರ ರಾಷ್ಟ್ರಪತಿಗಳ ಆದೇಶದ ಅನ್ವಯ ಮಿಸಲಾತಿ ಪಟ್ಟಿಯಲ್ಲಿ ಸೇರ್ಪಡೆಗೊಂಡಿವೆ. ಇದರಲ್ಲಿ ಯಾವುದೇ ಅಸಂವಿಧಾನಿಕ ಹಾಗೂ ಕಾನೂನುಬಾಹಿರ ಅಂಶಗಳಿಲ್ಲ ಎಂಬುದನ್ನು ಟೀಕಿಸುವವರು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಮುದಾಯಗಳ ಕಾನೂನು ಬದ್ಧವಾಗಿ ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳನ್ನು ತಮ್ಮ ಅರ್ಹತೆ ಆಧಾರದ ಮೇಲೆ ಪಡೆದುಕೊಳ್ಳುತ್ತಿವೆಯೇ ಹೊರತು, ಉದ್ಯೋಗ ದೋಚುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಉಮಾ ಮಹೇಶ್ವರ್ ನಾಯ್ಕ್, ರಮೇಶ್ ನಾಯ್ಕ್, ರವಿನಾಯ್ಕ್, ಚಂದ್ರಪ್ರಕಾಶ್, ಮಂಜುನಾಯ್ಕ್, ಸಂತೋಷ್ ನಾಯ್ಕ್, ಲಿಂಗಾನಾಯ್ಕ್ ಉಪಸ್ಥಿತರಿದ್ದರು.

ಬಸವೇಶ್ವರ ದೇವರ ವಿಶೇಷ ಪೂಜೆ



ಮೈಸೂರಿನ ಬೋಗಾದಿ ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ಆಯೋಜಿಸಿದ್ದ ಬಸವೇಶ್ವರ ದೇವರ ವಿಶೇಷ ಪೂಜೆ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಪಾಲ್ಗೊಂಡಿದ್ದರು. ಈ ವೇಳೆ ಬೋಗಾದಿ ಯಜಮಾನರು, ಗ್ರಾಮಸ್ಥರು ಅವರನ್ನು ಅಭಿನಂದಿಸಿದರು.

ಅಭಿನಂದನೆ...



ಮಾಜಿ ಉಪಮೇಯರ್, ಮೈಸೂರು ನಗರ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ಅವರ ನಿವಾಸಕ್ಕೆ ಭೇಟಿ ನೀಡಿದ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಕಸ್ತೂರಿರತ್ನ, ಸನ್ಮತಿ, ಅಂಜನ್‌ಕುಮಾರ್ ಅಮಿತ್‌ರಾಜ್, ತೇಜರಾಜ್, ಡಾ.ನವೀನ್, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಮಹದೇವಯ್ಯ, ಸುರೇಶ್ ಆಲನಹಳ್ಳಿ, ಚಾಮುಂಡೇಶ್ವರಿ ಮಂಡಲ ಅಧ್ಯಕ್ಷ ರಾಕೇಶ್‌ಭಟ್ ಉಪಾಧ್ಯಕ್ಷ ಶಿವು ಪಾಟೀಲ್, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಪ್ರತಾಪ್, ಸಂಚಾಲಕರಾದ ಮಹೇಶ್, ಮಹದೇವ್, ರಾಜೇಶ್, ತ್ರಿಶೂಲ್, ನಾಗರಾಜು ಇತರರು ಉಪಸ್ಥಿತರಿದ್ದರು.

ಎಂ.ಮೇಘನಾಗೆ ಪಿಹೆಚ್.ಡಿ ಪದವಿ



ಮೈಸೂರು: ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಜೈವಿಕ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಜಿ.ಜೆ.ಸತೀಶ ಅವರ ಮಾರ್ಗದರ್ಶನದಲ್ಲಿ ಸ್ಕಾಡೋಕ್ಸಸ್ ಮಲ್ಟಿಫ್ಲೋರ್ಸ್ ಬಲ್ಬ್‌ಗಳಿಂದ ಐಸೋಲೇಷನ್, ಪ್ಯೂರಿಫಿಕೇಶನ್, ಜೈವಿಕ ರಾಸಾಯನಿಕ ಚಟುವಟಿಕೆಗಳು ಇಫ್ ಲೆಕ್ಟಿನ್ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯದಿಂದ ಜೈವಿಕ ರಸಾಯನಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿ ನೀಡಿದೆ. ಮೇಘನಾ ಅವರು ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಕಾಲೇಜಿನಲ್ಲಿ ಮುಖ್ಯಸ್ಥೆ ಹಾಗೂ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಮೈಸೂರಿನ ಶ್ರೀಮತಿ ಇಂದಿರಾ ಮತ್ತು ಮಹೇಂದ್ರ ಎಂ.ಎ ದಂಪತಿ ಪುತ್ರಿ.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ...



ಮೈಸೂರಿನ ವಿದ್ಯಾರಣ್ಯಪುರಂ ಜ್ಞಾನಜ್ಯೋತಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಬಳಗದ ಆಶ್ರಯದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಜೋಗಿ ಮಹೇಶ್, ಸಮಿತಿ ಅಧ್ಯಕ್ಷ ಶಂಕರ್, ಮಂಜುನಾಥ್, ಮೋಹನ್, ನಾಗೇಶ್, ಸಾಗರ್, ಶರತ್, ದೀಪು, ಹರ್ಷಿತ್, ಸಂದೇಶ್, ಚರಣ್, ಯಶವಂತ್, ಜ್ಞಾನೇಶ್ವರ್, ನವೀನ್, ದರ್ಶನ್, ಅಕ್ಷತ್, ಧನುಷ್, ಪ್ರತೀಕ್, ಶ್ರವಣ್, ಪ್ರದೀಪ್, ಕಿಶೋರ್, ಕಾರ್ತಿಕ್ ಇನ್ನಿತರರಿದ್ದರು.

ಕಳಂಕ ತರದೆ ಸಮಾಜಮುಖಿಯಾಗಿ ಕೆಲಸ ಮಾಡಿ

ಡಿಸಿಪಿ ಸಿದ್ದನಗೌಡ ವೈ.ಪಾಟೀಲ ಸಲಹೆ



ಜ್ಞಾನಬುತ್ತಿ ಉಚಿತ ತರಬೇತಿ ಸಂಸ್ಥೆ ಆಯೋಜಿಸಿದ್ದ ಸಮಾರಂಭದಲ್ಲಿ ಪಿಸಿ, ಪಿಎಸ್‌ಐ ಸ್ಪರ್ಧಾತ್ಮಕ ಪರೀಕ್ಷಾ ಅಧ್ಯಯನ ಪುಸ್ತಕವನ್ನು ಮೈಸೂರು ನಗರ ಪೊಲೀಸ್ ಮೀಸಲು ಪಡೆಯ ಡಿಸಿಪಿ ಸಿದ್ದನಗೌಡ ವೈ. ಪಾಟೀಲ ಬಿಡುಗಡೆ ಮಾಡಿದರು.

ಮೈಸೂರು, ಏ.22(ಬಿಎಲ್‌ಯು)– ಉನ್ನತ ಹುದ್ದೆ ಅಲಂಕರಿಸಿದ ನಂತರ ಕಳಂಕ ತರದೆ ಸಮಾಜಮುಖಿಯಾಗಿ ಕೆಲಸ ಮಾಡಬೇಕು ಎಂದು ಮೈಸೂರು ನಗರ ಪೊಲೀಸ್ ಮೀಸಲು ಪಡೆಯ ಡಿಸಿಪಿ ಸಿದ್ದನಗೌಡ ವೈ. ಪಾಟೀಲ ಅವರು ಸಲಹೆ ನೀಡಿದರು.

ಮೈಸೂರಿನ ಲಕ್ಷ್ಮೀಪುರಂ ಶಾಲೆ ಆವರಣದಲ್ಲಿ ಜ್ಞಾನಬುತ್ತಿ ಉಚಿತ ತರಬೇತಿ ಸಂಸ್ಥೆ ಆಯೋಜಿಸಿದ್ದ ಸಮಾರಂಭದಲ್ಲಿ ಪಿಸಿ ಮತ್ತು ಪಿಎಸ್‌ಐ ಸ್ಪರ್ಧಾತ್ಮಕ ಪರೀಕ್ಷಾ ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಾಧನೆ ಎಂಬುದು ಅಂತಿಮ ಗುರಿಯಲ್ಲ, ಅದು ನಿರಂತರ ಪಯಣ ಎಂದು ಅಭಿಪ್ರಾಯಪಟ್ಟರು.

ವಸ್ತುನಿಷ್ಠವಾಗಿ ಪ್ರತಿಯೊಂದು ವಿಚಾರ ಮಂಥನ ಮಾಡಬೇಕು. ಇಂಟರ್ ನೆಟ್‌ನಲ್ಲಿ ಹಲವು ಮಾಹಿತಿ ದೊರೆತರೂ ಇಲ್ಲಿ ದೊರೆಯುವ ಮಾರ್ಗದರ್ಶನ ಬಹಳ ಮುಖ್ಯವಾಗಿರುತ್ತದೆ ಎಂದು ಹೇಳಿದರು.

ಕೆಲವರು ಲಕ್ಷಾಂತರ ಹಣ ವೆಚ್ಚ ಮಾಡಿ ತರಬೇತಿ ಪಡೆಯುತ್ತಾರೆ. ಆದರೆ ಜ್ಞಾನಬುತ್ತಿ ಸಂಸ್ಥೆ ಉಚಿತವಾಗಿ ತರಬೇತಿ ನೀಡುತ್ತಿದ್ದು, ಇದರ ಸದುಪಯೋಗ ಪಡಿಸಿಕೊಂಡು ಗುರಿ ಸಾಧಿಸಿ ಎಂದು ಸಿದ್ದನಗೌಡ ವೈ.ಪಾಟೀಲ ಕಿವಿಮಾತು ಹೇಳಿದರು.

ನಂತರ ಮಾತನಾಡಿದ ಕರ್ನಾಟಕ ಪೊಲೀಸ್ ಅಕಾಡೆಮಿ ಸಹಾಯಕ ನಿರ್ದೇಶಕ ಎಸ್.ಎನ್.ಸಂದೇಶ್ ಕುಮಾರ್, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ದೃಢ ನಿಶ್ಚಯ, ಸಮಯ ನಿರ್ವಹಣೆ, ನಿರಂತರ ಅಭ್ಯಾಸ ಅತ್ಯಗತ್ಯ ಎಂದು ಸಲಹೆ ನೀಡಿದರು.

ಸವಾಲುಗಳು ಎದುರಾದಷ್ಟು ಮನುಷ್ಯ ಮತ್ತಷ್ಟು ಬಲಗೊಳ್ಳುತ್ತಾನೆ, ಮಾನಸಿಕವಾಗಿ ಗಟ್ಟಿತನ ಹೊಂದುತ್ತಾನೆ. ಮನೆಯಲ್ಲಿ ಆರ್ಥಿಕ ತೊಂದರೆ ಇದ್ದು, ಏಕಾಗ್ರತೆ ಸಾಧ್ಯವಾಗುತ್ತಿಲ್ಲ ಎಂದು ಕೆಲವರು ಗುರಿಯಿಂದ ಪಲಾಯನ ಮಾಡುತ್ತಾರೆ. ಆದರೆ ಇಂತಹ ಸಂಕಷ್ಟ ಪಕ್ಕಕ್ಕಿಟ್ಟು ಸಮಸ್ಯೆಗಳನ್ನು ಮೀರಿ ಓದಿ ಗುರಿ ಸಾಧಿಸಬೇಕು ಎಂದು ಟಿಪ್ಸ್ ನೀಡಿದರು.

ಇದೇ ವೇಳೆ ಮಾತನಾಡಿ ನಿವೃತ್ತ ಪೊಲೀಸ್ ಉಪ ಅಧೀಕ್ಷಕ ಜೆ.ಬಿ.ರಂಗಸ್ವಾಮಿ, ಸರ್ಕಾರಿ ಕೆಲಸ ಪಡೆಯಲು ಯಾವುದೇ ಹಿನ್ನೆಲೆ ಬೇಕಿಲ್ಲ. ಪ್ರತಿಭೆ ಇದ್ದರೆ ಸಾಕು. ಜ್ಞಾನ ಮತ್ತು ವ್ಯಕ್ತಿತ್ವ ಬೆಳೆಸಿಕೊಂಡು ದೃಢ ನಿರ್ಧಾರ ಹಾಗೂ ನಿರಂತರ ಪ್ರಯತ್ನ ಪಟ್ಟರೆ ಯಶಸ್ಸು ಶತಸಿದ್ಧ ಎಂದು ಉತ್ತೇಜಿಸಿದರು.

ನಂತರ ಮಾತನಾಡಿದ ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಅವರು, ಇಂದಿನ ಯುವಕರು ತಾವು ಬರೆದ ಪರೀಕ್ಷೆಯ ಅಂಕಗಳನ್ನು ಫಲಿತಾಂಶ ಬರುವ ಮುನ್ನವೇ ನಿಖರವಾಗಿ ಹೇಳುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ಇದು ಅತ್ಯಗತ್ಯ ಎಂದರು.

ಈ ವೇಳೆ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಉಪ ನಿರ್ದೇಶಕ ಬಿ.ಕೆ.ಮನು, ಪೊಲೀಸ್ ಆಯುಕ್ತರ ಕಚೇರಿಯ ಎಸಿಪಿ ರಾಜಶೇಖರ್, ಇನ್ಸ್‌ಪೆಕ್ಟರ್ ಬಿ.ಎಸ್.ರವಿಶಂಕರ್, ಪ್ರೊ.ವಿ. ಜಯಪ್ರಕಾಶ್, ಯು.ಎಂ. ಶರದ್‌ರಾವ್, ಡಾ.ವಿ.ಕೃಷ್ಣಕುಮಾರ್, ಸಂಯೋಜಕ ಕೆ.ವೈ. ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಹಾಸನ ರೈಲ್ವೆ ಪ್ರದೇಶದಲ್ಲಿ ತಾಮ್ರದ ವಸ್ತುಗಳ ಕಳ್ಳತನ
ಆರ್‌ಪಿಎಫ್ ಸಿಬ್ಬಂದಿಯಿಂದ ಇಬ್ಬರ ಬಂಧನ



ಹಾಸನ ರೈಲ್ವೆ ಪ್ರದೇಶದಲ್ಲಿ ಕಳವು ಮಾಡಿದ್ದ ತಾಮ್ರದ ವಸ್ತುಗಳನ್ನು ವಶಪಡಿಸಿಕೊಂಡ ಆರ್‌ಪಿಎಫ್ ಸಿಬ್ಬಂದಿ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಮೈಸೂರು, ಏ.22 (ಬಿಎಲ್‌ಯು)– ಹಾಸನದ ರೈಲ್ವೆ ಪ್ರದೇಶದಲ್ಲಿ ತಾಮ್ರದ ವಸ್ತುಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಆರ್‌ಪಿಎಫ್ ಸಿಬ್ಬಂದಿ ಬಂಧಿಸಿದ್ದಾರೆ. ಹಾಸನ ವಾಸಿಗಳಾದ ಶ್ರೀರಾಮು ಹಾಗೂ ವಿಜಯ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.

ಹಾಸನದ ರೈಲ್ವೆ ಇನ್ಸ್‌ಟಿಟ್ಯೂಟ್ ಬಳಿ ಏ.21ರಂದು ನಂಬರ್ ಪ್ಲೇಟ್ ಇಲ್ಲದ ಹೋಂಡಾ ಆಕ್ಟಿವಾ ವಾಹನದಲ್ಲಿ ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದ ಈ ಇಬ್ಬರನ್ನು ಆರ್‌ಪಿಎಫ್ ಸಿಬ್ಬಂದಿ ತಡೆದು ಶೋಧಿಸಿದರು. ರೈಲ್ವೆ ಪ್ರದೇಶದಲ್ಲಿ ಕಳವು ಮಾಡಲು ಈ ಆರೋಪಿಗಳು ಹೊಂಚು ಹಾಕುತ್ತಿದ್ದರು. ಈ ವೇಳೆ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ರೈಲ್ವೆ ಪ್ರದೇಶದಲ್ಲಿ ಕಳ್ಳತನದ ಹಳೇ ಅಪರಾಧ ಕೃತ್ಯವನ್ನು ಆರೋಪಿಗಳು ಬಾಯ್ಬಿಟ್ಟರು.

ಸುಮಾರು 15 ದಿನಗಳ ಹಿಂದೆ ರೈಲ್ವೆ ಪ್ರದೇಶದ ಸ್ಟೋರ್ ರೂಂ ಬೀಗ ಒಡೆದು ರೈಲ್ವೆ ರಿಲೇ (ತಾಮ್ರದ ವಸ್ತು) ಗಳನ್ನು ಕಳ್ಳತನ ಮಾಡಿ ಗುಜರಿಗೆ ಮಾರಾಟ ಮಾಡಿರುವುದಾಗಿ ಬಹಿರಂಗಪಡಿಸಿದರು.

ತರುವಾಯ ಆರ್‌ಪಿಎಫ್ ಸಿಬ್ಬಂದಿ, ಹಾಸನದ ಗೌರಿ ಕೊಪ್ಪಲಿನ ಎಸ್‌ಬಿಐ ಬ್ಯಾಂಕ್ ಸಮೀಪದ ಗುಜರಿ ಅಂಗಡಿಗೆ ತೆರಳಿದಾಗ 8 ಸಾವಿರಕ್ಕೆ 51 ರಿಲೇಗಳನ್ನು ಮಾರಾಟ ಮಾಡಿರುವುದು ಪತ್ತೆಯಾಯಿತು. ಈ ಮೂಲಕ 99 ಸಾವಿರ ಮೌಲ್ಯದ ತಾಮ್ರದ ವಸ್ತುಗಳನ್ನು ವಶಪಡಿಸಿಕೊಂಡು ಆರೋಪಿಗಳಾದ ಶ್ರೀರಾಮು ಹಾಗೂ ವಿಜಯ ಅವರನ್ನು ಬಂಧಿಸಿದರು ಎಂದು ನೈಋತ್ಯ ರೈಲ್ವೆಯ ವಿಭಾಗೀಯ ಹಣಕಾಸು ವ್ಯವಸ್ಥಾಪಕ ಪೃಥ್ವಿ ಎಸ್.ಹುಲ್ಲತ್ತಿ ತಿಳಿಸಿದ್ದಾರೆ.

ನಾಳೆ ಡಾ.ರಾಜ್‌ಕುಮಾರ್ ಹುಟ್ಟುಹಬ್ಬ: ವರನಟನ ಅಪರೂಪ ದೃಶ್ಯ ಪ್ರದರ್ಶನ



ಮೈಸೂರು,ಏ.22(ಜಿಎ)–ರಂಗಾನಂದ ಕಲಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಏ.24ರಂದು ಸಂಜೆ 5.30ಕ್ಕೆ ರಾಮಕೃಷ್ಣನಗರದ ರಮಾಗೋವಿಂದ ರಂಗ ಮಂದಿರದಲ್ಲಿ 'ಕುಮಾರ ರಾಮ' ಐತಿಹಾಸಿಕ ನಾಟಕ ಹಾಗೂ ಡಾ.ರಾಜ್‌ಕುಮಾರ್ ಅವರ ಚಿತ್ರಗಳ ಅಪರೂಪದ ದೃಶ್ಯಗಳ ಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ರಂಗಸ್ವಾಮಿ ಈ ವಿಷಯ ತಿಳಿಸಿ, ಬಿಜೆಪಿ ಮುಖಂಡ ಆರ್.ರಘುಕೌಟಿಲ್ಯ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಮೇಯರ್ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಎಂ.ಯೋಗೇಂದ್ರ, ಎನ್.ಉದಯಶಂಕರ್ ಉಪಸ್ಥಿತರಿರುವರು. ಎಲ್ಲರಿಗೂ ಉಚಿತ ಪ್ರವೇಶವಿದ್ದು, ಆಸಕ್ತಿ ಇದ್ದವರು ಸಹಾಯ ಧನ ನೀಡಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿ.ಆರ್.ಗಣೇಶ್, ಪ್ರತಾಪ್, ಸುದರ್ಶನ್, ನಾಗಭೂಷಣ್ ಉಪಸ್ಥಿತರಿದ್ದರು.

ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಣೆ



ಶ್ರೀ ಲಕ್ಷ್ಮಿನರಸಿಂಹ ದೇವಾಲಯದಲ್ಲಿ ಶ್ರೀ ರಾಮಾನುಜಾಚಾರ್ಯರ ಜಯಂತಿ.

ಮೈಸೂರು, ಏ.22– ಮೈಸೂರು ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯದ ಆವರಣದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘ ಮತ್ತು ಸಂಯುಕ್ತ ಆಶ್ರಯದಲ್ಲಿ ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಆಚಾರ್ಯರ ಆದರ್ಶಗಳಲ್ಲಿ ಒಂದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ರಾಮಾನುಜಾಚಾರ್ಯರು ಅತ್ಯಂತ ಶ್ರೇಷ್ಠರಲ್ಲಿ ಒಬ್ಬರು ಎಂದರು. ಕಾರ್ಯಕ್ರಮದಲ್ಲಿ ಡಾ.ಲಕ್ಷ್ಮೀದೇವಿ, ಮುರಳಿ, ಕಾರ್ಯದರ್ಶಿ ಹರೀಶ್, ಗೋಪಾಲರಾವ್, ಬಾಲಕೃಷ್ಣ, ನಾಗರಾಜ್, ಜಗ್ಗಣ್ಣ, ರಂಗನಾಥ್, ಅರುಣ್, ಸತ್ಯನಾರಾಯಣ್, ಸುಧೀಂದ್ರ, ಸೌಭಾಗ್ಯ ಮೂರ್ತಿ, ಜ್ಯೋತಿ, ಲತಾಬಾಲಕೃಷ್ಣ ಇನ್ನಿತರರಿದ್ದರು.

ಕೆ–ಸೆಟ್, ಯುಜಿಸಿ–ನೆಟ್ ಪರೀಕ್ಷೆಗಳಿಗೆ ತರಬೇತಿ ಶಿಬಿರ

ಮೈಸೂರು,ಏ.22(ಪಿಎಂ)– ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳಿಗೆ 45 ದಿನಗಳ ತರಬೇತಿ ಶಿಬಿರ ಏರ್ಪಡಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಲಿರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ–ಸೆಟ್), ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ ಮೈಸೂರಿನ ಕೇಂದ್ರ ಕಚೇರಿಯಲ್ಲಿ ತರಬೇತಿ ಶಿಬಿರ ನಡೆಯಲಿದೆ. ಆಸಕ್ತರು ಏ.24ರೊಳಗೆ ಬೆಳಗ್ಗೆ 10ರಿಂದ ಸಂಜೆ 4.30ರವರೆಗೆ ನೊಂದಾಯಿಸಿಕೊಳ್ಳಲು 0821–2515944 ದೂ.ಸಂ. ಸಂಪರ್ಕಿಸಬಹುದೆಂದು ವಿವಿ ಕುಲಸಚಿವ ಪ್ರೊ.ನವೀನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಿಧನ

ಎಂ.ಎನ್.ಜಯಪ್ರಕಾಶ್



ಮೈಸೂರು,ಏ.22–ಮೈಸೂರಿನ ಶ್ರೀರಾಂಪುರ 2ನೇ ಹಂತ, ಎಸ್‌ಬಿಎಂ ಕಾಲೋನಿ ನಿವಾಸಿ ಹಾಗೂ ವಿಜಯ ಬ್ಯಾಂಕ್‌ನ ನಿವೃತ್ತ ಚೀಫ್ ಮ್ಯಾನೇಜರ್ ಎಂ.ಎನ್.ಜಯಪ್ರಕಾಶ್ (76) ಬುಧವಾರ ನಿಧನರಾದರು. ಮೃತರು ಪತ್ನಿ ನಿವೃತ್ತ ಎಸ್‌ಬಿಐ ಮ್ಯಾನೇಜರ್ ಉಷಾ ಜಯಪ್ರಕಾಶ್, ಪುತ್ರ ಎಂ.ಜೆ. ರಘು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಜುನಾಥ್



ಮೈಸೂರು: ಮೈಸೂರು ತೊಣಚಿಕೊಪ್ಪಲಿನ ಸಣ್ಣ ಮರಿಯ ಅವರ ದ್ವಿತೀಯ ಪುತ್ರ ಮಂಜುನಾಥ್(37)ಇಂದು ನಿಧನರಾದರು. ಮೃತರು ಪತ್ನಿ ಮಾಲತಿ, ಪುತ್ರ ರಚಿತ್ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ತೊಣಚಿಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಂಕರರ, ರಾಮಾನುಜರ ಕೊಡುಗೆ ಅಪಾರ

ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಮತ



ಮೈಸೂರಿನ ರಾಮಕೃಷ್ಣನಗರದ ಸಾಯಿಬಾಬಾ ಮಂದಿರದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಆದಿ ಗುರು ಶ್ರೀ ಶಂಕರಾಚಾರ್ಯರು, ಭಗವದ್ ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಿಸಲಾಯಿತು.

ಮೈಸೂರು, ಏ.22– ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಪುನರ್ಜೀವನಗೊಳಿಸುವಲ್ಲಿ ಮಹಾನ್ ಆಚಾರ್ಯರಾದ ಆದಿ ಗುರು ಶಂಕರಾಚಾರ್ಯರು ಮತ್ತು ಭಗವತ್ ರಾಮಾನುಜಾಚಾರ್ಯರ ಕೊಡುಗೆ ಅಪಾರ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ಸಾಯಿಬಾಬಾ ಮಂದಿರದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಆಯೋಜಿಸಿದ್ದ ಆದಿ ಗುರು ಶ್ರೀ ಶಂಕರಾಚಾರ್ಯರು ಹಾಗೂ ಭಗವದ್ ಶ್ರೀ ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಜಗದ್ಗುರು ಆದಿ ಶಂಕರಾಚಾರ್ಯರು ಭಾರತೀಯ ಸನಾತನ ಸಂಸ್ಕೃತಿಗೆ ನೀಡಿದ ಕೊಡುಗೆ ಅನನ್ಯ ಅವರು ರಚಿಸಿದ ಸ್ತೋತ್ರಗಳು ಮತ್ತು ಸೌಂದರ್ಯ ಲಹರಿಯಂತಹ ಕೃತಿಗಳು ಮನುಕುಲಕ್ಕೆ ದಾರಿದೀಪವಾಗಿವೆ ಎಂದರು.

ಭಾರತ ದೇಶವು ಆಧ್ಯಾತ್ಮಿಕವಾಗಿ ಅತ್ಯಂತ ಶ್ರೀಮಂತವಾಗಿದೆ. ಇಂತಹ ಜಯಂತಿಗಳು ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಸಹಕಾರಿಯಾಗಿದೆ. ಮಹಾನ್ ಪುರುಷರ ಜಯಂತಿಗಳನ್ನು ಆಚರಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವ ಸಂಘ–ಸಂಸ್ಥೆಗಳ ಕ್ರಮ ಶ್ಲಾಘನೀಯವಾದದ್ದು ಎಂದು ತಿಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಬ್ರಾಹ್ಮಣ ಮಂಡಳಿ ರಚಿಸಿ ಶಂಕರ ಜಯಂತಿ ಜಾರಿಗೆ ತಂದರು. ಮುಂದಿನ ದಿನಗಳಲ್ಲಿ ಬ್ರಾಹ್ಮಣ ಯುವಕರಿಗಾಗಿ ಶಿಕ್ಷಣ ಉದ್ಯೋಗ ಪ್ರೋತ್ಸಾಹಕ್ಕಾಗಿ ಹಲವಾರು ಯೋಜನೆಗಳನ್ನು ತರಲು ವಿಪ್ರನಿಯೋಗ ರಚಿಸಿ ಮನವಿ ಸಲ್ಲಿಸಲಾಗುವುದು ಎಂದರು.

ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ ವಾಜಪೇಯಿ, ಡಾ.ಎಸ್.ಪಿ.ಯೋಗಣ್ಣ, ವಿದ್ವಾನ್ ಕೃಷ್ಣಮೂರ್ತಿ, ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ವಿಜಯ್‌ಕುಮಾರ್, ಜಯಸಿಂಹ, ಮಿರ್ಲೆ ಫಣೀಶ್, ಶ್ರೀಕಾಂತ್ ಕಶ್ಯಪ್, ಜಗದೀಶ್, ಗಗನ, ಎಸ್.ಬಿ.ವಾಸುದೇವಮೂರ್ತಿ, ರಾಘವೇಂದ್ರ ಲಕ್ಷ್ಮೀಶ್, ಸಂತೋಷ್, ಪ್ರಸನ್ನ ಹೆಗಡೆ, ಚಾಮಯ್ಯ, ಗಂಗಾಧರ್, ಮಾದೇಗೌಡ, ರಾಮಕೃಷ್ಣಪ್ಪ, ಪುಟ್ಟಮ್ಮಣ್ಣಿ, ವಸುಮತಿ, ನಾಗರಾಜ್ ಜನ್ನು, ಶೃತಿ ನಾಗರಾಜ್, ಪ್ರೇಮ ಹಾಗೂ ಇನ್ನಿತರರು ಹಾಜರಿದ್ದರು.

ಇಂದಿನಿಂದ ರಾಜ್ಯಮಟ್ಟದ ರಾಜ್ಯಶಾಸ್ತ್ರ ಅಧ್ಯಾಪಕರ 21ನೇ ಮಹಾ ಸಮ್ಮೇಳನ

ಮೈಸೂರು.ಏ.22–ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಕೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿವಿಯ ರಾಜ್ಯಶಾಸ್ತ್ರ ಮತ್ತು ಸಂಶೋಧನಾ ವಿಭಾಗ, ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ಸಂಯುಕ್ತಾಶ್ರಯದಲ್ಲಿ ಏ.23, 24 ಹಾಗೂ 25ರಂದು ರಾಜ್ಯಶಾಸ್ತ್ರ ಅಧ್ಯಾಪಕರ 21ನೇ ಮಹಾ ಸಮ್ಮೇಳನ ಹಾಗೂ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ರಜತ ಮಹೋತ್ಸವವನ್ನು ಮೈಸೂರಿನ ಕರಾಮುವಿವಿಯ ಕಾವೇರಿ ಸಭಾಂಗಣ ಹಾಗೂ ಮುಕ್ತ ಗಂಗೋತ್ರಿಯಲ್ಲಿ ಆಯೋಜಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕಥೆಗಳಿಗೆ ಆಹ್ವಾನ

ಮೈಸೂರು: ಅನಂತ ಪ್ರಕಾಶನದಿಂದ ಮೇ ತಿಂಗಳು ಹೊರತರಲಾಗುತ್ತಿರುವ ಕಥಾ ಸಂಕಲನಕ್ಕೆ ಉದಯೋನ್ಮುಖ ಬರಹಗಾರರಿಂದ ಕಥೆಗಳನ್ನು ಆಹ್ವಾನಿಸಲಾಗಿದೆ. ಕಥೆಯು ಸ್ವಂತದ್ದಾಗಿದ್ದು, ಫುಲ್ ಸ್ಕೇಫ್ ಹಾಳೆಯ 4 ಪುಟಮೀರದಿರಲಿ. ಅನುವಾದಿತ ಕಥೆಗಳಿಗೆ ಅವಕಾಶವಿಲ್ಲ. ಕಥೆಯು ಡಿಟಿಪಿ ಇಲ್ಲವೇ ಸ್ಫುಟವಾದ ಬರವಣಿಗೆಯಲ್ಲಿ ಇರತಕ್ಕದ್ದು. ಫುಲ್ ಸ್ಕೇಫ್ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯ ತಕ್ಕದ್ದು. ನಿಮ್ಮ ಕಥೆಗಳನ್ನು ಕಳುಹಿಸಲು ಕಡೆ ದಿನಾಂಕ 28–04–2026. ನಮ್ಮ ಇ–ಮೇಲ್ ವಿಳಾಸ : Email-harsha11harsha05 @gmail.com. ವಿವರಗಳಿಗೆ 84312 48835 ಸಂಪರ್ಕಿಸಿ.

ಇಂದು ಭೀಮಸೇನ–ಬೀಚಿ ರಾಯಸಂ ಬಡಿಸಿದ ಹಾಸ್ಯದ ಪಾಯಸಂ ಕಾರ್ಯಕ್ರಮ

ಮೈಸೂರು,ಏ.22–ಮೈಸೂರಿನ ಚಿಗುರು ಸಾಹಿತ್ಯ ಬಳಗದ ವತಿಯಿಂದ ನಾಳೆ (ಏ.23) ಸಂಜೆ 5.30 ಗಂಟೆಗೆ ಸುಯೋಗ ಆಸ್ಪತ್ರೆ ಸಭಾಂಗಣ, 4ನೇ ಮಹಡಿಯಲ್ಲಿ ಭೀಮಸೇನ–ಬೀಚಿ ರಾಯಸಂ ಬಡಿಸಿದ ಹಾಸ್ಯದ ಪಾಯಸಂ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ ಉದ್ಘಾಟಿಸುವರು. ಪ್ರಿನ್ಸಿಪಾಲ್ ದೇವರಾಜು ಪಿ. ಚಿಕ್ಕಹಳ್ಳಿ ಉಪನ್ಯಾಸ ನೀಡುವರು. ಹಿರಿಯ ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಾ. ಎಸ್.ಪಿ. ಯೋಗಣ್ಣ, ಆಧ್ಯಾತ್ಮಿಕ ಚಿಂತಕ ಶ್ರೀಮತಿ ಸುಮತಿ ಸುಬ್ರಹ್ಮಣ್ಯ ಭಾಗವಹಿಸಲಿದ್ದಾರೆ.

ಏ.25, ಸೇಪಿಯಂಟ್ ಕಾಲೇಜಲ್ಲಿ ಬೃಹತ್ ಉದ್ಯೋಗ ಮೇಳ



ಮೈಸೂರು,ಏ.22–ಮೈಸೂರಿನ ಕೆಆರ್‌ಎಸ್ ಮುಖ್ಯ ರಸ್ತೆ ಮೇಟಗಳ್ಳಿಯಲ್ಲಿರುವ ಸೇಪಿಯಂಟ್ ಕಾಲೇಜಿನ ವತಿಯಿಂದ ಬೃಹತ್ ಉದ್ಯೋಗ ಮೇಳವನ್ನು ಏ.25ರಂದು ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.


ಮೇಳದಲ್ಲಿ ರಾಜ್ಯದ 15ಕ್ಕೂ ಹೆಚ್ಚು ಹೆಸರಾಂತ ಕಂಪನಿಗಳು ಭಾಗವಹಿಸುತ್ತಿವೆ. ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಬಿಎ, ಬಿಎಸ್ಸಿ, ಬಿಸಿಎ, ಬಿಬಿಎ, ಬಿಕಾಂ ವಿದ್ಯಾರ್ಥಿಗಳು ಹಾಗೂ ಯಾವುದೇ ಪದವಿ ಪೂರೈಸಿದ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು ಎಂದು ಕಾಲೇಜಿನ ಡೀನ್ ಡಾ.ಸುಜಾತ ಬೋಪಣ್ಣ, ಪ್ರಾಂಶುಪಾಲರಾದ ಡಾ.ಗಣೇಶ್.ಕೆ, ಆಡಳಿತಾಧಿಕಾರಿ ಸುಜಿತ್ ಪಡಿವಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂರವಾಣಿ: 0821–2334642 ಸಂಪರ್ಕಿಸಬಹುದು.

ಇಂಚರಾಗೆ ಉನ್ನತ ಶ್ರೇಣಿ



ಮೈಸೂರು: ಇಲ್ಲಿನ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಇಂಚರ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 600ಕ್ಕೆ 555 ಅಂಕ ಗಳಿಸಿ, ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಸಂಗಮೇಶ್ ಹಾಗೂ ಕಲ್ಪನಾ ದಂಪತಿ ಪುತ್ರಿ.

ಬೋಗಾದಿ ಗ್ರಾಮಸ್ಥರಿಂದ ಶಾಸಕ ಜಿ.ಟಿ.ದೇವೇಗೌಡರಿಗೆ ಸನ್ಮಾನ...



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೋಗಾದಿಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಗ್ರಾಮಸ್ಥರು ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಗ್ರಾಮದ ಮುಖಂಡರಾದ ಜಯಕುಮಾರ್, ಸ್ವಾಮಿಗೌಡ, ಧೂಳ್ ಸ್ವಾಮಿ, ವಿಜಯಲಕ್ಷ್ಮಿ ಬಾಬು, ಕೆಂಚಪ್ಪ, ಅರುಣ್‌ಕುಮಾರ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಏ.25ಕ್ಕೆ ಹಿಂದೂಸ್ತಾನ್ ಕಾಲೇಜಲ್ಲಿ ಬೃಹತ್ ಉದ್ಯೋಗ ಮೇಳ

ಮೈಸೂರು, ಏ.22(ಜಿಎ)–ಮೈಸೂರಿನ ಹಿಂದುಸ್ತಾನ್ ಕಾಲೇಜಿನಲ್ಲಿ ಏ.25ರಂದು ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಪ್ರಿನ್ಸಿಪಾಲ್ ಸಿ.ಜೆ.ಪ್ರಿಯಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಉದ್ಯೋಗ ಮೇಳದಲ್ಲಿ ರ್‍ಯಾಂಕ್ ಬುಕ್ ಸಾಫ್ಟ್‌ವೇರ್ ಸಲ್ಯೂಷನ್, ಕ್ರಿಯಾನೆಕ್ಸ್ಟ್‌ವೆಲ್ತ್, ಜಸ್ಟ್ ಡಯಲ್, ಆರ್‌ಪ್ರೊಸೆಸ್, ಟೀಂ ಲೀಸ್, ಟೆಕ್ನೋ ಟಾಸ್ಕ್ ಮೊದಲಾದ ಕಂಪನಿಗಳು ಪಾಲ್ಗೊಳ್ಳುತ್ತಿವೆ. 2022, 23, 24, 25ನೇ ಸಾಲಿನ ಪದವಿ, ಸ್ನಾತಕೋತ್ತರ ಪದವೀಧರರು ಹಾಗೂ ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದೆ. ತಮ್ಮ ನವೀಕರಿಸಿದ ರೆಸ್ಯೂಮ್, ಶೈಕ್ಷಣಿಕ ದಾಖಲೆ, ಗುರುತಿನ ಚೀಟಿ, ದಾಖಲೆ ಪತ್ರಗಳ ಜೆರಾಕ್ಸ್, ಇತ್ತೀಚಿನ ಪಾಸ್‌ಪೋರ್ಟ್ ಭಾವಚಿತ್ರಗಳೊಡನೆ ಆಗಮಿಸಬೇಕು. ಹೆಚ್ಚಿನ ಮಾಹಿತಿಗೆ ದೂ. 97311 45682 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ಲೇಸ್ಮೆಂಟ್ ಸಂಯೋಜಕರಾದ ಸೌಮ್ಯ, ವಿ.ಈಶ್ವರ್, ವಿನಂತಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.4.2026 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸಾ, ಕುತ್ತಿಗೆ ನೋವು ಮತ್ತು ಭುಜದ ನೋವು, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಮಹಾರಾಜ ಕಾಲೇಜು,** ಪಠ್ಯೇತರ ಚಟುವಟಿಕೆಗಳ ಸಮಿತಿ : ಕಾಲೇಜು ವಾರ್ಷಿಕೋತ್ಸವ, ಉದ್ಘಾಟನೆ: ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ಚಲನಚಿತ್ರ ನಟ ನವೀನ್ ಸಜ್ಜು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಕೆ.ಎಸ್. ಗೋವಿಂದರಾಜು, ಪ್ರೊ. ರಾಚಯ್ಯ, ಸ್ಥಳ: ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘ** : 21ನೇ ಮಹಾ ಸಮ್ಮೇಳನ ಮತ್ತು ರಜತ ಮಹೋತ್ಸವ, ಉದ್ಘಾಟನೆ : ಮಾಜಿ ಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ದಿಕ್ಸೂಚಿ ಭಾಷಣ : ಪ್ರೊ. ವೆಲೆರಿಯನ್ ರೋಡ್ರಿಗಸ್, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕಾವೇರಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್** : ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 102ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಪ್ರಮುಖ ಬಡಾವಣೆಗಳಲ್ಲಿ ಮೆರವಣಿಗೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಇಟ್ಟಿಗೆಗೂಡು.

■ **ಮೈಸೂರಿನ ಜೆಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ:** 2026ನೇ ಸಾಲಿನ ವಾರ್ಷಿಕ ತಾಂತ್ರಿಕ, ಸಾಂಸ್ಕೃತಿಕ ಉತ್ಸವ 'ಗೀತಾ ಯಾನ–2026' ಕಾರ್ಯಕ್ರಮ, ಮುಖ್ಯ ಅತಿಥಿಗಳು : ನಟ, ನಿರ್ದೇಶಕ, ಚಿತ್ರಕಥೆ ಗಾರರಾದ ಪ್ರಕಾಶ್ ಬೆಳವಾಡಿ, ಗೌರವ ಅತಿಥಿಗಳು : ಗ್ಲೋಬಲ್ ಪ್ರಾಡಕ್ಟ್ ಟೆಕ್ನಾಲಜಿ ಉಪಾಧ್ಯಕ್ಷ ಪ್ರವೀಣ್ ಮೈಸೂರು, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಅಧ್ಯಕ್ಷ ಡಾ. ಜಗನ್ನಾಥ ಶೆಣೈ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಂ. ಶಿವಕುಮಾರ್, ಆರ್.ಕೆ. ಭರತ್, ಶ್ರೀಮತಿ ಅನುಪಮಾ ಬಿ. ಪಂಡಿತ್, ಸ್ಥಳ: ಎಂ.ಗೋವಿಂದರಾವ್ ಸ್ಮಾರಕ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಚಿಂತನ ಚಿತ್ತಾರ, ಕನ್ನಡ ಪುಸ್ತಕ ಪ್ರಾಧಿಕಾರ ಮಳಿಗೆ** : ವಿಶ್ವ ಪುಸ್ತಕ ದಿನಾಚರಣೆ ಪ್ರಯುಕ್ತ ಸಂವಾದ ಪತ್ರಕರ್ತರು ಮತ್ತು ಪುಸ್ತಕ ಸಾಂಗತ್ಯ, ಉಪಸ್ಥಿತರು : ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ವಿಮರ್ಶಕ ಪ್ರೊ. ರಾಜಪ್ಪ ದಳವಾಯಿ, ಪತ್ರಕರ್ತ ಕೆ. ನರಸಿಂಹಮೂರ್ತಿ, ಸ್ಥಳ: ಪತ್ರಕರ್ತರ ಭವನ, ಬೆಳಗ್ಗೆ 10.30ಕ್ಕೆ.

■ **ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್** : ಟೆಕ್ನಿಕ್ಸ್–2026, ಆರ್ವಿಯಾನ್, ಉದ್ಘಾಟನೆ: ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಗೌರವ ಅತಿಥಿಗಳು : ಇಸ್ಕಾನ್‌ನ ಸೌಮ್ಯ ರೂಪಾ ಕೃಷ್ಣದಾಸ್, ಉಪಸ್ಥಿತರು: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಸ್ವಪ್ನ ಜಾಧವ್, ಎಂ.ಕಿರಣ್, ಶಾಸಕ ಜಿ.ಡಿ. ಹರೀಶ್‌ಗೌಡ, ಕಾರ್ಯದರ್ಶಿ ಎಸ್.ಬಿ.ಉದಯ್‌ಶಂಕರ್, ಪ್ರಿನ್ಸಿಪಾಲ್ ಡಾ.ಬಿ.ಎಸ್.ನಾಗೇಂದ್ರ ಪ್ರಸಾದ್, ಅಧ್ಯಕ್ಷತೆ : ಎನ್‌ಐಇ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ಸ್ಥಳ: ಎನ್‌ಐಇ ಆವರಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ರತ್ನಮಾಲಾ ಪ್ರಕಾಶ್, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್ – ಶಿಶು ಗೀತೆಗಳ ಕಾರ್ಯಕ್ರಮ, 8.35 ವಿಶ್ವ ಪುಸ್ತಕ ದಿನದ ಸಂದರ್ಭದಲ್ಲಿ ಮಾತುಕತೆ, 8.30 ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್–ಶಿಶುಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಎನ್. ಸುರೇಂದ್ರ ಮತ್ತು ಸಂಗಡಿಗರಿಂದ –ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಸುತ್ತಮುತ್ತ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ವೀಣಾ ಶ್ರೀನಿವಾಸ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ದಾಳಿಂಬೆ ಬೇಸಾಯ ಅವಕಾಶಗಳು ಹಾಗೂ ಸವಾಲುಗಳನ್ನು ಕುರಿತ ಸಂವಾದ ಭಾಗವಹಿಸುತ್ತಾರೆ ಮೈಸೂರು ಜಿಲ್ಲಾ ಜಂಟಿ ತೋಟಗಾರಿಕಾ ನಿರ್ದೇಶಕರಾದ ಮಂಜುನಾಥ ಅಂಗಡಿ ಮತ್ತು ಮೈಸೂರು ತಾಲ್ಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಪ್ರಾಧ್ಯಾಪಕರಾದ ಡಾ. ಜಿ. ಮಂಜುನಾಥ್, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು.ಪಿ.ರಾಜು–ಮ್ಯಾಂಡೋಲಿನ್ ವಾದನ, 10.00 ನಾಟಕ–ಆಚಾರವಂತ ಅಯ್ಯಂಗಾರ್

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಕಾಲೇಜು ಶಿಕ್ಷಣ ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ.ಡಿ.ಎಸ್. ಪ್ರತಿಮಾ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಅಧ್ಯಕ್ಷ ಟಿ.ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3ಕ್ಕೆ

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾಧಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಪಂಡಿತ್ ಬಾದರಾಯಣಾಚಾರ್ಯ ಅವರಿಂದ ಗಾಯತ್ರಿ ಚಿಂತನ ಪ್ರವಚನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ, ಸಂಜೆ 4 ರಿಂದ.

■ **ಅರಿವು ಸಂಸ್ಥೆ ಹಾಗೂ ಅಪೂರ್ವ ಸ್ನೇಹ ಬಳಗ** : ವಿಶ್ವ ಪುಸ್ತಕ ದಿನಾಚರಣೆ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸ್ಥಳ: ಹೊಯ್ಸಳ ಕರ್ನಾಟಕ ವಿದ್ಯಾರ್ಥಿ ನಿಲಯ, ಕೆ.ಆರ್. ವನಂ, ಸಂಜೆ 4.30ಕ್ಕೆ.

■ **ಕೃಷಿಕ್ ಸರ್ವೋದಯ ಫೌಂಡೇಷನ್, ಮೈಸೂರು ಶಾಖೆ** : ಕೆಎಸ್‌ಎಫ್ ಸ್ಕೂಲ್ ಆಫ್ ಬ್ಯುಸಿನೆಸ್ ಅಂಡ್ ಟೆಕ್ನಾಲಜಿ ಕಾಲೇಜು ಕಟ್ಟಡದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ : ಫೌಂಡೇಷನ್ ಅಧ್ಯಕ್ಷ ಡಾ. ವೈ.ಕೆ. ಪುಟ್ಟಸೋಮೇಗೌಡ, ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ಜಿ.ಟಿ. ದೇವೇಗೌಡ, ಮಾಜಿ ಶಾಸಕರಾದ ಸಾ.ರಾ. ಮಹೇಶ್, ಎಲ್. ನಾಗೇಂದ್ರ, ಎಂಡಿಎ ಆಯುಕ್ತ ರಕ್ಷಿತ್, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಕೆಎಸ್‌ಎಫ್ ಮೈಸೂರು ಶಾಖೆ, ವಿಜಯನಗರ 2ನೇ ಹಂತ, ಸಂಜೆ 5ಕ್ಕೆ.

■ **ಚಿಗುರು ಸಾಹಿತ್ಯ ಬಳಗ:** ಭೀಮಸೇನ–ಬೀಚಿ ರಾಯಸಂ ಬಡಿಸಿದ ಹಾಸ್ಯದ ಪಾಯಸಂ, ಉದ್ಘಾಟನೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರಧಾನ ಉಪನ್ಯಾಸ : ಪ್ರಿನ್ಸಿಪಾಲ್ ದೇವರಾಜು ಪಿ.ಚಿಕ್ಕಹಳ್ಳಿ, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಡಾ. ಎಸ್.ಪಿ.ಯೋಗಣ್ಣ, ಆಧ್ಯಾತ್ಮಿಕ ಚಿಂತಕ ಶ್ರೀಮತಿ ಸುಮತಿ ಸುಬ್ರಹ್ಮಣ್ಯ, ಸ್ಥಳ: ಸುಯೋಗ ಆಸ್ಪತ್ರೆ ಸಭಾಂಗಣ, 4ನೇ ಮಹಡಿ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮರಥೋತ್ಸವ–2026 ಪೂಜಾ ಕಾರ್ಯಕ್ರಮ, ಅನುಜ್ಞೆ, ವಾಸುದೇವ ಪುಣ್ಯಾಹವಾಚನ, ಸ್ನಪನಪೂರ್ವಕ ಮಹಾಭಿಷೇಕ, ಬೆಳಗ್ಗೆ 9ಕ್ಕೆ, ಸ್ವಸ್ತಿವಾಚನ, ಆಚಾರ್ಯ, ಋತ್ವಿಗ್ವರಣ, ರಕ್ಷಾ ಬಂಧನ,ಅಂಕುರಾರ್ಪಣೆ, ಗರುಡಪಟ ಪ್ರತಿಷ್ಠೆ, ಹೋಮಗಳು, ಹಂಸ ವಾಹನೋತ್ಸವ ಸಂಜೆ 6ಕ್ಕೆ

ಕಾವೇರಿ ನದಿ ರಕ್ಷಣಾ ಸಮಿತಿಯಿಂದ
ಕಾವೇರಿ ಕೊಳ್ಳದಲ್ಲಿ ಪರಿಸ್ಥಿತಿ ಅಧ್ಯಯನ



ಕಾವೇರಿ ನದಿ ರಕ್ಷಣಾ ಸಮಿತಿ ವತಿಯಿಂದ ಸುದ್ದಿಗೋಷ್ಠಿ ನಡೆಸಲಾಯಿತು.

ವಿಚಾರಣೆ ವೇಳೆ ಕೋರ್ಟ್‌ಗೆ ಸಲ್ಲಿಕೆ ನಿರ್ಧಾರ

ಮೈಸೂರು,ಏ.22(ಜಿಎ)–ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಸತತ ಅನ್ಯಾಯ ವಾಗುತ್ತಿದೆ. ಹೀಗಾಗಿ ಮುಂದಿನ ತಿಂಗಳು ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ಪೂರ್ವಭಾವಿ ತಯಾರಿಯಾಗಿ ಏ.27 ರಿಂದ 29ರವರೆಗೆ ಕಾವೇರಿ ಕೊಳ್ಳದಲ್ಲಿ ಪರಿಸ್ಥಿತಿ ಅಧ್ಯಯನ ಮಾಡಲು ಕಾವೇರಿ ನದಿ ರಕ್ಷಣಾ ಸಮಿತಿ ಪ್ರವಾಸ ಕೈಗೊಳ್ಳಲಿದೆ ಎಂದು ಸಮಿತಿ ಅಧ್ಯಕ್ಷ ಎಚ್.ಕೆ.ರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಎನ್.ಗೋಪಾಲಗೌಡರ ನೇತೃತ್ವ ದಲ್ಲಿ ಈ ಸಮಿತಿ ಅಧ್ಯಯನ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ಕಾವೇರಿ ಕೊಳ್ಳದ ರೈತರು, ಕಾರ್ಮಿಕರು, ರೈತ ಸಂಘಟನೆ ಗಳವರೊಡಗೂಡಿ ಜಲಾಶಯಗಳ ವೀಕ್ಷಣೆ, ರೈತರ ಜಮೀನಿನ ವೀಕ್ಷಣೆ ಮತ್ತು ಸಭೆ ನಡೆಸಿ ಮಾಹಿತಿ ಸಂಗ್ರಹಿಸಲಾಗುವುದು. ಇವುಗಳ ಛಾಯಾಚಿತ್ರ ಮತ್ತು ವೀಡಿಯೊ ಸಂಗ್ರಹಿಸಿ ರಿಟ್ ಅರ್ಜಿ ಮೂಲಕ ಸಲ್ಲಿಸಲಾಗುವುದು ಎಂದು ಹೇಳಿದರು.

ಏ.27ರಂದು ಮಧ್ಯಾಹ್ನ 12.30ಕ್ಕೆ ಬೆಂಗಳೂರಿನಿಂದ ಹೊರಟು ದುಬಾರೆ ನಿಸರ್ಗಧಾಮ, ಕುಶಾಲನಗರ ಮಾರ್ಗ ಮಧ್ಯೆ ವೀಕ್ಷಿಸಿ, ಸಂಜೆ 6ಗಂಟೆಗೆ ಮಡಿಕೇರಿ ತಲುಪಿ ಅಲ್ಲೇ ವಾಸ್ತವ್ಯ. ಏ.28ರಂದು ಬೆಳಗ್ಗೆ 8 ಗಂಟೆಗೆ ತಲಕಾವೇರಿಯಲ್ಲಿ ಪೂಜೆ ಸಲ್ಲಿಸಿ, ಕುಶಾಲನಗರ ಅಥವಾ ಹಾರಂಗಿ ಯಲ್ಲಿ ಸಾರ್ವಜನಿಕ ಸಭೆ ನಡೆಸಿ, ಸಂಜೆ 4 ಗಂಟೆಗೆ ಗೊರೂರು ಹೇಮಾವತಿ ಡ್ಯಾಂ ವೀಕ್ಷಣೆ, ರೈತ ಮುಖಂಡರೊಡನೆ ಸಭೆ, ಕೆಆರ್‌ಎಸ್ ವೀಕ್ಷಣೆ ಬಳಿಕ ಮೈಸೂರಿಗೆ ಬಂದು ಜಲದರ್ಶಿನಿ ಅತಿಥಿ ಗೃಹ ದಲ್ಲಿ ಸಭೆ ನಡೆಸಲಿದೆ. ಏ.29ರಂದು ಬೆಳಗ್ಗೆ 9.30ಕ್ಕೆ ಕಬಿನಿ ಅಣೆಕಟ್ಟು ವೀಕ್ಷಣೆ, ಅಲ್ಲಿನ ರೈತ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಕೂಲಿ ಕಾರ್ಮಿಕರೊಡನೆ ಸಭೆ ನಡೆಸಿ, ನಂಜನಗೂಡು, ಟಿ.ನರಸೀಪುರ, ಶಿಂಷಾ ನೋಡಿಕೊಂಡು ಮೇಕೆದಾಟುವಿಗೆ ಭೇಟಿ ನೀಡಿ, ಸಂಜೆ ಬೆಂಗಳೂರಿಗೆ ಸಮಿತಿ ಸದಸ್ಯರು ವಾಪಸ್ಸಾಗುವರು ಎಂದರು.

ಕಾವೇರಿ ನೀರು ಕುರಿತಂತೆ ರಾಜ್ಯಕ್ಕೆ ಸದಾ ಅನ್ಯಾಯ ಆಗುತ್ತಲೇ ಇದೆ. ಹೀಗಾಗಿ ರಾಜ್ಯದ ಹಿತ ರಕ್ಷಿಸಲು ಈ ಅಧ್ಯಯನ ಪ್ರವಾಸ ನಡೆಸಿ ನ್ಯಾಯಾಲಯಕ್ಕೆ ಸೂಕ್ತ ದಾಖಲಾತಿ ಸಲ್ಲಿಸಿ ವಾದ ಮಂಡಿಸಲಾಗುವುದು. ಖ್ಯಾತ ವಕೀಲ ಬ್ರಿಜೇಶ್ ಕಾಳಪ್ಪ, ನಿವೃತ್ತ ಐಎಎಸ್ ಅಧಿಕಾರಿಗಳಾದ ಟಿ.ತಿಮ್ಮೇಗೌಡ, ಐಎಸ್‌ಎಫ್ ನಿವೃತ್ತ ಅಧಿಕಾರಿ ಶ್ರೀಕಂಠಯ್ಯ, ಮಾಜಿ ಶಾಸಕ ತಿಪ್ಪೇಸ್ವಾಮಿ, ನೀರಾವರಿ ತಜ್ಞ ವೆಂಕಟರಾಮು, ಸಮಿತಿಯ ಗೌರವಾಧ್ಯಕ್ಷ ಅ.ದೇವೇಗೌಡರು, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್.ವೀರಯ್ಯ, ಸಿ.ರಾಜಣ್ಣ, ಕೆ.ಟಿ.ಚಂದ್ರು, ಅಂದಾನಪ್ಪ, ಟಿ.ನಂಜಪ್ಪ, ಕಾನೂನು ಸಲಹೆಗಾರ ಗಂಗಾಧರಗೌಡರು, ಪ್ರದೀಪ್‌ಕುಮಾರ್, ರಶ್ಮಿ, ರಾಮೇಗೌಡ, ಯಶೋಧರ ರಾಜಣ್ಣ, ಕನ್ಯಾಕುಮಾರಿ ಅಧ್ಯಯನ ತಂಡದಲ್ಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಚಂದ್ರಶೇಖರ್, ಹೆಚ್.ಎಲ್.ಯಮುನಾ, ಕೆ.ಸಿ.ಮಾದೇಶ್, ಗಂಗಾಧರಗೌಡ, ರಘುರಾಮಗೌಡ, ಪ್ರಕಾಶ್, ಕೆ.ವಿ.ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಾಂಸ್ಕೃತಿಕ ವೇದಿಕೆ ಸಮಾರೋಪ
ಶಿಕ್ಷಣದಿಂದಷ್ಟೇ ಅಸಮಾನತೆ ತೊಲಗಿಸಲು ಸಾಧ್ಯ

● ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಪ್ರತಿಪಾದನೆ ● ಶಿಕ್ಷಣದ ಮೂಲಕ ಮಹಿಳೆ ಪ್ರಾಬಲ್ಯಕ್ಕೆ ಡಾ.ಅಂಬೇಡ್ಕರ್ ಕಾರಣ



ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಲ್ಲಿ ನಡೆದ ಸಾಂಸ್ಕೃತಿಕ ವೇದಿಕೆ 2025–26ರ ಸಮಾರೋಪ ಸಮಾರಂಭವನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಏ.22(ಎಂಕೆ)– ಜಗತ್ತಿನಲ್ಲಿ ಯಾರೂ ಕದಿಯಲಾಗದ ಏಕೈಕ ಆಸ್ತಿ ಎಂದರೆ ಅದು ಶಿಕ್ಷಣ ಮಾತ್ರ. ಶಿಕ್ಷಣದ ಮೂಲಕವೇ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯ. ಆದ್ದರಿಂದ ಹೆಣ್ಣು ಮಕ್ಕಳು ವೈಜ್ಞಾನಿಕ ಮತ್ತು ವೈಚಾರಿಕ ಶಿಕ್ಷಣ ಪಡೆದು ದೇಶಕ್ಕೆ ಒಳ್ಳೆಯ ಪ್ರಜೆಗಳಾಗಿ ರೂಪುಗೊಳ್ಳಬೇಕು. ಇತರರಿಗೂ ಮಾದರಿಯಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದರು.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಸಾಂಸ್ಕೃತಿಕ ವೇದಿಕೆ 2025–26ರ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮ–ಸಮಾಜವನ್ನು ನಿರ್ಮಿಸಬೇಕೆಂಬುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವಾಗಿದ್ದು, ಈ ನಿಟ್ಟಿನಲ್ಲಿ ಹೆಣ್ಣು ಮಕ್ಕಳು ಉತ್ತಮ ಶಿಕ್ಷಣವನ್ನು ಪಡೆಯುವ ಮೂಲಕ ದೇಶದ ಜವಾಬ್ದಾರಿಯುತ ಪ್ರಜೆಗಳಾಗಬೇಕು. ಅಲ್ಲದೆ ದೇಶಕ್ಕೆ ತಮ್ಮದೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಸಂವಿಧಾನದಿಂದಾಗಿ ನಾವುಗಳು ಸ್ವತಂತ್ರವಾಗಿ ವ್ಯವಹರಿಸಲು ಮತ್ತು ಮಾತನಾಡಲು ಸಾಧ್ಯವಾಗಿದೆ. ಆದ್ದರಿಂದಲೇ ಸುಪ್ರೀಂಕೋರ್ಟ್‌ನಿಂದ ಹಿಡಿದು ಸಾಮಾನ್ಯ ಮಠಗಳವರೆಗೆ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಂವಿಧಾನದ ಪ್ರಸ್ತಾವನೆಯನ್ನು ಓದುವುದು ಕಡ್ಡಾಯವಾಗಿದೆ. ಇದು ಭಾರತ ಸಂವಿಧಾನಕ್ಕಿರುವ ಅಪ್ರತಿಮ ಮೌಲ್ಯವನ್ನು ಎತ್ತಿ ತೋರಿಸುತ್ತದೆ. ಡಾ.ಅಂಬೇಡ್ಕರ್ ಅವರು ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪರವಾಗಿ ಮಾತ್ರವಲ್ಲದೆ, ಮಹಿಳೆಯರ ಮೇಲಿನ ಶೋಷಣೆಯ ವಿರುದ್ಧವೂ ನಿರಂತರವಾಗಿ ಹೋರಾಡಿದವರು. ಮಹಿಳೆಯರ ಶಿಕ್ಷಣ ಮತ್ತು ಹಕ್ಕುಗಳಿಗಾಗಿ ಪ್ರಬಲವಾಗಿ ಧ್ವನಿ ಎತ್ತಿದರು. ಇಂದು ಬಹುತೇಕ ಪರೀಕ್ಷೆಗಳ ಫಲಿತಾಂಶದಲ್ಲಿ ಹೆಣ್ಣು ಮಕ್ಕಳು ಮೇಲುಗೈ ಸಾಧಿಸುತ್ತಿರುವುದಕ್ಕೆ ಮತ್ತು ಸಬಲರಾಗಿರುವುದಕ್ಕೆ ಅಂಬೇಡ್ಕರ್ ಅವರು ಅಂದು ನಡೆಸಿದ ಹೋರಾಟಗಳೇ ಕಾರಣ ಎಂದು ಹೇಳಿದರು.

ನಾಲ್ವಡಿ ದೂರದೃಷ್ಟಿ: ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮಹಾರಾಣಿ ಕಾಲೇಜಿನಂತಹ ಬೃಹತ್ ಶಿಕ್ಷಣ ಸಂಸ್ಥೆಯಲ್ಲಿ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಈ ಸಂಸ್ಥೆಯು ನಮಗೆ ದೊರೆಯಲು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯೇ ಕಾರಣ ಎಂದು ಸ್ಮರಿಸಿದರು.

ರಾಷ್ಟ್ರೀಯ ಪ್ರಜ್ಞೆ: ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಮಾತನಾಡಿ, ಕ್ರೀಡೆಗಳು ನಮಗೆ ಶಿಸ್ತು, ಸ್ಥಿತಿಸ್ಥಾಪಕತ್ವ ಮತ್ತು ತಂಡದ ಕೆಲಸದ ಮೌಲ್ಯವನ್ನು ಕಲಿಸುತ್ತವೆ. ಸಾಂಸ್ಕೃತಿಕ ಚಟುವಟಿಕೆಗಳು ನಮ್ಮೊಳಗಿನ ಸೃಜನಶೀಲತೆ, ಆತ್ಮವಿಶ್ವಾಸ ಮತ್ತು ಅಭಿವ್ಯಕ್ತಿಯನ್ನು ಹೊರತರುತ್ತವೆ. ಎನ್‌ಎಸ್‌ಎಸ್ ಮತ್ತು ಯುವ ರೆಡ್‌ಕ್ರಾಸ್‌ನಂತಹ ಉಪಕ್ರಮಗಳು ನಮ್ಮಲ್ಲಿ ಸಹಾನುಭೂತಿ, ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯತೆಗೆ ಸೇವೆಯನ್ನು ಪೋಷಿಸುತ್ತವೆ. ಎನ್‌ಸಿಸಿ ಮತ್ತು ರೇಂಜರ್ಸ್ ನಾಯಕತ್ವ, ಧೈರ್ಯ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಹುಟ್ಟು ಹಾಕುತ್ತವೆ ಎಂದು ಹೇಳಿದರು.

ಭಾಗವಹಿಸುವಿಕೆಯೇ ಸಾಧನೆ: ಬಹುಮಾನ ಗೆಲ್ಲುವುದು ಖಂಡಿತವಾಗಿಯೂ ಸಂತೋಷದ ಕ್ಷಣ. ಆದರೆ ಭಾಗವಹಿಸುವಿಕೆಯು ಒಂದು ದೊಡ್ಡ ಸಾಧನೆಯಾಗಿದ್ದು, ಮುಂದೆ ಹೆಜ್ಜೆ ಹಾಕಲು, ಸವಾಲುಗಳನ್ನು ಎದುರಿಸಿ ಬೆಳೆಯಬೇಕೆಂಬ ಇಚ್ಛೆಯನ್ನು ಪ್ರತಿಬಿಂಬಿಸುತ್ತದೆ. ಯಶಸ್ಸನ್ನು ಪದಕಗಳಿಂದ ಮಾತ್ರ ವ್ಯಾಖ್ಯಾನಿಸಲಾಗುವುದಿಲ್ಲ. ಅನುಭವಗಳು ಮತ್ತು ಪಾಠಗಳಿಂದ ವ್ಯಾಖ್ಯಾನಿಸಲಾಗುತ್ತದೆ. ಮಾರ್ಗದರ್ಶನ ಮತ್ತು ಪ್ರೋತ್ಸಾಹವು ಸಾಧನೆಯ ಬೆನ್ನೆಲುಬಾಗಿದೆ ಎಂದು ತಿಳಿಸಿದರು.

ಕಾಲೇಜು ಶಿಕ್ಷಣ ಇಲಾಖೆ(ಮೈಸೂರು ವಿಭಾಗ)ಜಂಟಿ ನಿರ್ದೇಶಕ ಪ್ರೊ.ಡಿ.ಎಸ್.ಪ್ರತಿಭಾ, ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್(ಜನ್ನಿ), ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಪಿ.ಶಿವಣ್ಣ, ಐಕ್ಯೂಎಸಿನ ಸಂಚಾಲಕ ಡಾ.ಎಸ್.ಮುತ್ತುರಾಜ್ ಮತ್ತಿತರರು ಉಪಸ್ಥಿತರಿದ್ದರು.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ...

“ರಾಜ್ಯ ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಮೈಸೂರು ಸೇರಿದಂತೆ ಅಕ್ಕ–ಪಕ್ಕದ ಜಿಲ್ಲೆಗಳ ಗ್ರಾಮೀಣ ಭಾಗದಿಂದ ಬರುವ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣದ ಜೊತೆಗೆ ಸುಮಾರು 2,900 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಮಹಿಳೆಯರು ಸಬಲರಾಗಬೇಕೆಂಬ ಡಾ.ಅಂಬೇಡ್ಕರ್ ಅವರ ಕನಸನ್ನು ರಾಜ್ಯ ಸರ್ಕಾರ ನನಸು ಮಾಡುತ್ತಿದೆ. **–ಕೆ.ಹರೀಶ್‌ಗೌಡ, ಶಾಸಕ, ಚಾಮರಾಜ ವಿಧಾನಸಭಾ ಕ್ಷೇತ್ರ.**

ಶ್ಯಾದನಹಳ್ಳಿಯ ಸರ್ಕಾರಿ ಭೂಮಿ ರಕ್ಷಣೆಗೆ ಕ್ರಮ: ತಹಶೀಲ್ದಾರ್ ಸ್ಪಷ್ಟನೆ

ಮೈಸೂರು, ಏ.22(ಎಂಟಿವೈ)– ಮೈಸೂರು ತಾಲೂಕು ಕಸಬಾ ಹೋಬಳಿ ಶ್ಯಾದನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ನಲ್ಲಿರುವ ಸರ್ಕಾರಿ ಜಾಗವನ್ನು ಸರ್ವೆ ಮಾಡಿಸಿ, ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಹಶೀಲ್ದಾರ್ ಮಹೇಶ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಕಸಬಾ ಹೋಬಳಿ ಶ್ಯಾದನಹಳ್ಳಿ ಗ್ರಾಮ ಸರ್ವೆ ನಂ.116ರಲ್ಲಿ 4.08 ಎಕರೆ ಹಾಗೂ ಸರ್ವೆ ನಂ.119ರಲ್ಲಿ 1.04 ಎಕರೆ ಸರ್ಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಗಳು ಕಬಳಿಸಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಶ್ಯಾದನಹಳ್ಳಿ ಸರ್ವೆ ನಂ.116ರಲ್ಲಿ 4.08 ಎಕರೆ ಹಾಗೂ ಸರ್ವೆ ನಂ.119ರಲ್ಲಿ 1.04 ಎಕರೆ ಭೂಮಿಗೆ ಈ ಹಿಂದೆ ಪರಿಶೀಲನೆ ಮಾಡಲಾಗಿದೆ. ಈ ವೇಳೆ ಕೆಲವರು ಖಾಸಗಿ ಭೂಮಿ ಎಂದು ಹೇಳಿದ್ದಾರೆ. ಅವರಿಗೆ ದಾಖಲೆ ನೀಡುವಂತೆ ಸೂಚಿಸಲಾಗಿತ್ತು. ಅಲ್ಲದೆ, ಸರ್ವೆ ಇಲಾಖೆಗೆ ಸದರಿ ಭೂಮಿಯನ್ನು ಸರ್ವೆ ಮಾಡಿ, ಸರ್ಕಾರಿ ಭೂಮಿಯನ್ನು ಗುರುತಿಸುವಂತೆ ಸೂಚಿಸಲಾಗಿದೆ. ಬಳಿಕ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

ಆರೋಪ: ಶ್ಯಾದನಹಳ್ಳಿ ವ್ಯಾಪ್ತಿಯ ಸರ್ಕಾರಿ ಭೂಮಿಯನ್ನು 1970ರಲ್ಲಿ 20 ವರ್ಷದ ಅವಧಿಗಾಗಿ ರಾಜೀ.ವಿ.ರಾಮನ್ ಎಂಬುವರಿಗೆ ಮೈನಿಂಗ್ ನಡೆಸಲು ಸರ್ಕಾರ ಗುತ್ತಿಗೆ ನೀಡಿತ್ತು. ಗುತ್ತಿಗೆ ಅವಧಿ ಮುಗಿದ ನಂತರ ಅವರು ಭೂಮಿಯನ್ನು ಸರ್ಕಾರದ ವಶಕ್ಕೆ ನೀಡಿದ್ದಾರೆ. ಆದರೆ, ಆ ಭೂಮಿಯನ್ನು ಸಂರಕ್ಷಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಗಣಿ ಪ್ರದೇಶದಲ್ಲಿದ್ದ ಬೆಲೆ ಬಾಳುವ ಖನಿಜವನ್ನು ಕಳ್ಳರು ದೋಚುತ್ತಿದ್ದಾರೆ. ಅಲ್ಲದೆ, ಕೆಲವರು ಸರ್ಕಾರಿ ಜಾಗವನ್ನು ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದರು.

ವೈದ್ಯರ ಮನೆಯ ಹಿಂಬಾಗಿಲು ಮೀಟಿ 20 ಲಕ್ಷ ಮೌಲ್ಯದ ಚಿನ್ನಾಭರಣ ಕಳವು



ಮೈಸೂರು, ಏ.22(ಜಿಎ)–ಮೈಸೂರಿನ ಅರವಿಂದ ನಗರದ ವೈದ್ಯರೊಬ್ಬರ ಮನೆಯ ಹಿಂಬಾಗಿಲು ಮೀಟಿ 20 ಲಕ್ಷ ರೂ. ಮೌಲ್ಯದ ಚಿನ್ನಾಭರಣ ದೋಚಿರುವ ಪ್ರಕರಣ ಕುವೆಂಪುನಗರ ಠಾಣೆಯಲ್ಲಿ ದಾಖಲಾಗಿದೆ. ಡಾಕ್ಟರ್ ಕುಟುಂಬ ಸಮೇತ ಏ.19ರಂದು ಮಧ್ಯಾಹ್ನ ಕೇರಳಕ್ಕೆ ತೆರಳುವ ಮುನ್ನ ಮನೆ ಬೀಗ ಹಾಕಿಕೊಂಡು ಗೇಟಿಗೆ ಹ್ಯಾಂಗಿಂಗ್ ಲಾಕ್ ಹಾಕಿ ತೆರಳಿದ್ದಾರೆ. ಏ.21ರಂದು ಕೇರಳದಿಂದ ಮನೆಗೆ ವಾಪಸ್ ಆಗಿ ಮನೆಯ ಮುಂಬಾಗಿಲು ತೆರೆದು ಒಳ ಹೋಗಿ ನೋಡಲಾಗಿ ಮನೆಯ ಹಿಂಬಾಗಿಲನ್ನು ಕಳ್ಳರು ಮೀಟಿ ಒಳಗೆ ಬಂದು ರೂಮ್‌ನಲ್ಲಿದ್ದ ಅಲ್ಮೇರವನ್ನು ಮೀಟಿ ಅದರಲ್ಲಿದ್ದ ಅಂದಾಜು 20 ಲಕ್ಷ ರೂ ಮೌಲ್ಯದ 150 ಗ್ರಾಂ ಚಿನ್ನಾಭರಣ ಹಾಗೂ 10 ಸಾವಿರ ರೂ. ನಗದು ದೋಚಿದ್ದಾರೆ. ಈ ಸಂಬಂಧ ಕುವೆಂಪು ನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿ



ಮೈಸೂರಿನ ಜಯನಗರದಲ್ಲಿರುವ ಕೃಷ್ಣರಾಜ(ಕೆಆರ್) ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಶ್ರೀ ಶಂಕರಾಚಾರ್ಯರ ಜಯಂತಿ ಆಚರಿಸಲಾಯಿತು. ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್ ರಾಜೇ ಅರಸ್ ಹಾಗೂ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಶ್ರೀಗಳ ಫೋಟೋಗೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮಾಜಿ ಮೇಯರ್ ಶಿವಕುಮಾರ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಜಯರಾಮ್, ಜೈಶಂಕರ್, ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ, ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ಬಾಲಕೃಷ್ಣ, ಗೋಕುಲ್ ಗೋವರ್ಧನ್, ಓಂ ಶ್ರೀನಿವಾಸ್, ಪ್ರದೀಪ್ ಕುಮಾರ್, ಚೇತನ್, ನಿಶಾಂತ್, ಹರೀಶ, ಅಂಕಿತ್, ಪ್ರಾಣೇಶ್, ಸಚಿನ್, ರಾಜು, ಕೇಶವ್, ರವಿಶಂಕರ್, ಚಂದ್ರಕಲಾ, ರೇಖಾ, ರೂಪ ಮತ್ತಿತರರಿದ್ದರು.

ವಿಶೇಷ ರೈಲುಗಳ ಹೆಚ್ಚುವರಿ ಸಂಚಾರ

ಮೈಸೂರು, ಏ.22 (ಬಿಎಲ್‌ಯು) –ಬೇಸಿಗೆ ದಟ್ಟಣೆ ಹಿನ್ನೆಲೆಯಲ್ಲಿ ಕಾಕಿನಾಡ ಟೌನ್– ಮೈಸೂರು ದ್ವಿ–ಸಾಪ್ತಾಹಿಕ ವಿಶೇಷ ರೈಲು ಹೆಚ್ಚುವರಿ ಟ್ರಿಪ್‌ಗಳಲ್ಲಿ ಸಂಚರಿಸಲಿದೆ. ಈ ರೈಲು ಮೊದಲು ಏ.20ರವರೆಗೆ ಸಂಚರಿಸಲು ನಿಗದಿಯಾಗಿತ್ತು. ಆದರೆ ಈಗ ಏ.24 ಮತ್ತು 27ರಂದು ಹೆಚ್ಚುವರಿ ಸಂಚಾರ ನಡೆಸಲಿದೆ. ಹಾಗೆಯೇ ಮೈಸೂರು–ಕಾಕಿನಾಡ ಟೌನ್ ವಿಶೇಷ ರೈಲು ಏ.25 ಮತ್ತು 28ರಂದು ಸಂಚರಿಸಲಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಮಾನಸಿಕ ದಾಸ್ಯದಿಂದ ಹೊರ ಬರುವುದು ಶಿಕ್ಷಣದಿಂದ ಸಾಧ್ಯ

● ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಪ್ರತಿಪಾದನೆ ● ಅಂಬೇಡ್ಕರ್ ಸಹ ಶಿಕ್ಷಣದಿಂದ ಶೋಷಣೆ ಮುಕ್ತರಾಗಬಹುದು ಎಂದು ಪ್ರತಿಪಾದಿಸಿದ್ದರು



ಮೈಸೂರಿನ ಶಂಕರಮಠದ ರಸ್ತೆಯಲ್ಲಿರುವ ನಟರಾಜ ಸಭಾಂಗಣದಲ್ಲಿ ದಲಿತ ಸಂಘರ್ಷ ಸಮಿತಿ ಆಯೋಜಿಸಿದ್ದ 'ಶೋಷಿತ ತಳ ಸಮುದಾಯಗಳ ಐಕ್ಯತಾ ಸಮಾವೇಶ'ವನ್ನು ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಅವರು ಬುದ್ಧ, ಡಾ.ಅಂಬೇಡ್ಕರ್ ಹಾಗೂ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಉದ್ಘಾಟಿಸಿದರು.

ಮೈಸೂರು, ಏ.22(ಎಂಟಿವೈ)– ಶಿಕ್ಷಣ ಪಡೆದಾಗ ಮಾತ್ರ ಮಾನಸಿಕ ದಾಸ್ಯದಿಂದ ಹೊರ ಬರಲು ಸಾಧ್ಯ ಎಂದು ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಶಂಕರಮಠದ ರಸ್ತೆಯಲ್ಲಿರುವ ನಟರಾಜ ಸಭಾಂಗಣದಲ್ಲಿ ದಲಿತ ಸಂಘರ್ಷ ಸಮಿತಿ ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ಬಹುತ್ವದ ಭಾರತವನ್ನು ಛಿದ್ರಗೊಳಿಸುತ್ತಿರುವ ಸರ್ಕಾರಗಳ ದಮನಕಾರಿ ಹುನ್ನಾರ ಖಂಡಿಸಿ 'ಶೋಷಿತ ತಳ ಸಮುದಾಯಗಳ ಐಕ್ಯತಾ ಸಮಾವೇಶ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಎಲ್ಲರೂ ಶಿಕ್ಷಣ ಪಡೆಯುವಂತೆ ಹೇಳಿದ್ದರು.

ಶಿಕ್ಷಣ ನಮ್ಮ ಹಕ್ಕು. ಅಂಬೇಡ್ಕರ್ ಅವರ ಆಶಯದಂತೆ ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆಯಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರತಿ ಭಾಷಣದಲ್ಲಿ, ಪ್ರತಿ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಶಿಕ್ಷಣ ನೀಡಿ, ಮುಂದಿನ ಪೀಳಿಗೆಗೆ ಶಿಕ್ಷಣ ಅವರ ಹಕ್ಕು ಎಂದು ಹೇಳುತ್ತಿದ್ದರು. ಎಷ್ಟೇ ಕಷ್ಟವಾದರೂ ಸರಿ ಮಕ್ಕಳಿಗೆ ಶಿಕ್ಷಣ ಕೊಡಿಸಿ. ಶಿಕ್ಷಣದಿಂದ ಅರಿವು ಮೂಡಲು ಸಾಧ್ಯ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನ್ಯಾಯ ಮತ್ತು ಅನ್ಯಾಯವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ನ್ಯಾಯ ಮತ್ತು ಅನ್ಯಾಯವನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಣ ಒಂದು ಪರಿಣಾಮಕಾರಿ ಮಾರ್ಗ ಎಂದು ಅಂಬೇಡ್ಕರ್ ಭಾವಿಸಿದ್ದರು. ಹೀಗಾಗಿ ಅವರು ತಮ್ಮ ನೆಲೆಯಲ್ಲಿಯೇ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಹುಡುಗ, ಹುಡುಗಿಯರು ಒಟ್ಟಿಗೆ ಓದುವ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದ್ದರು. ಅವರು ಆರಂಭಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳು ಪ್ರವೇಶ ಪಡೆಯುತ್ತಿದ್ದರು. ಅಂಬೇಡ್ಕರ್, ಮಹಿಳೆಯರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅವರ ಹಕ್ಕುಗಳನ್ನು ಗೌರವಿಸುತ್ತಿದ್ದರು. ಗೃಹಸ್ಥನಿಗೆ ಇರುವ ಅಧಿಕಾರ ಗೃಹಿಣಿಗೂ ಇದೆ ಎಂದು ವಾದಿಸುತ್ತಿದ್ದರು. ಸಭೆ, ಸಮಾರಂಭಗಳಲ್ಲಿ ಕೇವಲ ಪುರುಷರಿರುವುದನ್ನು ಅವರು ಒಪ್ಪುತ್ತಿರಲಿಲ್ಲ ಎಂದರು.

ಸಭೆಗಳಲ್ಲಿ, ಹೋರಾಟಗಳಲ್ಲಿ ಹೆಣ್ಣುಮಕ್ಕಳ ಪಾಲ್ಗೊಳ್ಳುವಿಕೆಯನ್ನು ಎಚ್ಚರದಿಂದ ಗುರುತಿಸುತ್ತಿದ್ದರು. ಅವರಿಲ್ಲದ ಹೋರಾಟ ಯಶಸ್ಸು ಕಾಣುವುದಿಲ್ಲ ಎಂದು ಅರ್ಥ ಮಾಡಿಕೊಂಡಿದ್ದರು. ಮಹಿಳೆಯರಿಗಾಗಿಯೇ ವಿಶೇಷವಾದ ಗೋಷ್ಠಿ, ಸಭೆ–ಸಮಾರಂಭಗಳನ್ನು ಆಯೋಜಿಸುತ್ತಿದ್ದರು. 1930ರ ದಶಕದಲ್ಲಿಯೇ ಒಂದು ಕಡೆ ಪುರುಷರ ಸಭೆಗಳು ನಡೆಯುತ್ತಿದ್ದರೆ ಮತ್ತೊಂದು ಕಡೆ ಹೆಣ್ಣು ಮಕ್ಕಳ ಸಭೆಗಳನ್ನು ಆಯೋಜಿಸುತ್ತಿದ್ದರು ಎಂದರು. ಈ ವೇಳೆ ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಹಿರಿಯ ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ನಿಂಗರಾಜು, ಜಿಲ್ಲಾ ಖಜಾಂಚಿ ಬಿ.ಡಿ.ಶಿವಬುದ್ಧಿ, ಆರ್.ಸೋಮಣ್ಣ, ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ


ತ.ನಾಡು, ಪ.ಬಂಗಾಳದಲ್ಲಿ 1,000 ಕೋಟಿ ಹಣ ವಶ



ನವದೆಹಲಿ: ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಮತದಾರರನ್ನು ಆಕರ್ಷಿಸಲು ಉದ್ದೇಶಿಸಲಾದ ನಗದು, ಮಾದಕ ದ್ರವ್ಯಗಳು ಮತ್ತು ಮದ್ಯ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ವಶಪಡಿಸಿಕೊಳ್ಳುವಿಕೆಗಳು 1000 ಕೋಟಿ ರೂ.ಗಳನ್ನು ದಾಟಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಈ ವರ್ಷದ ಫೆಬ್ರವರಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಹಣ, ಆಲ್ಕೋಹಾಲ್, ಡ್ರಗ್ಸ್, ಅಮೂಲ್ಯವಾದ ಲೋಹಗಳು ಮತ್ತು ಉಚಿತ ವಸ್ತುಗಳು ಸೇರಿದಂತೆ 472 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಹಾಗೇ, ತಮಿಳುನಾಡಿನಲ್ಲಿ 599 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ವಶಪಡಿಸಿಕೊಳ್ಳಲಾಗಿದೆ.

ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಉದ್ದೇಶದಿಂದ 5 ಸಾವಿರಕ್ಕೂ ಹೆಚ್ಚು ಫ್ಲೈಯಿಂಗ್ ಸ್ಕ್ವಾಡ್ ತಂಡಗಳು ಮತ್ತು 5 ಸಾವಿರಕ್ಕೂ ಹೆಚ್ಚು ಸ್ಟ್ಯಾಟಿಕ್ ಸರ್ವೈಲೆನ್ಸ್ ತಂಡಗಳನ್ನು ನಿಯೋಜಿಸಲಾಗಿದೆ. ಪ.ಬಂಗಾಳದಲ್ಲಿ ಇಂದು ಮೊದಲ ಹಂತ, ಏ.29ರಂದು 2ನೇ ಹಂತದ ಚುನಾವಣೆ ನಡೆಯಲಿದೆ. ತಮಿಳುನಾಡಿನಲ್ಲಿ ಇಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ.

ಹಾರ್ಮುಜ್‌ನಲ್ಲಿ ಎರಡು ಹಡಗುಗಳು ಇರಾನ್ ವಶಕ್ಕೆ!



ಟೆಹ್ರಾನ್: ಇರಾನ್‌ನ ಅರೆಸೈನಿಕ ಕ್ರಾಂತಿಕಾರಿ ಗಾರ್ಡ್ ಬುಧವಾರ ಎರಡು ಹಡಗುಗಳನ್ನು ವಶಪಡಿಸಿಕೊಂಡಿದ್ದು, ಈಗ ಅವುಗಳನ್ನು ಇರಾನ್ ಕಡೆಗೆ ಕರೆದೊಯ್ಯಲಾಗುತ್ತಿದೆ ಎಂದು ಇರಾನ್ ರಾಜ್ಯ ದೂರದರ್ಶನ ತಿಳಿಸಿದೆ. ವರದಿಯು ಹಡಗುಗಳನ್ನು ಎಂಎಸ್‌ಸಿ ಫ್ರಾನ್ಸೆಸ್ಕಾ ಮತ್ತು ಎಪಾಮಿನೋಡ್ಸ್ ಎಂದು ಗುರುತಿಸಿದೆ, ಆದರೆ ಅವುಗಳ ಮಾಲೀಕರು ತಕ್ಷಣ ಪ್ರತಿಕ್ರಿಯೆಗೆ ಲಭ್ಯವಿಲ್ಲ.

ಇಸ್ಲಾಮಾಬಾದ್‌ನಲ್ಲಿ ಯೋಜಿತ ಕದನ ವಿರಾಮ ಮಾತುಕತೆಗೆ ಮುಂಚಿತವಾಗಿ ಯುನೈಟೆಡ್ ಸ್ಟೇಟ್ಸ್ ಎರಡು ಇರಾನಿನ ಹಡಗುಗಳನ್ನು ವಶಪಡಿಸಿಕೊಂಡ ನಂತರದ ಈ ಘಟನೆಯು ಉದ್ವಿಗ್ನತೆಯಲ್ಲಿ ಮತ್ತಷ್ಟು ಹೆಚ್ಚಳವನ್ನು ಸೂಚಿಸುತ್ತದೆ. ಇದಕ್ಕೂ ಮುನ್ನ ಬ್ರಿಟಿಷ್ ಮಿಲಿಟರಿಯ ಪ್ರಕಾರ, ಹಾರ್ಮುಜ್ ಜಲಸಂಧಿಯಲ್ಲಿ ಬುಧವಾರ ಒಟ್ಟು ಎರಡು ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಲಾಗಿತ್ತು. ಇದು ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಅಲ್ಲದೆ ಸಂಘರ್ಷವನ್ನು ಕೊನೆಗೊಳಿಸಲು ಪಾಕಿಸ್ತಾನದಲ್ಲಿ ಶಾಂತಿ ಮಾತುಕತೆಗಾಗಿ ಅಮೆರಿಕ ಮತ್ತು ಇರಾನ್ ಅನ್ನು ಒಟ್ಟುಗೂಡಿಸುವ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ.

ಅಮೆರಿಕ ಇತ್ತೀಚೆಗೆ ಇರಾನ್‌ಗೆ ಸಂಬಂಧಿಸಿದ ಹಡಗುಗಳನ್ನು ವಶಪಡಿಸಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ಪ್ರತೀಕಾರವಾಗಿ ಈ ದಾಳಿ ನಡೆದಿರಬಹುದು ಎಂದು ಹೇಳಲಾಗುತ್ತಿದೆ.

ತ್ರಿಶೂರ್ ಸ್ಫೋಟ; ರಾಜ್ಯ ನಿರ್ದಿಷ್ಟ ವಿಪತ್ತು ಘೋಷಣೆ



ತ್ರಿಶೂರ್: ಕೇರಳದ ತ್ರಿಶೂರ್ ಜಿಲ್ಲೆಯ ಮುಂಡತಿಕೋಡ್‌ನಲ್ಲಿರುವ ಪಟಾಕಿ ಉತ್ಪಾದನಾ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ 13 ಜನರು ಸಾವಿಗೀಡಾಗಿದ್ದು, ಇದನ್ನು ರಾಜ್ಯ–ನಿರ್ದಿಷ್ಟ ವಿಪತ್ತು ಎಂದು ಘೋಷಿಸಿರುವುದಾಗಿ ಕಂದಾಯ ಸಚಿವ ಕೆ.ರಾಜನ್ ಹೇಳಿದ್ದಾರೆ. ಇಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸ್ಫೋಟದ ನಂತರ ಬೆಳಿಗ್ಗೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಆನ್‌ಲೈನ್ ಕ್ಯಾಬಿನೆಟ್ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಸ್ಫೋಟದಲ್ಲಿ ಮೃತಪಟ್ಟವರ ಕುಟುಂಬಗಳಿಗೆ 14 ಲಕ್ಷ ಆರ್ಥಿಕ ನೆರವು ನೀಡಲು ಸಹ ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ. ಸ್ಫೋಟವನ್ನು ರಾಜ್ಯ ನಿರ್ದಿಷ್ಟ ವಿಪತ್ತು ಎಂದು ಘೋಷಿಸಲು ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯ ಕಾರ್ಯಕಾರಿ ಸಮಿತಿಗೆ ನಿರ್ದೇಶನಗಳನ್ನು ನೀಡಲಾಗಿದೆ. ಇದರ ಜೊತೆಗೆ, ಘಟನೆ ಕುರಿತಂತೆ ನ್ಯಾಯಾಂಗ ತನಿಖೆಗೂ ಸರ್ಕಾರ ಆದೇಶಿಸಿದೆ. ಜಸ್ಟಿಸ್ ಸಿ.ಎನ್.ರಾಮಚಂದ್ರನ್ ನಾಯರ್ ನೇತೃತ್ವದ ಏಕಸದಸ್ಯ ಸಮಿತಿಯು ಈ ಬಗ್ಗೆ ತನಿಖೆ ನಡೆಸಲಿದೆ. 14 ಲಕ್ಷ ಆರ್ಥಿಕ ನೆರವಿನ ಬಗ್ಗೆ ಮಾತನಾಡಿದ ಸಚಿವರು, ರಾಜ್ಯ ವಿಪತ್ತು ಸ್ಪಂದನಾ ನಿಧಿಯಿಂದ 4 ಲಕ್ಷ ಮತ್ತು ಉಳಿದ 10 ಲಕ್ಷವನ್ನು ಸಿಎಂಡಿಆರ್‌ಎಫ್ ನಿಧಿಯಿಂದ ನೀಡಲಾಗುವುದು ಎಂದು ಹೇಳಿದ್ದಾರೆ


7 ದಿನಗಳ ಮಳೆ ರಜೆ ನೀಡಿದ ಕಂಪನಿ



ಬೀಜಿಂಗ್: ಚೀನಾದ ಹುನಾನ್ ಪ್ರಾಂತ್ಯದ ಸ್ನ್ಯಾಕ್ ಕಂಪನಿಯೊಂದು ತನ್ನ ಉದ್ಯೋಗಿಗಳಿಗೆ ಮಳೆಯ ದಿನಗಳಲ್ಲಿ ಮನೆಯಲ್ಲೇ ಇರಲು 'ರೈನ್ ಲೀವ್' ಆಫರ್ ನೀಡಿದೆ. ಲಾಟರಿ ಮೂಲಕ ಆಯ್ಕೆಯಾದ ಅದೃಷ್ಟವಂತ ಉದ್ಯೋಗಿಗೆ 7 ದಿನಗಳ ಕಾಲ ಈ ವಿಶೇಷ ರಜೆ ಸಿಕ್ಕಿದೆ. ಇದೀಗ ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗುತ್ತಿದೆ. ಚೀನಾದ ಪ್ರಸಿದ್ಧ ಸ್ಪೈಸಿ ಸ್ನ್ಯಾಕ್ ಕಂಪನಿ ಮಾಲಾ ವಾಂಗ್ಜಿ ತನ್ನ ಉದ್ಯೋಗಿಗಳಿಗಾಗಿ ವಾರ್ಷಿಕ ಲಾಟರಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ದಕ್ಷಿಣ ಚೀನಾದಲ್ಲಿ ಏಪ್ರಿಲ್ ತಿಂಗಳಲ್ಲಿ ಅತಿಯಾದ ಮಳೆ ಮತ್ತು ಆರ್ದ್ರತೆ ಇರುವುದರಿಂದ, ಉದ್ಯೋಗಿಗಳಿಗೆ ಪ್ರಯಾಣ ಮಾಡುವುದು ಕಷ್ಟ ಎಂಬ ಅಂಶವನ್ನು ಮನಗಂಡು ಕಂಪನಿಯ ಮಾಲೀಕರು ಈ ವಿಭಿನ್ನ ಯೋಜನೆಯನ್ನು ಘೋಷಿಸಿದ್ದರು.

ಕಂಪನಿ ಮಾರ್ಕೆಟಿಂಗ್ ಮುಖ್ಯಸ್ಥ ಜಂಗ್ ಜಿಲಾಂಗ್ ಹಂಚಿಕೊಂಡಿರುವ ವೀಡಿಯೊದಲ್ಲಿ ಉದ್ಯೋಗಿಗಳು ಲಾಟರಿ ಎತ್ತುವುದನ್ನು ಕಾಣಬಹುದು. ಅಲ್ಲಿ 7 ದಿನಗಳ ಸಂಪೂರ್ಣ ಸಂಬಳ ಸಹಿತ ಮಳೆ ರಜೆ ಇದನ್ನು ಉದ್ಯೋಗಿ ತನಗೆ ಬೇಕಾದಾಗ ಬಳಸಬಹುದು. ಆಟೋಮ್ಯಾಟಿಕ್ ಡ್ರೈಯರ್, ಹೇರ್ ಡ್ರೈಯರ್, ರೈನ್ ಬೂಟ್ಸ್, ಛತ್ರಿ ಮತ್ತು ಡಿಹ್ಯೂಮಿ ಡಿಫೈಯರ್ ಸೇರಿ ಹಲವು ಉಪಯುಕ್ತ ವಸ್ತುಗಳು ನೀಡಲಾಗಿದೆ. ಮಳೆಯ ದಿನಗಳಲ್ಲಿ ಕೆಲಸಕ್ಕೆ 2 ಬಾರಿ ತಡವಾಗಿ ಬಂದರೂ ಯಾವುದೇ ದಂಡ ವಿಧಿಸದ ಲೇಟ್–ಫಾರ್–ವರ್ಕ್ ಪಾಸ್ ಕೂಡ ನೀಡಲಾಗಿದೆ.

ನಿನ್ನಿಂದ ಟ್ರಾಫಿಕ್ ಜಾಮ್, ಗೆಟ್ ಔಟ್': ಸಚಿವರ ವಿರುದ್ಧ ಕಿಡಿಕಾರಿದ ಮಹಿಳೆ



ಮುಂಬೈ: ಮಹಿಳಾ ಮೀಸಲಾತಿ ಕುರಿತಂತೆ ಮಹಾರಾಷ್ಟ್ರ ಬಿಜೆಪಿಯು ಮುಂಬೈನಲ್ಲಿ ರ್‍ಯಾಲಿ ಹಮ್ಮಿಕೊಂಡಿದ್ದು, ರ್‍ಯಾಲಿಯಿಂದಾಗಿ ಟ್ರಾಫಿಕ್ ಜಾಮ್ ಉಂಟಾಗಿತ್ತು ಇದರಿಂದ ರೊಚ್ಚಿಗೆದ್ದ ಮಹಿಳೆ, ಸಚಿವರನ್ನು ನಿಲ್ಲಿಸಿ ಕಿಡಿಕಾರಿರುವ ಘಟನೆ ನಡೆದಿದೆ. ಮಹಿಳೆ, ಸಚಿವರನ್ನು ತರಾಟೆಗೆ ತೆಗೆದುಕೊಂಡಿರುವ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ್ದು, ಬಿಜೆಪಿ ಆಂದೋಲನದ ವಿರುದ್ಧ ಭಾರೀ ಆಕ್ರೋಶ ವ್ಯಕ್ತವಾಗಿದೆ. ಆಕ್ರೋಶಗೊಂಡ ಮಹಿಳೆ ಸಚಿವರನ್ನು ನಿಲ್ಲಿಸಿ, ನಿನ್ನಿಂದಲೇ ಟ್ರಾಫಿಕ್ ಜಾಮ್ ಗೆಟ್‌ಔಟ್ ಎಂದು ಬೈದಿದ್ದಾರೆ.

ಮುಂಬೈನ ವೊರ್ಲಿ ಪ್ರದೇಶದಲ್ಲಿ ಸಚಿವ ಗಿರೀಶ್ ಮಹಾಜನ್ ನೇತೃತ್ವದಲ್ಲಿ ರ್‍ಯಾಲಿ ನಡೆಯುತ್ತಿತ್ತು. ವಿರೋಧ ಪಕ್ಷಗಳುಮೀಸಲಾತಿ ಮಸೂದೆಗೆ ವಿರೋಧಿಸುವುದು ಎಂಬುದನ್ನು ಜನರಿಗೆ ತಿಳಿಸಲು ಬಿಜೆಪಿ ಈ ರ್‍ಯಾಲಿ ಆಯೋಜಿಸಿತ್ತು. 'ಗೆಟ್‌ಔಟ್ ಫ್ರಂ ಹಿಯರ್.. ನೀವು ಟ್ರಾಫಿಕ್ ಜಾಮ್ ಉಂಟುಮಾಡುತ್ತಿದ್ದೀರಿ'ಎಂದು ಮಹಿಳೆ ಜೋರಾಗಿ ಕೂಗಾಡಿದ್ದಾರೆ. ಈ ರೀತಿ ವಾಹನ ಸಂಚಾರಕ್ಕೆ ಅಡ್ಡಿಪಡಿಸುವ ಬದಲು ಹತ್ತಿರದ ತೆರೆದ ಮೈದಾನದಲ್ಲಿ ರ್‍ಯಾಲಿ ನಡೆಸಲು ಸಾಧ್ಯವಿಲ್ಲವೇ'ಎಂದು ತಿಳಿ ಹೇಳಿದ್ದಾರೆ.

ಮಹಿಳೆಯನ್ನು ಮಹಾಜನ್ ಸಮಾಧಾನಪಡಿಸಲು ಯತ್ನಿಸಿದ್ದಾರೆ. ಇದಕ್ಕೆ ಸೊಪ್ಪು ಹಾಕದ ಮಹಿಳೆ, ನಿಮಗೆ ಅರ್ಥವಾಗಲಿಲ್ಲವೇ? ನಿಮ್ಮಿಂದ ಏನು ತಪ್ಪಾಗಿದೆ? ನೂರಾರು ಜನರು ಕಾಯುತ್ತಿದ್ದಾರೆ ಎಂದು ಮತ್ತೆ ವಾಗ್ದಾಳಿ ನಡೆಸಿದ್ದಾರೆ.

ಇಂದಿನಿಂದ ಕೊಡವ ಕೌಟುಂಬಿಕ ಕೇರ್ ಬಲಿ ನಮ್ಮೆ

ನಾಪೋಕ್ಲು, ಏ.22(ದುಗ್ಗಳ)– ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲಾ ಜನರಲ್ ಕೆ.ಎಸ್.ತಿಮ್ಮಯ್ಯ ಮೈದಾನದಲ್ಲಿ 5ನೇ ವರ್ಷದ ಕೊಡವ ಕೌಟುಂಬಿಕ ಕೇರ್ ಬಲಿ ನಮ್ಮೆ ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿದೆ.

ನಾಪೋಕ್ಲುವಿನ ಚೀಯಕಪೂವಂಡ ಕುಟುಂಬ ಐದನೇ ವರ್ಷದ ಕೊಡವ ಕೌಟುಂಬಿಕ ಕೇರ್ ಬಲಿ ನಮ್ಮೆಯ ಸಾರಥ್ಯ ವಹಿಸಿದ್ದು ಜಿದ್ದಾಜಿದ್ದಿನ ಪೈಪೋಟಿಗಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಮೈದಾನವನ್ನು ಸಜ್ಜುಗೊಳಿಸುವ ಅಂತಿಮ ಹಂತದ ಕಾರ್ಯಗಳನ್ನು ಮುಗಿದಿದ್ದು, ಬುಧವಾರ ಮೈದಾನದಲ್ಲಿ, ಮಾರ್ಕಿಂಗ್, ಶಾಮಿಯಾನ ಅಳವಡಿಕೆ ಕಾರ್ಯಗಳು ನಡೆದವು.

ಐದನೇ ವರ್ಷದ ಕೊಡವ ಕೌಟುಂಬಿಕ ಕೇರ್ಬಲಿ ನಮ್ಮೆ ಗುರುವಾರ ಉದ್ಘಾಟನೆಗೊಳ್ಳಲಿದೆ. ಪಟ್ಟಣದ ಫೊನ್ನಾಡ್ಸ್ ಸೂಪರ್ ಮಾರ್ಕೆಟ್ ಬಳಿಯಿಂದ ಕೆಪಿಎಸ್ ಶಾಲಾ ಮೈದಾನದವರೆಗೆ ಚೀಯಕಪೂವಂಡ ಕುಟುಂಬಸ್ಥರು, ಕೊಡವ ಟಗ್ ಆಫ್ ಅಕಾಡೆಮಿ, ತವರು ಮನೆ ಯುವತಿಯರು, ಬಂಧುಗಳು, ಊರಿನವರು ಮೆರವಣಿಗೆ ನಡೆಸಲಿದ್ದಾರೆ. ಈ ಬಾರಿ ವಿಶೇಷವಾಗಿ 16 ವರ್ಷ ವಯೋಮಿತಿಯೊಳಗಿನ ಮಕ್ಕಳಿಗೆ ವಿಶೇಷ ಸ್ಪರ್ಧೆ ಏರ್ಪಡಿಸಲಾಗಿದ್ದು, ಇದರಲ್ಲಿ 22 ತಂಡಗಳು ಪಾಲ್ಗೊಂಡಿವೆ. ಪುರುಷರ ವಿಭಾಗದಲ್ಲಿ 189 ಕುಟುಂಬ ಹಾಗೂ ಮಹಿಳಾ ವಿಭಾಗದಲ್ಲಿ 85 ತಂಡಗಳು ಪಾಲ್ಗೊಳ್ಳಲು ನೋಂದಾಯಿಸಿಕೊಂಡಿವೆ ಎಂದು ಉತ್ಸವ ಸಮಿತಿ ಅಧ್ಯಕ್ಷ ಚಿಯಕ ಬೋಂಡ ಕೆ.ಬೋಪಣ್ಣ ಮಾಹಿತಿ ನೀಡಿದರು.


ಕೊಡವ ಕೌಟುಂಬಿಕ ಕೇರ್ ಬಲಿ ನಮ್ಮೆಗಾಗಿ ಸಜ್ಜುಗೊಂಡಿರುವ ಮೈದಾನ

ಕೊಡವ ಕುಟುಂಬಗಳ ನಡುವಿನ ಹಗ್ಗ ಜಗ್ಗಾಟ ಸ್ಪರ್ಧೆ ಈ ಬಾರಿ ಭಾರತೀಯ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗುತ್ತಿದೆ ಎಂದು ಅಕಾಡೆಮಿ ಅಧ್ಯಕ್ಷ ಕಿರಣ್ ಪೊನ್ನಪ್ಪ ತಿಳಿಸಿದ್ದಾರೆ. ಈ ಬಾರಿ ಹೆಚ್ಚು ತಂಡಗಳು ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದು, ಚೀಯಕ ಪೂವಂಡ ಕೇರ್ ಬಲಿ ನಮ್ಮೆ ಭಾರತೀಯ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಲಿದೆ ಎಂದು ತಿಳಿಸಿದರು. ಅಕಾಡೆಮಿ ಪ್ರಮುಖರು ಚೀಯಕಪೂವಂಡ ಕೇರ್ ಬಲಿ ಉತ್ಸವ ಸಮಿತಿ ಪದಾಧಿಕಾರಿಗಳು ವಿವಿಧ ಸಮಿತಿಗಳ ಸದಸ್ಯರು ಕುಟುಂಬಸ್ಥರು ಉಪಸ್ಥಿತರಿದ್ದರು.

ಕೊಡವ ಕೌಟುಂಬಿಕ ಕೇರ್ ಬಲಿ ನಮ್ಮೆ ಸಮಾರಂಭವನ್ನು ಶಾಸಕ ಎ.ಎಸ್. ಪೊನ್ನಣ್ಣ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸ್ಪೋರ್ಟ್ಸ್ ಅಥಾರಿಟಿ ಆಫ್ ಕರ್ನಾಟಕದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ವಿಧಾನಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ, ನಾಪೋಕ್ಲು ಕೊಡವ ಸಮಾಜ ಅಧ್ಯಕ್ಷ ಮುಂಡಂಡ ಸಿನಾ ಮಾಚಯ್ಯ, ರೈತ ಸಂಘದ ಅಧ್ಯಕ್ಷ ಕಾಡ್ಯ ಮಾಡ ಸೋಮಯ್ಯ, ಕೆಪಿಎಸ್ ಶಾಲೆಯ ಪ್ರಾಂಶುಪಾಲ ಮೇದುರ ವಿಶಾಲ್, ಕಾಫಿ ಬೆಳೆಗಾರ ಬೋಳ್ಳಚೆಟ್ಟಿರ ಸುರೇಶ್ ಪಾಲ್ಗೊಳ್ಳುವರು. ಕೇರ್ ಬಲಿ ನಮ್ಮೆ ಅಧ್ಯಕ್ಷ ಸಿ.ಕೆ.ಬೋಪಣ್ಣ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ.

ಕುಟುಂಬದ ಪಟ್ಟೇದಾರ ಸಿ.ಎಂ. ಅಪ್ಪಚ್ಚು, ಕೊಡವ ಟಗ್ ಆಫ್ ವಾರ್ ಅಕಾಡೆಮಿ ಅಧ್ಯಕ್ಷ ಕಿರಣ್ ಪೊನ್ನಪ್ಪ ಉಪಸ್ಥಿತರಿರುವರು.

ರಸಗೊಬ್ಬರದ ತೂಕದಲ್ಲಿ ವ್ಯತ್ಯಾಸ: ಪ್ರತಿಭಟನೆ ಎಚ್ಚರಿಕೆ

ಮಡಿಕೇರಿ,ಏ.22– ರಸಗೊಬ್ಬರದ ತೂಕದಲ್ಲಿ ವ್ಯತ್ಯಾಸವಿರುವ ಬಗ್ಗೆ ಹಾತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಅಸಮಾಧಾನ ವ್ಯಕ್ತಪಡಿಸಿದೆ. ಮಡಿಕೇರಿಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ತೂಕ ವ್ಯತ್ಯಾಸವಿರುವ ಗೊಬ್ಬರದ ಚೀಲಗಳ ಲೋಡ್ ಸಹಿತ ಆಗಮಿಸಿದ ಸಂಘದ ಆಡಳಿತ ಮಂಡಳಿ ಸದಸ್ಯರು ಈ ಕುರಿತು ಅಧಿಕಾರಿಗಳ ಗಮನ ಸೆಳೆದರು. ಜಂಟಿ ಕೃಷಿ ನಿರ್ದೇಶಕರ ಕಚೇರಿ ಎದುರು ಗೊಬ್ಬರದ ಲೋಡ್ ತಂದು ತೂಕ ಮಾಡಿದಾಗ 50 ಕೆಜಿ ಮೂಟೆಗಳಲ್ಲಿ ತೂಕ ಕಡಿಮೆ ಇರುವುದು ಗಮನಕ್ಕೆ ಬಂದಿದೆ.

ಇದನ್ನು ಪರಿಶೀಲಿಸಿದ ಕೃಷಿ ಉಪ ನಿರ್ದೇಶಕ ಸೋಮಶೇಖರ್, ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು. ಸರಬರಾಜು ಮಾಡಿದ ಸಂಸ್ಥೆಯಿಂದ ಉತ್ತರ ಪಡೆಯಲಾಗುವುದು. ಈ ವಿಷಯದಲ್ಲಿ ರೈತ ಪರವಾಗಿ ಸ್ಪಂದಿಸಲಾಗುವುದು. ಗೊಬ್ಬರ ಮೂಟೆಯ ಬ್ಯಾಚ್ ಅನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದರು.



ಸಂಘಕ್ಕೆ ಫೆ.18 ಮತ್ತು ಮಾ.5ರಂದು ಸರಬರಾಜಾದ 51 ಟನ್ ಗೊಬ್ಬರ ತೂಕದಲ್ಲಿ ವ್ಯತ್ಯಾಸವಾಗಿದ್ದು, ಇದರಿಂದ ರೈತರಿಗೆ ಅನ್ಯಾಯವಾಗಿದೆ ಎಂದು ಹಾತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ ಆಕ್ರೋಶ ವ್ಯಕ್ತಪಡಿಸಿದರು. ತೂಕ ವ್ಯತ್ಯಾಸವಿರುವುದು ಗಮನಕ್ಕೆ ಬಂದ ತಕ್ಷಣ ಉತ್ಪಾದಕ ಸಂಸ್ಥೆಯ ಗಮನಕ್ಕೂ ತರಲಾಗಿದೆ. ಈ ಗೊಬ್ಬರ ದೇಶದ ಎಲ್ಲೆಡೆ ಪೂರೈಕೆ ಆಗುವುದರಿಂದ ರೈತರಿಗೆ ಮೋಸವಾದಂತಾಗಿದೆ. ರೈತರಿಗೆ ಸೂಕ್ತ ಗೊಬ್ಬರವೂ ಇಲ್ಲ, ಹಣವೂ ಇಲ್ಲದ ಪರಿಸ್ಥಿತಿ ಸೃಷ್ಟಿಯಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿ, ಕೃಷಿ ಅಧಿಕಾರಿಗಳು ಸೇರಿದಂತೆ ಶಾಸಕರಿಗೆ ಲಿಖಿತ ಮನವಿ ಸಲ್ಲಿಸಲಾಗುವುದು. ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಕಾನೂನಾತ್ಮಕವಾಗಿ ಹೋರಾಡಲಾಗುವುದು ಎಂದು ಬಾಂಡ್ ಗಣಪತಿ ಎಚ್ಚರಿಸಿದರು. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಕೃಷಿ ಇಲಾಖೆ ಕಚೇರಿಗೆ ಬೀಗ ಜಡಿಯಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹಾತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ಕಾವೇರಿ ಮಂದಣ್ಣ, ನಿರ್ದೇಶಕರಾದ ಕೊಲ್ಲೀರ ಗೋಪಿ ಚಿಣ್ಣಪ್ಪ, ಪುಲಿಯಂಡ ದಿನೇಶ್, ತೀತಮಾಡ ಗಣಪತಿ, ಪಟ್ರಂಗಡ ಗಂಗಮ್ಮ, ಚೇಂದಂಡ ರೂಪ, ಕಾರ್ಯ ನಿರ್ವಹಣಾಧಿಕಾರಿ ಬಿ.ಎಂ.ಪ್ರದೀಪ್ ಹಾಜರಿದ್ದರು.

ಮುಳ್ಳುಸೋಗೆಯ ರೌಡಿಶೀಟರ್ ಸಾಗರ್ ಗಡಿಪಾರಿಗೆ ಆದೇಶ

ಕುಶಾಲನಗರ, ಏ.22–ಸಾರ್ವಜನಿಕರ ನೆಮ್ಮದಿಗೆ ಭಂಗ ತಂದು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದ ಆರೋಪದ ಮೇರೆಗೆ ಪಟ್ಟಣದ ರೌಡಿ ಆಸಾಮಿ ಎಂಎಸ್ ಸಾಗರ್ ಅವರನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಜಿಲ್ಲಾ ಪಲೀಸ್ ವರಿಷ್ಠಾಧಿಕಾರಿ ಆದೇಶ ನೀಡಿದ್ದಾರೆ.



ತಾಲೂಕಿನ ಮುಳ್ಳುಸೋಗೆ ಗ್ರಾಮದ ನಿವಾಸಿ ಲೇಟ್ ಶಿವಣ್ಣ ಅವರ ಪುತ್ರ 34 ವರ್ಷದ ಮನೆ ಬ್ರೋಕರ್ ಕೆಲಸ ಮಾಡಿಕೊಂಡಿದ್ದ ರೌಡಿಶೀಟರ್ ಎಂಎಸ್ ಸಾಗರ್ ವಿರುದ್ಧ ಟೌನ್ ಪೊಲೀಸ್ ಠಾಣೆಯಲ್ಲಿ ಸುಮಾರು 11 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಸಾರ್ವಜನಿಕ ನೆಮ್ಮದಿ, ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಟೌನ್ ಪೊಲೀಸ್ ಠಾಣೆ ಬಿ.ಆರ್.ಪ್ರದೀಪ್ ವರದಿಯ ಮೇರೆಗೆ ಜಿಲ್ಲಾ ಎಸ್‌ಪಿ ಅವರು ರೌಡಿಶೀಟರ್‌ನನ್ನು ಕೊಡಗು ಜಿಲ್ಲೆಯಿಂದ ಕೊಪ್ಪಳ ಜಿಲ್ಲೆಗೆ ಗಡಿಪಾರು ಮಾಡಿ ಆದೇಶಿಸಿದ್ದು, ಈ ಮೂಲಕ ಜಿಲ್ಲೆಯಲ್ಲಿ ಪುಡಿ ರೌಡಿಗಳಿಗೆ ಗಡಿಪಾರಿನ ಮೂಲಕ ಎಚ್ಚರಿಕೆಯನ್ನು ನೀಡಲಾಗಿದೆ.

ದಕ್ಷಿಣ ಮಾರಿಯಮ್ಮ ದೇವಿ ಮಹಾ ಕುಂಭಾಭಿಷೇಕ

ವಿರಾಜಪೇಟೆ, ಏ.22– ಪಟ್ಟಣದ ತೆಲುಗರ ಬೀದಿಯಲ್ಲಿರುವ ಶ್ರೀ ದಕ್ಷಿಣ ಮಾರಿಯಮ್ಮ ದೇವಿ ಮಹಾ ಕುಂಭಾಭಿಷೇಕ ಪೂಜಾ ಸೇವಾ ಕಾರ್ಯಗಳು ಮೂರು ದಿನಗಳ ಕಾಲ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ನಡೆಯಿತು.

ಶ್ರೀಮಾರಿಯಮ್ಮ ಮತ್ತು ಶ್ರೀಅಂಗಾಳ ಪರಮೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ನಡೆದ ಮಹಾ ಕುಂಭಾಭಿಷೇಕದ ಪ್ರಯುಕ್ತ ದೇವಾಲಯದಲ್ಲಿ ಮೊದಲ ದಿನದಂದು ಶ್ರೀ ಗಣಪತಿ ಪೂಜೆ, ವಾಸ್ತುಶಾಂತಿ, ಮೃತ್ ಸಂಗ್ರಹಣ, ಅಂಕುರಾರ್ಪಣೆ, ರಕ್ಷಾ ಬಂಧನ, ಮಧ್ಯಾಹ್ನ ಮಹಾಪೂಜೆ ನಂತರ ಪ್ರಸಾದ ವಿತರಣೆ, ಮರು ದಿನ ಮುಂಜಾನೆ ವಿಘ್ನೇಶ್ವರ ಪೂಜೆ, ಶಿವ ಸೂರ್ಯ ಪೂಜೆ, ಯಾಗಪೂಜೆ, ಮೂಲಮಂತ್ರ, ಅಸ್ತಮಂತ್ರ ಹೋಮ, ಮಹಾ ಪೂಜೆ ನಡೆಯಿತು. ಕೊನೆಯ ದಿನದಂದು ಮಹಾ ಗಣಪತಿ ಪೂಜೆ ನಡೆಯಿತು. ಉತ್ಸವದ ಮೂರು ದಿನಗಳು ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಕುಂಭಾಭಿಷೇಕ ಪೂಜಾ ಸೇವಾ ಕಾರ್ಯದಲ್ಲಿ ದೇವಾಲಯದ ಅಧ್ಯಕ್ಷರು, ಸದಸ್ಯರು ಹಾಗೂ ಪಟ್ಟಣ ಮತ್ತು ಗ್ರಾಮಗಳಿಂದಲೂ ಭಕ್ತರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು.

ವಿದ್ಯುತ್ ಕಂಬಕ್ಕೆ ಆಟೋ ಡಿಕ್ಕಿ: ಚಾಲಕ ಸಾವು

ಮಡಿಕೇರಿ, ಏ.22–ಚಾಲಕನ ನಿಯಂತ್ರಣ ತಪ್ಪಿದ ಆಟೋ ಅಪಘಾತಕ್ಕೀಡಾಗಿ ಚಾಲಕ ಮೃತಪಟ್ಟು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.



ಅಂಚೆತಿಟ್ಟು ಹಾಡಿ ನಿವಾಸಿ ವೈ.ಎನ್.ಮಾದ ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಅಪಘಾತದಲ್ಲಿ ಸುನೀಲ್ ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಲಕ ಮಾದ ಅವರ ನಿಯಂತ್ರಣ ತಪ್ಪಿದ ಆಟೋ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ.

ಘಟನಾ ಸ್ಥಳಕ್ಕೆ ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್ ಮತ್ತವರ ಸಿಬ್ಬಂದಿ ಭೇಟಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮಲ್ಲಿಗೆರೆ ಡೇರಿಗೆ ಅಧ್ಯಕ್ಷರ ಅವಿರೋಧ ಆಯ್ಕೆ


ಅಧ್ಯಕ್ಷರಾಗಿ ಆಯ್ಕೆಯಾದ ಎಂ.ಡಿ.ಹಲಗೇಗೌಡರನ್ನು ನಿರ್ದೇಶಕರು ಅಭಿನಂದಿಸಿದರು.

ಪಾಂಡವಪುರ, ಏ.22– ತಾಲೂಕಿನ ಮಲ್ಲಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎಂ.ಡಿ. ಹಲಗೇ ಗೌಡ ಅವರು ಅವಿರೋಧ'ವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಹಿಂದಿನ ಅಧ್ಯಕ್ಷ ರಾಜೇಗೌಡರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ಅದರಂತೆ ನಡೆದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಹಲಗೇಗೌಡರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ರಂಜಿತ್ ಹಲಗೇಗೌಡರ ಆಯ್ಕೆಯನ್ನು ಘೋಷಿಸಿದರು.

ಹಲಗೇಗೌಡ ಅವರು ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಿಸಿದರು. ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ತಾಪಂ ಮಾಜಿ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್ ಮಾತನಾಡಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರ ಸೂಚನೆ ಯಂತೆ ತೆರವಾದ ಡೇರಿ ಅಧ್ಯಕ್ಷ ಸ್ಥಾನಕ್ಕೆ ಹಲಗೇಗೌಡ ಅವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನೂತನ ಅಧ್ಯಕ್ಷರು ಮುಂದಿನ ದಿನಗಳಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಡೇರಿ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕು, ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಸಂಘಕ್ಕೆ ತಂದು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ಉಪಾಧ್ಯಕ್ಷೆ ಅನಿತಾ, ಮಾಜಿ ಅಧ್ಯಕ್ಷ ರಾಜೇಗೌಡ, ನಿರ್ದೇಶಕರಾದ ರಘು, ಎಂ.ಎಸ್.ದೇವರಾಜು, ಮಹೇಂದ್ರಚಾರಿ, ಪುಟ್ಟರಾಮೇಗೌಡ, ಎ.ಎಸ್.ವಿನುತ, ಅಶೋಕ್, ಎಂ.ಎಸ್.ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ರವಿಕರ, ಚಂದ್ರೇ ಗೌಡ, ಎಂ.ಎಸ್.ಕುಮಾರ್, ಎಂ.ಎಸ್. ಜಗದೀಶ್, ಎಂ.ಬಿ.ಸುರೇಶ್, ಯ.ಚಲುವೇಗೌಡ, ಎಂ.ಕೆ.ರಾಜೇಶ್, ಉಮೇಶ್ ಶೆಟ್ಟಿ, ರಾಮಕೃಷ್ಣೇಗೌಡ, ಯ.ಸ್ವಾಮೀಗೌಡ, ಹರೀಶ್, ನಾಗಾಚಾರಿ, ಪ್ರಶಾಂತ್ ಇದ್ದರು.

ದಲಿತಪರ ಸಂಘಟನೆಯಿಂದ ತಮಟೆ ಚಳುವಳಿ

ಕೆ.ಆರ್.ಪೇಟೆ, ಏ.22–ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ಆದೇಶ ಮಾಡಿ ಎರಡು ತಿಂಗಳು ಕಳೆದರೂ ಸಹ ಯಾವುದೇ ಕ್ರಮ ವಹಿಸದೇ ಇರುವ ಪುರಸಭಾ ಆಡಳಿತ ಹಾಗೂ ತಾಲೂಕು ಆಡಳಿತದ ಕ್ರಮವನ್ನು ಖಂಡಿಸಿ ಹೊಸಹೊಳಲು ಗ್ರಾಮದ ನೊಂದ ದಲಿತ ಕುಟುಂಬಗಳ ಸದಸ್ಯರು ವಿವಿಧ ದಲಿತಪರ ಸಂಘಟನೆಗಳ ನೇತೃತ್ವದಲ್ಲಿ ಪುರಸಭಾ ಕಚೇರಿ ಮುಂದೆ ತಮಟೆ ಚಳುವಳಿ ನಡೆಸಿದರು.

ನಿವೇಶನಗಳನ್ನು ಅರ್ಜಿದಾರರಾದ ಕುಳುವಾಡಿಕೆ ವಂಶಸ್ಥರಾದ ಡಿ.ಸ್ವಾಮಿ ಸೇರಿದಂತೆ 9 ಕುಟುಂಬಗಳಿಗೆ ತಕ್ಷಣವೇ ಹಂಚಿಕೆ ಮಾಡಿ ಅನುಪಾಲನಾ ವರದಿ ನೀಡುವಂತೆ ತಹಸೀಲ್ದಾರ್ ಮತ್ತು ಪುರಸಭಾ ಮುಖ್ಯಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನು ಸೂಚಿತ ಬುಡಕಟ್ಟುಗಳ ಆಯೋಗವು ಆದೇಶ ಮಾಡಿ ಪತ್ರ ಬರೆದಿರುತ್ತದೆ. ಆದರೆ ಇದೂವರೆವಿಗೂ ಪುರಸಭೆಯ ಮುಖ್ಯಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಸುಮ್ಮನಿದ್ದಾರೆ. ಅಮೃತರಾಜ್ ವಿರುದ್ಧ ಎಸ್‌ಸಿಎಸ್‌ಟಿ ದೌರ್ಜನ್ಯ ಕಾಯ್ದೆಯ ಪ್ರಕಾರ ಪ್ರಕರಣ ದಾಖಲಿಸಬೇಕು ಹಾಗೂ ಅವರನ್ನು ಕೂಡಲೇ ಸೇವೆಯಿಂದ ಅಮಾನತು ಮಾಡಬೇಕು ಎಂದು ಪ್ರತಿಭಟನಾಕಾರರು ಮೇಲಧಿಕಾರಿಗಳನ್ನು ಒತ್ತಾಯ ಮಾಡಿದರು.


ಪುರಸಭಾ ಕಚೇರಿ ಎದುರು ದಲಿತ ಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಸದರಿ ಪ್ರಕರಣದಲ್ಲಿ ದಿವ್ಯ ನಿರ್ಲಕ್ಷ್ಯ ವಹಿಸಿರುವ ಪುರಸಭೆಯ ಮುಖ್ಯಾಧಿಕಾರಿ ಅಶೋಕ್ ಅವರ ವಿರುದ್ಧವೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ಮಾತಂಗಿ ಮಾದಿಗ ಸಮಾಜ ಪರಿವರ್ತನ ವೇದಿಕೆ ಮಂಡ್ಯ ಜಿಲ್ಲಾಧ್ಯಕ್ಷ ಕುಮಾರ್ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಮಾತಂಗಿ ಮಾದಿಗ ಸಮಾಜ ಪರಿವರ್ತನ ವೇದಿಕೆ ರಾಜ್ಯಾಧ್ಯಕ್ಷ ಪ್ರಭು ಹಿತ್ತಲಮನಿ, ರಾಜ್ಯ ಕಾರ್ಯದರ್ಶಿ ಮಹೇಶ್ ಹಿತ್ತಲಮನಿ, ತಾಲೂಕು ಅಧ್ಯಕ್ಷರಾದ ಆಲೇನಹಳ್ಳಿ ಚಲುವರಾಜು, ಜಿಲ್ಲಾ ಉಪಾಧ್ಯಕ್ಷ ವಿಷ್ಣುರಾಜ್, ಹೆಚ್.ಡಿ. ರವಿಕುಮಾರ್, ಅನಿಲ್‌ಕುಮಾರ್, ಗಣೇಶ್, ಸ್ವಾಮಿ, ಮಂಜು, ಹೊಸಹೊಳಲು ಅನಿಲ್, ಶಿವರಾಜ್, ಕಿರಣ್, ಮಧು, ಸಚಿನ್. ಮೂಡನಹಳ್ಳಿ ದೇವರಾಜು, ಶಿವರಾಮ್ ಸಣ್ಣಮುತ್ತಮ್ಮ ರಯನಹಳ್ಳಿ ರಮೇಶ್, ರವಿಕುಮಾರ್ ಸೇರಿದಂತೆ 9 ಕುಟುಂಬಗಳ ಸದಸ್ಯರು ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನೆಯ ಸಂದರ್ಭದಲ್ಲಿ ವೃತ್ತ ನಿರೀಕ್ಷಕ ಸುನೀಲ್ ಕುಮಾರ್ ಮತ್ತು ತಾಲೂಕು ಸಮಾಜ ಕಲ್ಯಾಣಾಧಿಕಾರಿ ಕೆ.ದಿವಾಕರ್ ಬಂದೋಬಸ್ತ್ ನೇತೃತ್ವ ವಹಿಸಿದ್ದರು.

ಮಹಿಳಾ ಮೀಸಲು ಮಸೂದೆಗೆ ಸೋಲು: ಜೆಡಿಎಸ್ ಮಹಿಳಾ ಘಟಕ ಪ್ರತಿಭಟನೆ



ಜೆಡಿಎಸ್ ಮಹಿಳಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಮದ್ದೂರು, ಏ.22– ಇತ್ತೀಚೆಗೆ ಸಂಸತ್‌ನಲ್ಲಿ ಮಂಡನೆಯಾದ ಮಹಿಳಾ ಮೀಸಲು ಮಸೂದೆಗೆ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ವಿರೋಧ ವ್ಯಕ್ತಪಡಿಸಿರುವುದನ್ನು ಖಂಡಿಸಿ ಮದ್ದೂರು ಜೆಡಿಎಸ್ ಮಹಿಳಾ ಘಟಕದಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಪ್ರವಾಸಿ ಮಂದಿರದ ವೃತ್ತದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ತಡೆದು ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮೂಲಕ ತಾಲೂಕು ಕಚೇರಿಗೆ ಆಗಮಿಸಿದ ಪ್ರತಿಭಟನಾಕಾರರು ತಹಸೀಲ್ದಾರ್ ಸೋಮಶೇಖರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಘಟಕದ ತಾಲೂಕು ಅಧ್ಯಕ್ಷೆ ದಿವ್ಯಾ ರಾಮಚಂದ್ರ ಶೆಟ್ಟಿ ಮಾತನಾಡಿ, ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಮಸೂದೆಗೆ ತಡೆಯೊಡ್ಡಿವೆ. ಕಾಂಗ್ರೆಸ್ ಪಕ್ಷದ ನಾಯಕರು ಮಹಿಳಾ ವಿರೋಧಿಗಳು. ಹೆಣ್ಣು ಮಕ್ಕಳು ರಾಜಕೀಯಕ್ಕೆ ಬಾರದಂತೆ ತಡೆಯುತ್ತಿದ್ದಾರೆ. ಕೇವಲ ಒಂದು ಕುಟುಂಬದ ಮಹಿಳೆಯರು ಅಧಿಕಾರದಲ್ಲಿರಬೇಕೆಂಬ ದುರಾಸೆ ಹೊಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶ್ವೇತಾ, ಚೌಡಮ್ಮ, ಎಂ.ಐ.ಪ್ರವೀಣ್, ಮುಖಂಡರಾದ ಸವಿತಾ, ನಂದಿನಿ, ಭಾರತಿ, ನಳಿನಿ, ಮಂಜುಳಾ, ಪ್ರೇಮ, ಪದ್ಮಾ, ಅನಿತಾ, ಮಹೇಶ್, ಕೆಂಗಲ್‌ಗೌಡ ಇದ್ದರು.

ಗಾಂಜಾ ಮಾರಾಟಕ್ಕೆ ಯತ್ನ; ಆರೋಪಿ ಬಂಧನ

ಶ್ರೀರಂಗಪಟ್ಟಣ, ಏ.22– ಗಾಂಜಾ ಮಾರಾಟ ಮಾಡಲು ಯತ್ನಿಸಿದ ಆರೋಪಿಯನ್ನು ಪೊಲೀಸರು ಕಾರ್ಯಾಚರಣೆ ನಡೆಸಿ ಮಾಲು ಸಮೇತ ಬಂಧಿಸಿದ್ದಾರೆ. ಟೌನ್ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ನೇತೃತ್ವದಲ್ಲಿ ಮಾಹಿತಿ ಆಧರಿಸಿ ಪಟ್ಟಣದ ರೈಲ್ವೆ ನಿಲ್ದಾಣದ ಬಳಿ ಕಾರ್ಯಾಚರಣೆ ನಡೆಸಿ ಆರೋಪಿ ರಘು ಎಂಬಾತನನ್ನು ಪೊಲೀಸರು ಬಂಧಿಸಿದ್ದು, ಬಂಧಿತನಿಂದ 1.2 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿ ವಿರುದ್ಧ NSPS ಕಾಯ್ದೆಯಡಿ ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಭೂ ಸಂಪತ್ತು ರಕ್ಷಿಸಿದರೆ ಮಾನವ ಸಂಪತ್ತು ಉಳಿಯುತ್ತದೆ

ಮಂಡ್ಯ, ಏ.22– ಪ್ರಸ್ತುತ ದಿನಮಾನದಲ್ಲಿ ಭೂ ಸಂಪತ್ತು ರಕ್ಷಿಸಿದರೆ ಮಾತ್ರ ಮಾನವ ಸಂಪತ್ತು ಉಳಿಯುತ್ತದೆ ಎಂದು ನ್ಯಾಯಾಧೀಶ ಎಂ.ಆನಂದ್ ಹೇಳಿದ್ದಾರೆ.

ನಗರದ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಶ್ವ ಭೂ ದಿನದ ಪ್ರಯುಕ್ತ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ, ಸಕಲ ಜೀವರಾಶಿಗಳಿಗೆಲ್ಲ ಆಶ್ರಯತಾಣ ಭೂಗ್ರಹ, ಪ್ರತಿಯೊಂದು ಜೀವಿ ಉಳಿವಿಗಾಗಿ ಭೂ ಸಂಪತ್ತು ರಕ್ಷಣೆಯಾಗಬೇಕಿದೆ, ಮಾನವ ಸಂಪತ್ತು ಈ ನಿಟ್ಟಿನಲ್ಲಿ ಸನ್ನದ್ಧರಾಗಬೇಕಿದೆ, ಮುಂದಿನ ಪೀಳಿಗೆಗೆ ಆರೋಗ್ಯದ ಭೂ ಸಂಪತ್ತನ್ನು ಬಿಟ್ಟುಕೊಡಬೇಕಿದೆ ಎಂದು ನುಡಿದರು.


ಕಾನೂನು ಸಹಾಯಕ ಪ್ರಾಧ್ಯಾಪಕ ಕೆ.ಎಸ್.ಜಯಕುಮಾರ್ ಮಾತನಾಡಿದರು.

ಭೂಗೋಳಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಪ್ರೊ. ಎಚ್.ಎಂ.ಹೇಮಲತಾ ಅವರು ಭೂಮಿಯ ಮೇಲೆ ಜಾಗತಿಕ ತಾಪಮಾನ ಏರಿಕೆಯಿಂದ ಉಂಟಾಗುವ ಪರಿಣಾಮಗಳು ಕುರಿತು ವಿಷಯ ಮಂಡಿಸಿದರು. ಭೂ ರಕ್ಷಣೆಗಾಗಿ ಪ್ರಮಾಣ ಸ್ವೀಕರಿಸಲಾಯಿತು.

ಕಾಲೇಜಿನ ಪ್ರಭಾರ ಪ್ರಾಂಶುಪಾಲ ವರದರಾಜೇಗೌಡ, ವಕೀಲರ ಸಂಘದ ಉಪಾಧ್ಯಕ್ಷ ಎನ್.ದೇವರಾಜು, ಹಿರಿಯ ವಿದ್ಯಾರ್ಥಿಗಳ ಸಂಘದ ಸಂಚಾಲಕಿ ಪ್ರೊ.ಜ್ಯೋತಿ, ಪ್ರೇಮಲತಾ, ಪ್ರಾಧ್ಯಾಪಕರು ಹಾಜರಿದ್ದರು.

ಗಡಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲ ಝಳ ಹೆಚ್ಚಳ

• ವೃದ್ಧರು, ಮಕ್ಕಳು ನಿತ್ರಾಣ • ತಂಪು ಪಾನೀಯಗಳ ಮೊರೆ ಹೋದ ಸಾರ್ವಜನಿಕರು



ಚಾಮರಾಜನಗರ, ಏ.22– ಕಳೆದೊಂದು ತಿಂಗಳಿಂದ ಜಿಲ್ಲೆಯಲ್ಲಿ ಬಿಸಿಲ ಝಳ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜನರು ಹೈರಾಣಾಗುವಂತಾಗಿದೆ. ಸೂರ್ಯಾಸ್ತದ ನಂತರವೂ ವಿಪರೀತ ಸೆಕೆ ಕಂಡು ಬರುತ್ತಿದ್ದು, ವೃದ್ಧರು, ಮಕ್ಕಳು ನಿತ್ರಾಣಗೊಳ್ಳುವಂತಾಗಿದೆ.

ಸೆಕೆ ತೀವ್ರತೆಯಿಂದ ರಾತ್ರಿ ವೇಳೆ ಸರಿಯಾಗಿ ನಿದ್ದೆ ಬಾರದೆ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಬಿಸಿಲಿನ ಹೊಡೆತದಿಂದ ರಕ್ಷಿಸಿಕೊಳ್ಳಲು ನಾಗರಿಕರು ರಸ್ತೆ ಬದಿಯ ಮರಗಳು, ವಾಣಿಜ್ಯ ಮಳಿಗೆಗಳನ್ನು ಆಶ್ರಯಿಸಬೇಕಾಗಿದೆ.

ಶಾಖದ ತೀವ್ರ ಹೊಡೆತ: ಪ್ರಸ್ತುತ ಸೂರ್ಯನ ಶಾಖ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜಿಲ್ಲೆಯಲ್ಲಿ ಗರಿಷ್ಠ 33 ಡಿಗ್ರಿ ಸೆಲಿಯಸ್ ಹಾಗೂ ಕನಿಷ್ಠ 27 ಡಿಗ್ರಿ ಸೆಲಿಯಸ್ ತಾಪಮಾನ ದಾಖಲಾಗುತ್ತಿದೆ. ಪ್ರಸ್ತುತ 36 ಡಿಗ್ರಿ ಸೆಲಿಯಸ್‌ನಷ್ಟು ತಾಪಮಾನ ದಾಖಲಾಗುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಅಲ್ಲದೇ ನಿತ್ಯ ಮಧ್ಯಾಹ್ನ 12 ರಿಂದ ಸಂಜೆ 4ರವರೆಗೆ ಬಿಸಿಲ ಝಳ ತಡೆಯಲಾಗದ ಸ್ಥಿತಿ ಉದ್ಭವವಾಗಿದೆ.

ತಂಪು ಪಾನೀಯಗಳ ಮೊರೆ: ಬಿಸಿಲಿನ ಧಗೆ ತಾಳಲಾರದೆ ಸಾರ್ವಜನಿಕರು ತಂಪು ಪಾನೀಯಗಳ ಮೊರೆ ಹೋಗಿದ್ದಾರೆ. ಜ್ಯೂಸ್ ಸೆಂಟರ್‌ಗಳು, ಐಸ್‌ಕ್ರೀಂ ಮಾರಾಟ ಮಳಿಗೆಗಳು, ಬೇಕರಿಗಳು ಗ್ರಾಹಕರಿಂದ ಗಿಜಿಗಿಡುತ್ತಿವೆ. ಎಳನೀರಿಗೂ ಬೇಡಿಕೆ ಹೆಚ್ಚಾಗಿದ್ದು, ರಸ್ತೆ ಬದಿಗಳಲ್ಲಿ ಎಳನೀರು ಮಾರಾಟ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಕಲ್ಲಂಗಡಿ, ಮಜ್ಜಿಗೆ ಸೇರಿದಂತೆ ಮಿಕ್ಸ್ ಫ್ರೂಟ್ಸ್ ವ್ಯಾಪಾರ ಜೋರಾಗಿದೆ.

ಜನವರಿಯಲ್ಲಿ ಚಳಿ ಹೆಚ್ಚಾಗಿದ್ದರಿಂದ ಎಳನೀರು ಮಾರಾಟ ಕಡಿಮೆ ಇತ್ತು. ಫೆಬ್ರವರಿ ಕೊನೆ ವಾರದಿಂದ ಎಳನೀರಿಗೆ ಬೇಡಿಕೆ ಹೆಚ್ಚಾಗಿದ್ದು, ಶೇ.50ರಷ್ಟು ವ್ಯಾಪಾರ ಹೆಚ್ಚಾಗಿದೆ ಎಂದು ಎಳನೀರು ವ್ಯಾಪಾರಿ ರಂಗಸ್ವಾಮಿ ಮಾಹಿತಿ ನೀಡಿದರು.

ತಲೆಗೆ ಸೊಪ್ಪು ಕಟ್ಟಿಕೊಂಡ ಬೈಕ್ ಸವಾರ: ವಿಡಿಯೋ ವೈರಲ್

ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಿಸಿಲಿನ ತಾಪಕ್ಕೆ ಬೇಸತ್ತ ಬೈಕ್ ಸವಾರನೊಬ್ಬ ಹೆಲ್ಮೆಟ್ ಬದಲು ತಲೆ ಮೇಲೆ ಸೊಪ್ಪು ಕಟ್ಟಿಕೊಂಡು ಓಡಾಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿದೆ.

ನಗರದ ಸಂತೇಮರಹಳ್ಳಿ ವೃತ್ತದ ಬಳಿ ವೀಡಿಯೋ ಸೆರೆಯಾಗಿದ್ದು, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಹೆಲ್ಮೆಟ್ ಬದಲು ತಲೆ ಮೇಲೆ ಸೊಪ್ಪು ಹಾಕಿಕೊಂಡು ಓಡಾಡಿದ್ದಾನೆ.


ಬೈಕ್ ಸವಾರ ತಲೆಗೆ ಸೊಪ್ಪು ಕಟ್ಟಿರುವುದು.

ಕೂಲಿ ಕಾರ್ಮಿಕರ ಸ್ಥಿತಿ ಶೋಚನೀಯ: ಜಿಲ್ಲೆಯಲ್ಲಿ ಈ ಬಾರಿ ಮಿತಿ ಮೀರಿದ ಬಿಸಿಲು ಇದ್ದು ಕೂಲಿ ಕಾರ್ಮಿಕರು ಹಾಗೂ ಸಾರ್ವಜನಿಕರು ಬಿಸಿಲಿನ ಹೊಡೆತಕ್ಕೆ ಬೆಚ್ಚಿ ಬಿದ್ದಿದ್ದಾರೆ. ಕೂಲಿ ಕೆಲಸ ಮಾಡುವವರು ಬಿಸಿಲಿನಲ್ಲಿಯೇ ದುಡಿಯಬೇಕಾದ ಪರಿಸ್ಥಿತಿ ಉಂಟಾಗಿದೆ. ಗಾರೆ ಕೆಲಸ ಮಾಡುವವರು, ಬೀದಿ ಬದಿ ವ್ಯಾಪಾರಿಗಳು ಬಿರು ಬಿಸಿಲಿನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ.

ಸಮವಸ್ತ್ರ ಕಡ್ಡಾಯಗೊಳಿಸದಂತೆ ಆದೇಶ: ತೀವ್ರ ಬಿಸಿ ಗಾಳಿ (ಹೀಟ್ ವೇವ್) ಇರುವುದರಿಂದ ಜಿಲ್ಲೆಯ ಎಲ್ಲಾ ಖಾಸಗಿ ಅನುದಾನಿತ, ಅನುದಾನರಹಿತ ಹಾಗೂ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಆರೋಗ್ಯ ಮತ್ತು ಸುರಕ್ಷತೆ ದೃಷ್ಟಿಯಿಂದ ಬ್ಲೇಝರ್, ಟೈ ಮತ್ತು ಇತರ ಭಾರವಾದ ಸಮವಸ್ತ್ರ ಧರಿಸುವುದನ್ನು ಕಡ್ಡಾಯಗೊಳಿಸದಂತೆ ಜಿಲ್ಲಾಧಿಕಾರಿ ಶ್ರೀರೂಪ ಆದೇಶಿಸಿದ್ದಾರೆ.

ಎಲ್ಲಾ ಶಿಕ್ಷಣ ಸಂಸ್ಥೆಗಳು ಮುನ್ನೆಚ್ಚರಿಕಾ ಕ್ರಮವಾಗಿ ಕೊಠಡಿಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಮಧ್ಯಾಹ್ನದ ತೀವ್ರ ಬಿಸಿ ವಾತಾವರಣದ ಸಮಯದಲ್ಲಿ ಹೊರಾಂಗಣ ಚಟುವಟಿಕೆಗಳನ್ನು ತಪ್ಪಿಸಬೇಕು. ಬಿಸಿ ಗಾಳಿಯಿಂದ ಉಂಟಾಗುವ ಅನಾರೋಗ್ಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು. ಈ ಆದೇಶವು ಮುಂದಿನ ಸೂಚನೆ ಬರುವವರೆಗೆ ಅಥವಾ ಜಿಲ್ಲೆಯಲ್ಲಿ ಬಿಸಿಗಾಳಿ ಪರಿಸ್ಥಿತಿ ಕಡಿಮೆಯಾಗುವವರೆಗೆ ಜಾರಿಯಲ್ಲಿರುತ್ತದೆ ಎಂದು ತಿಳಿಸಿದ್ದಾರೆ.

7 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಕೊಳ್ಳೇಗಾಲ, ಏ.22– ತಾಲೂಕಿನ ತಿಮ್ಮರಾಜೀಪುರ ಹಾಗೂ ಸಿದ್ದಯ್ಯನಪುರ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 7 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ತಾಲೂಕಿನ ಕುರುಬನಕಟ್ಟೆ ದೇವಾಲಯದಲ್ಲಿ 2.30 ಕೋಟಿ ವೆಚ್ಚದ ಮೂಲ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ, ಜಕ್ಕಳ್ಳಿಯಲ್ಲಿ 30 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಕೋಟೆಕೆರೆಯಲ್ಲಿ 30 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, 90 ಲಕ್ಷ ವೆಚ್ಚದಲ್ಲಿ ತಿಮ್ಮರಾಜೀಪುರ ಗ್ರಾಮದ ಹೊರವಲಯದ ರಸ್ತೆ ಕಾಮಗಾರಿ, ಕೆಂಪನಪಾಳ್ಯದಲ್ಲಿ 90 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಶಾಸಕರು, ಇಂದು 7 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇನೆ. ಲಕ್ಕರನಸಪಾಳ್ಯ ಗ್ರಾಮದ ಬಸವ ಭವನದ ಮುಂದುವರೆದ ಕಾಮಗಾರಿಗೂ 10 ಲಕ್ಷ ಅನುದಾನ ನೀಡಿದ್ದೇನೆ. ಕುರುಬನಕಟ್ಟೆ ಶ್ರೀಕ್ಷೇತ್ರಕ್ಕೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲು ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳು ನೀಡುವ 25 ಕೋಟಿ ರೂ. ವಿಶೇಷ ಅನುದಾನದಲ್ಲಿ ಅಗತ್ಯ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.


ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಮೂರ್ತಿ ಚಾಲನೆ ನೀಡಿದರು.

ಈ ವೇಳೆ ಕುರುಬನಕಟ್ಟೆ ಧರ್ಮಾಧಿಕಾರಿ ವರುಣ ಲಿಂಗರಾಜೇ ಅರಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ, ಸಾಹಿತಿ ಮಹದೇವ, ನಾಗರಿಕ ಹಿತರಕ್ಷಣಾ ಸಮಿತಿಯ ನಟರಾಜು, ಪುಟ್ಟಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ರಾಜು, ಮಾಜಿ ಉಪಾಧ್ಯಕ್ಷ ಕೆಂಪರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮಣ್ಣ, ಯುವ ಮುಖಂಡ ಚೇತನ್, ಶಾಂತರಾಜು, ಲೋಕೋಪಯೋಗಿ ಇಲಾಖೆ ಎಇಇ ಪುರುಷೋತ್ತಮ್, ಅರ್ಚಕ ಮಲ್ಲಣ್ಣ, ಗುತ್ತಿಗೆದಾರರಾದ ಮಹೇಶ್, ಶಿವಕುಮಾರ್, ಮಲ್ಲು ಹಾಗೂ ಇತರರಿದ್ದರು.

ಕೆಸರಿನಲ್ಲಿ ಸಿಲುಕಿ ನಿತ್ರಾಣಗೊಂಡಿದ್ದ ಆನೆ ಸಾವು

ಹನೂರು, ಏ.22– ತಾಲೂಕಿನ ಉಡುತೊರೆ ಜಲಾಶಯಕ್ಕೆ ನೀರು ಕುಡಿಯಲು ಬಂದು ಕೆಸರಿನಲ್ಲಿ ಸಿಲುಕಿ ನಿತ್ರಾಣಗೊಂಡಿದ್ದ ಹೆಣ್ಣಾನೆ ಚಿಕಿತ್ಸೆಗೆ ಸ್ಪಂದಿಸದೇ ಬುಧವಾರ ಮೃತಪಟ್ಟಿದೆ.

ಶನಿವಾರ 3 ಕಾಡಾನೆಗಳು ಮಲೆ ಮಹದೇಶ್ವರ ವನ್ಯಜೀವಿ ಧಾಮದ ಬಫರ್ ವಲಯದ ಉಡುತೊರೆ ಜಲಾಶಯಕ್ಕೆ ನೀರು ಕುಡಿಯಲು ಬಂದು ಕೆಸರಿನಲ್ಲಿ ಸಿಲುಕಿಕೊಂಡಿದ್ದವು. ವಿಚಾರ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಉಡುತೊರೆ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಮೂರು ಆನೆಗಳನ್ನು ರಕ್ಷಿಸಿದ್ದರು. ಎರಡು ಆನೆಗಳು ಚೇತರಿಸಿಕೊಂಡು ಕಾಡಿನತ್ತ ತೆರಳಿದ್ದವು. ಉಳಿದ ಹೆಣ್ಣಾನೆ ಮಾತ್ರ ನಿತ್ರಾಣಗೊಂಡಿತ್ತು. ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಪಶು ವೈದ್ಯಾಧಿಕಾರಿ ಡಾ.ರಮೇಶ್ ನಿರಂತರವಾಗಿ ಚಿಕಿತ್ಸೆ ನೀಡುತ್ತಿದ್ದರು. ಜೊತೆಗೆ ಸಾಕಾನೆ ಮಹೇಂದ್ರನನ್ನು ಬಿಟ್ಟು ಅಸ್ವಸ್ಥಗೊಂಡಿರುವ ಆನೆಯನ್ನು ಮೇಲೆಳಿಸಲು ಅರಣ್ಯ ಇಲಾಖೆ ಸಿಬ್ಬಂದಿ ಇನ್ನಿಲ್ಲದಂತೆ ನಡೆಸಿದ್ದ ಪ್ರಯತ್ನ ಕೊನೆಗೂ ಫಲಿಸಲೇ ಇಲ್ಲ. ಭಾನುವಾರದಿಂದಲೂ ಸತತವಾಗಿ ಸಿಬ್ಬಂದಿ ಹಗಲು ರಾತ್ರಿಯೆನ್ನದೆ ಆನೆಯ ಹಾರೈಕೆಯಲ್ಲಿ ತೊಡಗಿದ್ದರು. ಆನೆಗೆ ಇಷ್ಟವಾದ ಆಹಾರ ಕಬ್ಬು ಭತ್ತ ವಿವಿಧ ಹಣ್ಣು ತರಕಾರಿಗಳನ್ನು ತಿನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ ಅಂತಿಮವಾಗಿ ಆನೆ ಸಾವನ್ನಪ್ಪಿದೆ ಎನ್ನಲಾಗಿದೆ.


ನಿತ್ರಾಣಗೊಂಡಿದ್ದ ಆನೆ ಸಾವನ್ನಪ್ಪಿರುವುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
27x40, ನಾರ್ತ್ ವೆಸ್ಟ್ ಕಾರ್ನರ್, ಕಂದಾಯ ನಗರ, ಶ್ರೀರಾಂಪುರ, ಮೈಸೂರು. ಕರೆಮಾಡಿ:
9739703467, 9686895205

MUDA Approved site
(E-khatha ready)
20x30, 20x40, 30x40
Uttanahalli & Yelwala
Call: 9945020212

ಸೈಟ್ ಮಾರಾಟಕ್ಕಿದೆ
50x49 N/W Corner Site.
30x50 S/F
ನಂಜುಂಡೇಶ್ವರ ಬಡಾವಣೆ ಕೊಪ್ಪಲೂರು ಜೆ.ಪಿ.ನಗರ ಹತ್ತಿರ, ಮೈಸೂರು
8088996409

ಬೆಂಗಳೂರಿಗೆ ಡ್ರೈವರ್ಸ್ ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ
9141835175
6366610175
connect@udupikitchen.net
Lingadevarakoppal Road, Near D'Mart, Mysore

ವೃದ್ಧಾಶ್ರಮ
ಹಿರಿಯ ನಾಗರಿಕರು, ಅಸಿಗೆ ಹಿಡಿದವರು, ಅಂಗವಿಕಲರು ಮತ್ತು ಪಾರ್ಶ್ವವಾಯು ಪೀಡಿತ ರೋಗಿಗಳಿಗೆ. ವೈದ್ಯಕೀಯ ಸೌಲಭ್ಯಗಳೊಂದಿಗೆ ಸಹಾನುಭೂತಿಯ ಆರೈಕೆ, ಪೌಷ್ಟಿಕ ಆಹಾರ ಮತ್ತು ಮನೆಯ ವಾತಾವರಣವನ್ನು ನೀಡುತ್ತೇವೆ.
CALL : 9110455297/9591557126

ತಕ್ಷಣ ಬೇಕಾಗಿದ್ದಾರೆ
ಇಸ್ಕಾನ್ ಮೈಸೂರಿಗೆ * ಮನೆ ಸ್ವಚ್ಛತೆ – 2 * ಶೂ ಸ್ಟ್ಯಾಂಡ್ – 1 * ಶೌಚಾಲಯ (ಪುರುಷ) – 3 * ಭದ್ರತಾ ಸಿಬ್ಬಂದಿ – 5 ಅನುಭವಿಗಳಿಗೆ ಆದ್ಯತೆ. ಸಂಬಳ: ಎನ್‌ಜಿಒ ಸಮಾನ. ಸೌಲಭ್ಯ: ಉಚಿತ ಅನ್ನದಾಸೋಹ ಸಂಪರ್ಕಿಸಿ:
ಗಣೇಶ್: 8496915162
ರಕ್ಷಿತ್: 6364554306

ಬೇಕಾಗಿದ್ದಾರೆ
ಮೈಸೂರಿನ ಸಿದ್ಧಾರ್ಥ ಲೇಔಟ್ ಸುತ್ತಮುತ್ತ ಕಾರ್ಯನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯಸ್ಸು: 18–45. ESI & PF ಸೌಲಭ್ಯವಿರುತ್ತದೆ. ನಿಮಿಷಾಂಬ ಸೆಕ್ಯೂರಿಟಿ ಬ್ಯೂರೋ ಮತ್ತು ಯುಟಿಲಿಟಿ ಸರ್ವೀಸಸ್ #380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು
9964820837
9606023463

ಸೈಟು ಮಾರಾಟಕ್ಕಿದೆ
40x60 ದಕ್ಷಿಣ ದಿಕ್ಕು, ಭ್ರಮರಾಂಬ ಛತ್ರದ ಹತ್ತಿರ, ಶ್ರೀರಾಂಪುರ, ಮೈಸೂರು.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಕರೆಮಾಡಿ.
9739703467, 9686895205

WANTED
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ.
Salary + Incentive.
D.D. Urs Road.
Mob: 7353633297

FOR RENT
• 2 BHK Flats- 2 Nos &
• 2 Shops - 2 Nos (12x27 Ft)
Next to Presentation Public School, Rajivnagar 3rd Stage.
Contact: 8050056100
WhatsApp: 7897775558

IMMEDIATE REQUIREMENT @ MYSORE
1) Security staff (Male- 5 Nos)
2) H K Staff
(Male and Female- 5 No.s)
Age below 46 yrs
Salary Rs. 22000 for Security and HK 16000 - Duty hrs 8 and working days 26 in a month With PF, ESIC and Bonus benefits also Increments once in a year.
9845514342

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶ್ರೀ ಗೌರೀಶಂಕರ ಟ್ರಾವೆಲ್ಸ್
30–4–2026 (6 ದಿನ): ದೆಹಲಿ, ಮಥುರಾ, ಬೃಂದಾವನ್, ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ.
29–5–2026 (13 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ, ಮಸ್ಸೂರಿ.
(ವಿಮಾನ, ಬಸ್, ಊಟ, ರೂಂ)
Mob: 9620002114

SITE FOR SALE
40x60 North face SBM other Bank Layout Lingabuddi near Srirampura Ring road signal.
Mob: 7892595158

ಸೈಟು ಮಾರಾಟಕ್ಕಿದೆ
40x60 ಪಶ್ಚಿಮ ದಿಕ್ಕು, ಸೆಮಿ ಕಮರ್ಷಿಯಲ್ 40 ಅಡಿ ರಸ್ತೆ, ರಾಷ್ಟ್ರೋತ್ಥಾನ ಶಾಲೆ ಹತ್ತಿರ.
ಕರೆಮಾಡಿ.
9739703467, 9686895205

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10
Mob: 9739816440

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 48 ವರ್ಷದೊಳಗೆ
ಸಂಬಳ : 22,000/- (26 ದಿನಗಳು)
ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ: 18000 (8 ಗಂಟೆ, 26 ದಿನಗಳು)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ತಕ್ಷಣದ ಖಾಲಿ ಹುದ್ದೆಗಳು
ಸಿಬ್ಬಂದಿ ಬೇಕಾಗಿದ್ದಾರೆ – ರೆಸಾರ್ಟ್ ಕೂರ್ಗ್, ಮಡಿಕೇರಿ, ಕೊಡಗು, ಊಟ ಮತ್ತು ವಸತಿ ಉಚಿತ, ವೇಟರ್– 2 ಹುದ್ದೆಗಳು, ಗಂಡು / ಹೆಣ್ಣು, ಕನಿಷ್ಠ 1 ವರ್ಷ ಅನುಭವ, ಹೌಸ್‌ಕೀಪಿಂಗ್– 1 ಹುದ್ದೆ, ಕನಿಷ್ಠ 1 ವರ್ಷ ಅನುಭವ, ಬಾಣಸಿಗ (ಚೆಫ್) 1 ಹುದ್ದೆ, ಕನಿಷ್ಠ 5 ವರ್ಷ ಅನುಭವ, ಬಾಣಸಿಗನ ಸಹಾಯಕ, 1 ಹುದ್ದೆ ಕನಿಷ್ಠ 1 ವರ್ಷ ಅನುಭವ, ಆಹಾರ ಮತ್ತು ಪಾನೀಯ (F&B), 1 ಹುದ್ದೆ, ಕನಿಷ್ಠ 1 ವರ್ಷ ಅನುಭವ, ಸೌಲಭ್ಯಗಳು, ಊಟ ಉಚಿತ, ವಸತಿ ಉಚಿತ, ಆಕರ್ಷಕ ವೇತನ,
88772 28861
88677 67361

ಸುವರ್ಣ ಯಾತ್ರಾ
9 ದಿನಗಳ ಕುಲ್ಲು ಮನಾಲಿ ಪ್ರವಾಸ 14/5/26
7 ದಿನಗಳ ಭೂತನ್ ಪ್ರವಾಸ 8/5/26
13 ದಿನಗಳ ಚಾರ್ ಧಾಮ್ ಪ್ರವಾಸ 26/5/26
9008381022
9480843945

HOUSE FOR RENT OR LEASE
ಮನೆ ಬಾಡಿಗೆ ಮತ್ತು ಭೋಗ್ಯಕ್ಕೆ ವಿದ್ಯಾರಣ್ಯಪುರಂ ಜೆ.ಪಿ ನಗರ, ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ ಸುತ್ತ ಮುತ್ತ
9902506368

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

FOR RENT & SALE
10000 sqft space for rent @ Kurgally industrial area, 40x60, E/F Muda approved site @ KBL Silicon city KRS road for sale 3800/sqft
9611465941

ಕೆಲಸಕ್ಕೆ ಬೇಕಾಗಿದ್ದಾರೆ
ನೇಮ್‌ಪ್ಲೇಟ್ ಕೆಲಸಕ್ಕಾಗಿ. ಹುಡುಗರು
ವಯೋಮಿತಿ : 18 ರಿಂದ 30
ಸಂಬಳ : 10K + 2K
ಸ್ಥಳ : ಅಗ್ರಹಾರ & ಶ್ರೀರಾಂಪುರ
ಸಮಯ ಬೆಳಗ್ಗೆ 10:00 ರಿಂದ ಸಂಜೆ 7:30 ರವರೆಗೆ
95132 20070

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9591311161 MANGALORE: 9901910161

ಸೈಟು ಮಾರಾಟಕ್ಕಿದೆ
30x50 (1453 Sqft) East Face Muda Approved Site-07, ವಿದ್ಯಾರಣ್ಯಪುರಂ, ಎನ್.ಐ.ಇ ಕಾಲೇಜ್ ಹತ್ತಿರ, ಮೈಸೂರು
ಸಂತೋಷ್ :
9108334936

Go Mysore Holidays
ತಿರುಪತಿ–ತಿರುಮಲ–ಕಾಳಹಸ್ತಿ ಪ್ಯಾಕೇಜ್
30th April 2026
ಹೊರಡುವುದು ಎರಡು ದಿನದ ಪ್ರವಾಸ, ಕೆ.ಡಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು
8197998916
9036154302

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಹೆಬ್ಬಾಳು ಕೈಗಾರಿಕ ನಗರ, ಮಂಟಿ, ಹಿನಕಲ್, ಹೈವೇ ಸರ್ಕಲ್, ಕಾಳಿದಾಸ ರೋಡ್ ಮತ್ತು ಕುವೆಂಪುನಗರ.
Mob: 9886200104

ಬೇಕಾಗಿದ್ದಾರೆ
ಬ್ಯೂಟಿಪಾರ್ಲರ್‌ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ : ಹೆಬ್ಬಾಳ್, ಮೈಸೂರು.
9611555349

WANTED
A reputed lodge in the heart of the city is looking for a receptionist role, those having Previous experience having computer & Hotel industry knowledge prefered
9663427888
9663747452

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

HOUSE FOR SALE
KHB HOUSE, HOOTAGALLI
17X24 SITE
Ground & 1st Floor House
(12k Rent From Two House)
Just 100 Meter To Madikeri - Mysuru Highway
Call : 6362422664

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

SITE FOR SALE
South facing site measuring 2325 sq.ft. (12x18 mtrs) facing towards service road of ring road in Omkar Layout, J.P. Nagar is for sale.
Please contact:
9343289694

ಬೇಕಾಗಿದ್ದಾರೆ
ಶಾಲೆಗೆ ಆಯಾ (Housekeeping) ಮಹಿಳೆ ಇಬ್ಬರು ಮತ್ತು ಪುರುಷ ಕಾರ್ ಡ್ರೈವಿಂಗ್ ಜೊತೆ ಹೆಲ್ಪರ್ ಕೆಲಸಗಳಿಗೆ ಬೇಕಾಗಿದ್ದಾರೆ. ಒಂದು ವೇಳೆ ಗಂಡ–ಹೆಂಡತಿ ಜೊತೆಗೆ ಕೆಲಸ ಮಾಡುವುದಿದ್ದರೆ ಸಹ ಬರಬಹುದು ಉಚಿತ ಊಟ ವಸತಿ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. ಜ್ಞಾನ ಗಂಗೋತ್ರಿ ಕಾನ್ವೆಂಟ್, ರಾಜೇಂದ್ರ ನಗರ (N R ಮೊಹಲ್ಲಾ) ಮೈಸೂರು 570007.
Mob: 9113980741

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್‌ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
ಕುವೆಂಪುನಗರದಲ್ಲಿ
ಬೆಳಗ್ಗೆ 6 ರಿಂದ ಸಂಜೆ 3 ಮಧ್ಯಾಹ್ನ 1 ರಿಂದ ರಾತ್ರಿ 10
9986758555

WANTED
Electrical Engineer
Qualification: Diploma / BE in Electrical Engineering (02 Male)
(2 years+ experience in handling ESCOM GK,WS and Linkline works)
Security Field Officer (Male)
(Min 2-3yrs Exp. in Security Agency)
Security Guard (Male)
(Min 1 yrs Exp. As Security Guard)
Contact: 6366366388 (10AM to 5PM)
Mail your C.V to: acpltd123@gmail.com

SITE FOR SALE
Semi-commercial 2446 sq.ft S/W Corner, site No. 423 at R.M.S. & H.P.O. Layout, Sathagalli, near RTO office, Rajkumar Road.
8050164064

ತಕ್ಷಣ ಬೇಕಾಗಿದ್ದಾರೆ
ಸೇವಾ ಮನೋಭಾವವುಳ್ಳ ಪುರುಷ – ಮಹಿಳಾ ಅಭ್ಯರ್ಥಿಗಳು ಶಿಕ್ಷಣ : 5ನೇ – P.U.C
ವಯಸ್ಸು: 18 ರಿಂದ 55 ವರ್ಷ,
ಸಂಬಳ : 15,000 – 27,000. ಉಚಿತ ಊಟ ವಸತಿಯೊಂದಿಗೆ ಮೊದಲು ಬಂದವರಿಗೆ ಆದ್ಯತೆ
9071422555
9513203333

ಕೆಲಸಕ್ಕೆ ಬೇಕಾಗಿದ್ದಾರೆ ಸೆಕ್ಯೂರಿಟಿ ಗಾರ್ಡ್ (ಪುರುಷರು)
ಇನ್ಫೋಸಿಸ್ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾ, Vijayanagar 2nd and 3rd Stage, ಹಾಗೂ ಮೈಸೂರಿನ ಸುತ್ತ ಮುತ್ತ ಬೇಕಾಗಿದ್ದಾರೆ
83174 75912
8310098788

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ A.W.G. ಕಂಪನಿಯಲ್ಲಿ SSLC, PUC, ITI, Degree ಆದಂತಹ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮಾಡಿಕೊಳಲಾಗುತ್ತಿದೆ.
ವಯೋಮಿತಿ: 18 ರಿಂದ 28 ವರ್ಷಗಳು.
ತಿಂಗಳಿಗೆ: 15,000 ರಿಂದ 22,000.
(ಉಚಿತ ಊಟದ ವ್ಯವಸ್ಥೆ ಇರುತ್ತದೆ).
ಸೌಮ್ಯ:
9886479489
7349699460

ಪಾರ್ಟ್ ಟೈಂ ಕೆಲಸ ಇದೆ
ಯುನಿಫಾರಂ ಶಾಪ್‌ಗೆ ಹೆಲ್ಪರ್ 18 ರಿಂದ 35 ವರ್ಷ ಲೇಡಿಸ್ ಮಾತ್ರ, 5 pm to 8.30 pm ಅಗ್ರಹಾರ, 101 ಗಣಪತಿ ಹಿಂಭಾಗ, ಬಸವೇಶ್ವರ ರಸ್ತೆ, ಮೈಸೂರು.
ಬರುವ ಇಚ್ಛೆ ಇರುವವರು ಮಾತ್ರ, Hi ಅಂತ ಮೆಸೇಜ್ ಮಾಡಿ ಡಿಟೈಲ್ಸ್ ಕಳುಹಿಸುತ್ತೇವೆ.
9591327746

ಬೇಕಾಗಿದ್ದಾರೆ
ಲೋಕಲ್ & ಮೈಸೂರಿನಿಂದ ನಂಜನಗೂಡಿಗೆ ಲಾರಿ ಚಾಲಕರು ಬೇಕಾಗಿದ್ದಾರೆ. ಕ್ಯಾಂಟೀನ್, ಪಿಎಫ್ ಮತ್ತು ಇಎಸ್‌ಐ ಸೌಲಭ್ಯ ಲಭ್ಯವಿದೆ. ದಯವಿಟ್ಟು ಸಂಪರ್ಕಿಸಿ:
Mob: 9341623350

ನಿವೃತ್ತರಿಗೆ ಉದ್ಯೋಗಾವಕಾಶ ಸೆಮಿನಾರ್
ಕೇಂದ್ರ/ರಾಜ್ಯ ಸರಕಾರದ ಮತ್ತು ಸಾರ್ವಜನಿಕ ಸಂಸ್ಥೆಗಳಿಂದ ನಿವೃತ್ತರಾದವರಿಗೆ ಉದ್ಯೋಗವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ಸ್ಥಳ : ಮೌರ್ಯ ರೆಸಿಡೆನ್ಸಿ ಹೋಟೆಲ್, ಉಡ್‌ಲ್ಯಾಂಡ್ಸ್ ಟಾಕೀಸ್ ಹತ್ತಿರ, ಮೈಸೂರು–1 ದಿನಾಂಕ 27 04 2026 ಸಮಯ ಬೆಳಗ್ಗೆ 11 ಗಂಟೆಗೆ, ವಿದ್ಯಾರ್ಹತೆ: SSLC & above any degree, Benefits : Fixed salary + incentives, 2) PF + ESI + Foriegn Trips, Followed by Lunch
Call : 7022034200

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಜೆ.ಪಿ ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ
ಬೊಗಾದಿ ಟ್ರೆಂಡ್ಸ್ ಫ್ಲಾಟ್ ಹತ್ತಿರ 36 ಲಕ್ಷ
ವಿದ್ಯಾವಿಕಾಸ್, MPRO ಹಿಂಬಾಗ 34.75 ಲಕ್ಷ
ವಸಂತನಗರ/ಪೊಲೀಸ್ ಲೇಔಟ್ ಪಕ್ಕ 32 ಲಕ್ಷ
ಹುಣಸೂರು ರಸ್ತೆ, ಇಲವಾಲ 27–36 ಲಕ್ಷ
Call : 81230 75038
Broker Excuse 0% Commission

FOR SALE
1. 20x30,20x35, 30x40 @ Bogadi,RainbowSchool
2.40x60 Site@ Dattagalli 80ft Rd
3.30x50 Sites@50ft Road, Nr Defence Apartments,Kote Rd
4. 2&3 BHK Apartments, With All Amenities @ Ramkrishna Nagar.
5. 30x40 Corner Semi-Commercial, Rental Income @ Police Layout
PRAKRUTHI PROPERTIES
95386 90359, 90359 90359

WANTED TEACHERS
Freshers or experienced.
Social: BA, MA, B.Ed.
English: BA, MA, B.Ed.
Walk with originals.
Contact:
8546890411
9241376919
9880086183

WANTED
For transport company, staff for admin and marketing (English + computer knowledge, 2 wheeler must) Driver for goods vehicle, labours attached dost vehicle, experience preferred. Attractive salary / perks. M/F can apply. Call/ Whatsapp:
8762357131
(10 AM TO 5 PM)

ಬೇಕಾಗಿದ್ದಾರೆ
ಫೋಟೋ ಫ್ರೇಮ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ ಬೇಕಾಗಿದ್ದಾರೆ.
9036951212
9900377073

ಸೈಟುಗಳು ಮಾರಾಟಕ್ಕಿವೆ
30x40, 30x50
ಅಳತೆಯ ನಿವೇಶನಗಳು (DTCP ಅನುಮೋದಿತ) ಕೀಳನಪುರ, T.N. ಪುರ ರಸ್ತೆ
Mob: 9448572367

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು, ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

FOR SALE
2015 model TATA Zip in excellent condition. Single owner. Brokers excuse. Contact:
Mob: 98450 92338

ಬೇಕಾಗಿದ್ದಾರೆ
ಕ್ಯಾಷಿಯರ್, ಹೆಲ್ಪರ್ ಹಾಗೂ ಸೂಪರ್‌ವೈಸರ್, ಪಾರ್ಟ್ ಟೈಂ ಹಾಗೂ ಫುಲ್ ಟೈಂ, GRS ಹತ್ತಿರವಿರುವ ಭಾರತ್ ಪೆಟ್ರೋಲಿಯಂ ಪಂಪಿಗೆ ಉತ್ತಮ ಸಂಬಳ ಹಾಗೂ ಊಟದ ವ್ಯವಸ್ಥೆ ಇರುತ್ತದೆ. ಆಸಕ್ತಿವುಳ್ಳವರು ಸಂಪರ್ಕಿಸಿ:
Mob: 7892835168, 7090802736, 7026480147

KHB Site for sale
20x30 & 30x40 (Kenchalagud)
30x50 (Nanjangud)
30x40 (Vinsco Higiri Enclave)
6364671651, 9964311373

SITES WANTED
In Mysore-Hunsur highway, Nithyanandasagar, Vijayanagar & Mysore surroundings.
QUICK REGN.
95388-39926

ಬೇಕಾಗಿದ್ದಾರೆ
ಮಹಿಳೆಯರ ಉಡುಪು ಹೊಲೆಯುವ ಕೆಲಸಕ್ಕೆ ಅನುಭವ ಹೊಂದಿರುವ ಟೈಲರ್ಸ್ ಮತ್ತು ಕಟ್ಟಿಂಗ್ ಮಾಸ್ಟರ್ಸ್ ಅಗತ್ಯವಿದೆ. ಸಂಪರ್ಕಿಸಿ :
9742132988
7019371878

ಬೇಕಾಗಿದ್ದಾರೆ
ಮಡಿಕೇರಿ–ಮಂಗಳೂರು ಮತ್ತು ಮಡಿಕೇರಿ–ಮೈಸೂರು ಮಾರ್ಗಗಳಲ್ಲಿ ಪ್ರತಿನಿತ್ಯ ಸಂಚರಿಸುವ ಮಿನಿ ಲಾರಿಗಳಲ್ಲಿ ಅಂಗಡಿಗಳಿಗೆ ಪಾರ್ಸೆಲ್ ವಿತರಿಸುವ ಕೆಲಸಕ್ಕೆ ಚಾಲಕರು ಹಾಗೂ ಡೆಲಿವರಿ ಬಾಯ್ ಹುಡುಗರು ಬೇಕಾಗಿದ್ದಾರೆ. ಆರಂಭಿಕ ವೇತನ ಚಾಲಕರಿಗೆ ರೂ.22,000. ಡೆಲಿವರಿ ಬಾಯ್ ರೂ.16000. ಆಸಕ್ತರು ಸಂಪರ್ಕಿಸಿ:
9740408488

ತಕ್ಷಣ ಬೇಕಾಗಿದ್ದಾರೆ
(1) ಲೇಡಿ ಸೆಕ್ಯೂರಿಟಿ, (ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ)
(2) ಸೆಕ್ಯೂರಿಟಿ, ಗಾರ್ಡುಗಳು(ಪುರುಷ) 1) ಜೆ.ಪಿ.ನಗರ, 2) ಮಂಡಕಳ್ಳಿ, 3) ಪಂಪ್‌ಹೌಸ್, 4) ಹೂಟಗಳ್ಳಿ, 5) ವಿಜಯನಗರ 2ನೇ ಮತ್ತು 4ನೇ ಹಂತ
9242406261
9686422400

ಬೇಕಾಗಿದ್ದಾರೆ
ಹೆಸರಾಂತ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ & ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಸ್ಥಳ : KRS Road ಹಲಿಕೆರೆ & ಯಾದವಗಿರಿ, ಮೈಸೂರು.
9164010202
9008380450

ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗಿರುವ ನಾನ್‌ವೆಜ್ ಹೋಟೆಲ್‌ಗೆ ನಾಟಿಸ್ಟೈಲ್ ಕುಕ್, ತಂದೂರಿ ಕುಕ್, ಚೈನೀಸ್ ಕುಕ್, ಕ್ಲೀನರ್ ಕ್ಯಾಪ್ಟನ್: ವೈಟರ್ ಬೇಕಾಗಿದ್ದಾರೆ. ಸ್ಥಳ : ವಿಜಯನಗರ 1ನೇ ಹಂತ,
9900171642

LAND FOR SALE
10 Acres, Junction to Mysore Bangalore Road, Next to Sobha Garden, Contact
9900167753

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. (SSLC Pass or Fail) Company : (JK Tyres Rediental Plant -2, Auto Motive Axle Ltd, Rane Madras) Ltd, San Engineering) Mysore. Salary : 18000/-, Age Limit : 18 ರಿಂದ 40 ವರ್ಷ, ಸೌಲಭ್ಯತೆ : ESI, PF ಮತ್ತು Canteen ಮತ್ತು ಸೌಲಭ್ಯವಿರುತ್ತದೆ.
Contact : 7019822622, 9632265535, 9353430078

ಡ್ರೈವರ್ ಬೇಕಾಗಿದ್ದಾರೆ
ನೀರಿನ ಟ್ಯಾಂಕರ್ ಡ್ರೈವ್ ಮಾಡಲು ನಾಡನಹಳ್ಳಿ ಸುತ್ತಮುತ್ತಲವರಿಗೆ ಆದ್ಯತೆ.
9342593199

WANTED
Front office work (only girls) with basic computer knowledge, Qualification : any degree/PUC, Location : Sarswathipuram, Mysore.
7975368452

Wanted Female Officer
Assistant to our Audit Office - 1 post Education Qualification PUC Plus Computer Knowledge is Essential Preparable to Hebbal Sorrounding Area
Nagarajegowda M.Com(C.A)
Auditor & Tax Consultant
No.240, 2nd Floor, Vijayanagar, Phy Colony Main Road Near Surybakery Hebbal, Mysore-16

ತಕ್ಷಣ ಬೇಕಾಗಿದ್ದಾರೆ
ರಾಣೆ ಮದ್ರಾಸ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು,
ಸಂಬಳ : 20500+W/o (8hrs)
ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819
9620667819

RENT / LEASE
2 BHK House, Fully Furnished with car parking Space in Belvadi, TSK Serinity Layout, Mysore
For More Details Contact
9743437726 / 9620212364

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಬೇಕಾಗಿದ್ದಾರೆ
ಮೈಸೂರ್ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ 20 ರಿಂದ 40 ವರ್ಷದ ಮಹಿಳೆಯರು ಬೇಕಾಗಿದ್ದಾರೆ.
ಸಮಯ : 9:00 ರಿಂದ 5:30
ಸಂಬಳ : 14208, ಸಂಪರ್ಕಿಸಿ
7892725603
8971460235

NURSING DEGREE COLLEGE INTERVIEW
1) TEACHING FACULTY, MSC Nursing/allied, 2) Office Assistant (Male), Any Degree with Computer Knowledge, 3) Receptionist (Female) Any Degree with Good English Communication, Contact :
9342110613

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (SSLC Pass) 12 ಘಂಟೆ ಪಾಳಿ (16,000 Rs) ESI & PF ಸೌಲಭ್ಯ, ಮೇಟಗಳ್ಳಿ ಸುತ್ತ ಮುತ್ತ ಪ್ರದೇಶ
9035367083
6361548626

ಸೈಟು ಮಾರಾಟಕ್ಕಿದೆ
30x40 E/F DTCP
"A" ಖಾತಾ ಸೊಸೈಟಿ ಸೈಟು ಮಾರಾಟಕ್ಕಿದೆ 21 ಲಕ್ಷಗಳು ನಂಜುಂಡೇಶ್ವರ ನಗರ ತಳೂರು TVS ಫ್ಯಾಕ್ಟರಿ ಹತ್ತಿರ ಮೈಸೂರು
9972557534
9742198093

ತಕ್ಷಣ ಬೇಕಾಗಿದ್ದಾರೆ
ಟಿ, ನರಸೀಪುರ ರಸ್ತೆ, ಚಿಕ್ಕಳ್ಳಿ ಒಂಟಿಕೊಪ್ಪಲು, ಅಶೋಕಪುರಂ, ಹೆಬ್ಬಾಳು. K.R ಆಸ್ಪತ್ರೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ. ಸೂಪರ್ ವೈಸರ್ ಸೆಕ್ಯೂರಿಟಿ ಗಾರ್ಡ್ (ESI. PF)
ಊಟ, ವಸತಿ, ಇರುತ್ತದೆ
8660309477

ತಕ್ಷಣ ಬೇಕಾಗಿದ್ದಾರೆ
ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಹಳೆ RMC ಸರ್ಕಲ್ ಮೈಸೂರು ಕ್ಯಾಷಿಯರ್ ಕೆಲಸಕ್ಕಾಗಿ ವಯೋಮಿತಿ 20 ರಿಂದ 40 ಪುರುಷ ಮತ್ತು ಮಹಿಳೆ
9164777336
9902179776
ಮೈಸೂರು ಟೌನ್ ಅವರಿಗೆ ಮೊದಲ ಆದ್ಯತೆ

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
(ಹುಡುಗರು ಮಾತ್ರ)
ಬೆಳಿಗ್ಗೆ 9 ರಿಂದ ರಾತ್ರಿ 9 ರವರೆಗೆ
(Lunch Break 1 Hour)
ಅನುಭವವುಳ್ಳವರಿಗೆ ಆದ್ಯತೆ
ಸಂಬಳ: 20,000/– ಕುವೆಂಪುನಗರ
9535370330

ಮೈಸೂರು ಮಿತ್ರ 47 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಶ್ರೀಸಿದ್ದಪ್ಪಾಜಿ, ಶ್ರೀಮಂಟೇಸ್ವಾಮಿ ದೇವಸ್ಥಾನ ಲೋಕಾರ್ಪಣೆ



ಮಂಟೇಸ್ವಾಮಿ ಹಾಗೂ ಸಿದ್ದಪ್ಪಾಜಿ ದೇವಸ್ಥಾನ ಉದ್ಘಾಟನೆ ಹಿನ್ನೆಲೆಯಲ್ಲಿ ಕಂಡಾಯ ಮೆರವಣಿಗೆ ನಡೆಯಿತು.

ತಿ.ನರಸೀಪುರ, ಏ.22– ತಾಲೂಕಿನ ಮುದ್ದ ಬೀರನಹುಂಡಿ ಗ್ರಾಮದಲ್ಲಿ 60 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀಸಿದ್ದಪ್ಪಾಜಿ ಹಾಗೂ ಶ್ರೀಮಂಟೇಸ್ವಾಮಿ ದೇವಸ್ಥಾನವನ್ನು ಕುರುಬನಕಟ್ಟೆ ಪೀಠಾಧ್ಯಕ್ಷ ವರುಣ್ ಲಿಂಗರಾಜೇ ಅರಸ್ ಲೋಕಾರ್ಪಣೆಗೊಳಿಸಿದರು.

ದೇವಸ್ಥಾನ ಉದ್ಘಾಟನೆ ಹಿನ್ನೆಲೆಯಲ್ಲಿ ಇಡೀ ಗ್ರಾಮ ತಳಿರು ತೋರಣಗಳಿಂದ ಕಂಗೊಳಿಸುತ್ತಿತ್ತು. ಕುರುಬನ ಕಟ್ಟೆ ಪೀಠಾಧ್ಯಕ್ಷ ವರುಣ್ ಲಿಂಗರಾಜೇ ಅರಸ್ ಅವರನ್ನು ಬೆಳ್ಳಿ ರಥದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ನೂತನವಾಗಿ ನಿರ್ಮಿಸಲಾಗಿರುವ 8 ಅಡಿ ಎತ್ತರದ 2 ಬೆಳ್ಳಿ ಕಂಡಾಯಗಳಿಗೆ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಕಪಿಲಾ ನದಿಯಲ್ಲಿ ಪೂಜೆ ನೆರವೇರಿಸಿ ಮೆರವಣಿಗೆ ಮೂಲಕ ಗ್ರಾಮಕ್ಕೆ ತರಲಾಯಿತು. ಗ್ರಾಮದ ಹೆಬ್ಬಾಗಿಲಿನಲ್ಲಿ ಕಂಡಾಯಕ್ಕೆ ಸ್ವಾಗತ ಕೋರಿ ದೇವಸ್ಥಾನಕ್ಕೆ ತಂದು ಪ್ರತಿಷ್ಠಾಪಿಸಲಾಯಿತು.

ಗ್ರಾಮಸ್ಥರು, ಮಹಿಳೆಯರು ಕಂಡಾಯಕ್ಕೆ ಪೂಜೆ ಸಲ್ಲಿಸಿ ಧನ್ಯತಾ ಭಾವ ಮೆರೆದರು. ನೆತ್ತಿ ಸುಡುವ ಬಿಸಿಲಿನಲ್ಲೂ ಗ್ರಾಮದ ಯುವಕರು ಕಂಡಾಯ ಮೆರವಣಿಗೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಭಕ್ತರಿಗೆ ನೀರು, ಮಜ್ಜಿಗೆ, ಪಾನಕ ವಿತರಿಸಲಾಯಿತು. ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ದೇವಸ್ಥಾನ ಉದ್ಘಾಟನೆ, ಕಳಸ ಪ್ರತಿಷ್ಠಾಪನೆ ಹಾಗೂ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಕುರುಬನಕಟ್ಟೆ ಪೀಠಾಧ್ಯಕ್ಷ ವರುಣ್ ಲಿಂಗರಾಜೇ ಅರಸ್ ಅವರು ಇಂದು ಈ ಪವಿತ್ರ ಕ್ಷೇತ್ರದಲ್ಲಿ ನಾವೆಲ್ಲರೂ ಸೇರಿರುವುದು ದೇವರ ಅನುಗ್ರಹದ ಫಲ. ಮಂಟೇಸ್ವಾಮಿ ಹಾಗೂ ಸಿದ್ದಪ್ಪಾಜಿಯವರ ದೇವಸ್ಥಾನ ಉದ್ಘಾಟನೆಯ ಈ ಕ್ಷಣ ನಮ್ಮೆಲ್ಲರ ಜೀವನದಲ್ಲಿ ಒಂದು ಮಹತ್ವದ ಆಧ್ಯಾತ್ಮಿಕ ಘಟ್ಟವಾಗಿದೆ. ಇಂತಹ ಪುಣ್ಯ ಕಾರ್ಯಗಳು ಮಾನವನ ಜೀವನವನ್ನು ಶುದ್ಧಗೊಳಿಸಿ, ಆತ್ಮಶಾಂತಿಯನ್ನು ನೀಡುವ ದಿವ್ಯ ಅವಕಾಶಗಳನ್ನು ಒದಗಿಸುತ್ತವೆ. ದೇವಾಲಯ ಎಂದರೆ ಕೇವಲ ಕಲ್ಲಿನಿಂದ ಕಟ್ಟಿದ ಮಂದಿರವಲ್ಲ. ಅದು ಭಕ್ತಿಯ ಆಧಾರ. ನಂಬಿಕೆಯ ದೀಪ ಹಾಗೂ ಧರ್ಮದ ದಾರಿದೀಪ. ಇಲ್ಲಿ ಪ್ರತಿದಿನ ನಡೆಯುವ ಪೂಜೆ, ಪ್ರಾರ್ಥನೆ ಮತ್ತು ಭಜನೆಗಳು ನಮ್ಮ ಮನಸ್ಸನ್ನು ಶುದ್ಧಗೊಳಿಸಿ, ನಮ್ಮ ಬದುಕಿಗೆ ನೈತಿಕ ಮೌಲ್ಯಗಳನ್ನು ತುಂಬುತ್ತವೆ. ಮಂಟೇಸ್ವಾಮಿ ಹಾಗೂ ಸಿದ್ದಪ್ಪಾಜಿಯವರ ದಿವ್ಯ ಶಕ್ತಿ ಅನಂತ. ಭಕ್ತಿಯಿಂದ ಅವರನ್ನು ಸ್ಮರಿಸಿದರೆ, ಅವರ ಕೃಪೆ ನಮ್ಮ ಮೇಲೆ ಸದಾ ಹರಿದು ಬರುತ್ತದೆ. ನಮ್ಮ ಜೀವನದ ಸಂಕಷ್ಟಗಳನ್ನು ದೂರ ಮಾಡಿ, ಧೈರ್ಯ, ಸಹನೆ ಮತ್ತು ಶಾಂತಿಯನ್ನು ನೀಡುವ ಶಕ್ತಿ ಅವರಲ್ಲಿದೆ. ಆದ್ದರಿಂದ ಪ್ರತಿಯೊಬ್ಬರೂ ಭಕ್ತಿ, ಶ್ರದ್ಧೆ ಮತ್ತು ಸತ್ಯದ ಮಾರ್ಗದಲ್ಲಿ ನಡೆದು ಅವರ ಆಶೀರ್ವಾದಕ್ಕೆ ಪಾತ್ರರಾಗಬೇಕು ಎಂದರು.

ಸಂಸದ ಸುನೀಲ್ ಬೋಸ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ದೇವಸ್ಥಾನಕ್ಕೆ ಭೇಟಿ ನೀಡಿ ಕಂಡಾಯದ ದರ್ಶನ ಪಡೆದರು.

ಈ ವೇಳೆ ಗೌಡರಾದ ಮರಿಸ್ವಾಮಿ, ಭದ್ರಪ್ಪ, ಮಹಾದೇವ, ಗುರುಸ್ವಾಮಿ, ಬಣ್ಣ ಮಹೇಶ್, ರಾಜು, ಹುಚ್ಚೇಗೌಡನ ಕುಮಾರ, ಚಿಕಮಟ್ಟಿ ಪುಟ್ಟೇಗೌಡ, ಗೋವಿಂದರಾಜು, ಎಲ್ಐಸಿ ನಿಂಗರಾಜು, ಶಂಕರೇಗೌಡ, ನವೀನ, ಲಾರಿ ಶಿವಮಾದು ಸೇರಿದಂತೆ ಯುವ ಸಂಘಟನೆ ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಕನಕ ಭವನದಲ್ಲಿ ಗಣಪತಿ ದೇಗುಲ ಉದ್ಘಾಟನೆ

ಸಮಾಜ ಪರಿವರ್ತನೆಗೆ ಬಸವಣ್ಣನ ವಿಚಾರ ಅಗತ್ಯ: ಸಿಎಂ ಸಿದ್ದರಾಮಯ್ಯ



ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಏ.22– ಸರ್ವ ಜನಾಂಗದ ಶಾಂತಿಯ ತೋಟ ಮಾಡಬೇಕಾದರೆ ಬಸವಣ್ಣ, ಅಂಬೇಡ್ಕರ್, ಕನಕದಾಸ, ಗಾಂಧೀಜಿ ಅವರ ವಿಚಾರಧಾರೆಯನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಕನಕ ಭವನದಲ್ಲಿ ದೊಡ್ಡಮನೆ ರಾಜಲಿಂಗಯ್ಯ ಕುಟುಂಬದರು ನಿರ್ಮಿಸಿರುವ ಗಣಪತಿ ದೇವಸ್ಥಾನ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದಲ್ಲಿ ಸಮಾಜಮುಖಿಯಾಗಿ ಹಲವು ಕಾರ್ಯಕ್ರಮಗಳನ್ನು ಮಾಡುತ್ತಾ ಸಮುದಾಯದ ಮತ್ತು ಯುವ ಜನರ ಸಂಘಟನೆಯತ್ತ ಉತ್ಸುಕರಾಗಿರುವ ದೊಡ್ಡಮನೆ ರಾಜಲಿಂಗಯ್ಯ ಅವರ ಪುತ್ರ ಅಶೋಕ್ ಕುಮಾರ್ ಕನಕ ಭವನಕ್ಕೆ ಅವಶ್ಯಕವಾಗಿದ್ದ ಗಣಪತಿ ದೇವಸ್ಥಾನವನ್ನು ತಮ್ಮ ಸ್ವಂತ ಹಣದಲ್ಲಿ ನಿರ್ಮಿಸಿರುವುದು ಶ್ಲಾಘನೀಯ ಎಂದರು.

ಪ್ರಸ್ತುತ ಸಮಾಜದ ಪರಿವರ್ತನೆಗೆ ಬಸವಣ್ಣನವರ ವಿಚಾರಧಾರೆಗಳು ಅವಶ್ಯಕ. ಸಾಮಾಜಿಕ ನ್ಯಾಯದಿಂದ ವಂಚಿತರಾದವರ ಪರವಾಗಿ ನಾನು ರಾಜಕಾರಣ ಮಾಡುತ್ತಿದ್ದೇನೆ. ನನ್ನ ರಾಜಕೀಯ ಜೀವನದ ಉದ್ದಕ್ಕೂ ಜನರು ನನ್ನನ್ನು ಬೆಂಬಲಿಸಿದ್ದಾರೆ. ನಮ್ಮ ಸರ್ಕಾರ ಜನಪರವಾದ ಕೆಲಸ ಮಾಡಿದ್ದು, ಮುಂಬರುವ 2028ರ ಚುನಾವಣೆಯಲ್ಲಿ ರಾಜ್ಯದ ಜನರು ಮತ್ತೆ ಕಾಂಗ್ರೆಸ್ ಪಕ್ಷವನ್ನು ಗೆದ್ದೇ ಗೆಲ್ಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಮಾತನಾಡಿ, ನಗರದಲ್ಲಿ ಸಂಗೊಳ್ಳಿ ರಾಯಣ್ಣ ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನ ನೀಡಬೇಕು. ಹುಣಸೂರಿಗೆ ತಾಂತ್ರಿಕ ಕಾಲೇಜು ಮಂಜೂರು, ಕುರುಬ ಸಮಾಜದ ಮುಖಂಡರಿಗೆ ಉನ್ನತ ಸ್ಥಾನಮಾನ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ತಾಲೂಕು ಕುರುಬ ಸಮಾಜದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಳ್ಳಿ ಗದೆ ನೀಡಿ ಸನ್ಮಾನಿಸಲಾಯಿತು. ಇದೇ ವೇಳೆ ಸಿಎಂ ದೊಡ್ಡಮನೆ ರಾಜಲಿಂಗಯ್ಯ ಪುತ್ರ ಹಾಗೂ ಸಂಗೊಳ್ಳಿ ರಾಯಣ್ಣ ಯುವ ಬಳಗದ ಅಧ್ಯಕ್ಷ ಅಶೋಕ್ ರಾಜಲಿಂಗಯ್ಯ ಅವರನ್ನು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್, ಮಾಜಿ ಶಾಸಕ ಮಂಜುನಾಥ್, ರಾಜ್ಯ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ.ಎಂ.ತ್ರಿವೇಣಿ, ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ನಗರಸಭೆ ಮಾಜಿ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಕುರುಬರ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಹೇಶ್, ಮಹದೇವ, ಪ್ರಧಾನ ಕಾರ್ಯದರ್ಶಿ ವಾಸೇಗೌಡ, ನಿರ್ದೇಶಕರಾದ ಜಯರಾಂ, ಎ.ಪಿ.ಸ್ವಾಮಿ, ಬಸವರಾಜೇಗೌಡ, ನರಸಿಂಹ, ಪೌರಾಯುಕ್ತೆ ಮಾನಸ ಇನ್ನಿತರರಿದ್ದರು.

ಅಭಿನಂದನೆ



ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ತಿ.ನರಸೀಪುರ ತಾಲೂಕಿನ ಮುಸುವಿನ ಕೊಪ್ಪಲು ಪಿಎಸಿಎಸ್ ಅಧ್ಯಕ್ಷ ಎಂ.ಶಿವರಾಮು ಹುಟ್ಟುಹಬ್ಬದ ಶುಭಾಶಯ ಕೋರಿ ಅಭಿನಂದಿಸಿದರು. ಈ ವೇಳೆ ಕೆಬ್ಬೆಹುಂಡಿ ಮಹೇಶ್, ಮಾಜಿ ಪ್ರಧಾನ ಡಿ.ಆರ್.ಮೂರ್ತಿ, ಇಂಡವಾಳು ಹೊನ್ನಯ್ಯ ಇತರರಿದ್ದಾರೆ.

ನೂತನ ಸಂಚಾಲಕರಾಗಿ ನೇಮಕ



ಸರಗೂರು, ಏ.22– ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯ ಯುವ ಘಟಕದ ನೂತನ ಸಂಚಾಲಕರಾಗಿ ಆರ್.ಮಣಿ ನೇಮಕಗೊಂಡಿದ್ದಾರೆ.

ಇದೇ ವೇಳೆ ನೂತನ ಸಂಚಾಲಕರಾಗಿ ಆಯ್ಕೆ ಮಾಡಿದ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಭೂಮಿಪುತ್ರ ಚಂದನ್ ಗೌಡ ಅವರಿಗೆ ಮಣಿ ಅಭಿನಂದನೆ ಸಲ್ಲಿಸಿದ್ದಾರೆ.

ಗಾಂಜಾ ಮಾರಾಟಕ್ಕೆ ಯತ್ನಿಸಿದ

ಮೂವರು ಅಂತರರಾಜ್ಯ ಆರೋಪಿಗಳ ಬಂಧನ



ಆರೋಪಿಗಳೊಂದಿಗೆ ಪೊಲೀಸರನ್ನು ಕಾಣಬಹುದು.

ಹುಣಸೂರು, ಏ.22– ತಾಲೂಕಿನ ಬಿಳಿಕೆರೆ ಬಳಿ ಗಾಂಜಾ ಮಾರಾಟಕ್ಕೆ ಯತ್ನಿಸಿದ ಮೂವರು ಅಂತರರಾಜ್ಯ ಆರೋಪಿಗಳನ್ನು ಬಂಧಿಸುವಲ್ಲಿ ಬಿಳಿಕೆರೆ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಒರಿಸ್ಸಾ ಮೂಲದ ರಾಜ್‌ಕಪೂರ್ ಕನ್ಹಾರ್, ಬಸಂತ್ ಕುಮಾರ್ ಸಾಹು ಹಾಗೂ ಅಸ್ಸಾಂನ ಸಮರ್ ಮಿತ್ರಾ ಬಂಧಿತ ಆರೋಪಿಗಳು. ಇವರಿಂದ 3.170 ಕೆಜಿ ತೂಕದ ಗಾಂಜಾ ಪ್ಯಾಕೇಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿವರ: ಈ ಮೂವರು ಆರೋಪಿಗಳು ಬಿಳಿಕೆರೆ ಕೆರೆ ಏರಿ ಮೇಲೆ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಅವರ ಮಾರ್ಗದರ್ಶನದಲ್ಲಿ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಪುನೀತ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ. ತಕ್ಷಣ ಮೂವರು ಆರೋಪಿಗಳನ್ನು ಬಂಧಿಸಿ ತಹಸೀಲ್ದಾರ್ ಜೆ.ಮಂಜುನಾಥ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಹ ದೇವಸ್ವಾಮಿ ಸಮ್ಮುಖದಲ್ಲಿ ಮಹಜರ್ ನಡೆಸಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಅಶೋಕ್, ಪ್ರತಾಪ್, ರಾಜೇಗೌಡ, ಗೋವಿಂದ ಇನ್ನಿತರರಿದ್ದರು.

ಕೆ.ಆರ್.ನಗರ: ಪ್ರತ್ಯೇಕ ಪ್ರಕರಣಗಳಲ್ಲಿ

ವಿದ್ಯುತ್ ಸ್ಪರ್ಶದಿಂದ ಇಬ್ಬರು ಸಾವು



ಮಹದೇವ್



ಪುನೀತ್

ಕೆ.ಆರ್.ನಗರ, ಏ.22– ಪ್ರತ್ಯೇಕ ಪ್ರಕರಣಗಳಲ್ಲಿ ವಿದ್ಯುತ್ ಸ್ಪರ್ಶದಿಂದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಡಗೂರು ಮಾರಗೌಡನಹಳ್ಳಿ ಹಾಗೂ ಕೆಸ್ತೂರು ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಅಡಗೂರು ಮಾರಗೌಡನಹಳ್ಳಿ ನಿವಾಸಿ ಮಹದೇವ್ (58) ಹಾಗೂ ಕೆಸ್ತೂರು ಕೊಪ್ಪಲು ಗ್ರಾಮದ ನಿವಾಸಿ ರಮೇಶ್ ಅವರ ಪುತ್ರ ಪುನೀತ್(22) ಸಾವನ್ನಪ್ಪಿದವರು.

ಮಹದೇವ್ ಅವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಅರಿಶಿನ ಬೆಳೆಗೆ ನೀರು ಹಾಯಿಸಲು ಹೋದ ವೇಳೆ ಪಕ್ಕದ ಜಮೀನಿನ ಸುರೇಶ್ ಅವರ ಕಬ್ಬಿನ ಗದ್ದೆಯಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಇನ್ನು ಕೆಸ್ತೂರು ಕೊಪ್ಪಲು ಗ್ರಾಮದ ನಿವಾಸಿ ಪುನೀತ್, ತಮ್ಮ ಹಳೇ ಮನೆ ದುರಸ್ತಿಗೊಳಿಸುತ್ತಿದ್ದರು. ಈ ವೇಳೆ ನೀರಿನ ತೊಟ್ಟಿಯಿಂದ ನೀರು ಮೇಲೆತ್ತುವ ಮೋಟಾರ್ ಕೆಟ್ಟು ಹೋಗಿದ್ದರಿಂದ ಅದನ್ನು ಸರಿಪಡಿಸಲು ನೀರಿನ ತೊಟ್ಟಿಗೆ ಇಳಿದಾಗ ವಿದ್ಯುತ್ ಸ್ಪರ್ಶಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪುನೀತ್ ಕಳೆದ ತಿಂಗಳಷ್ಟೇ ಮದುವೆಯಾಗಿದ್ದರು ಎನ್ನಲಾಗಿದ್ದು, ಪತಿ ಕಳೆದುಕೊಂಡ ಪತ್ನಿ, ಬೇಬಿ ಆಕ್ರಂದನ ಮುಗಿಲು ಮುಟ್ಟಿತ್ತು.

ವಿಷಯ ತಿಳಿದು ಶಾಸಕ ಡಿ.ರವಿಶಂಕರ್ ಮಾರಗೌಡನಹಳ್ಳಿ ಗ್ರಾಮಕ್ಕೆ ತೆರಳಿ ಮೃತ ಮಹದೇವ್ ಅವರ ಕುಟುಂಬದರಿಗೆ ಸಾಂತ್ವನ ಹೇಳಿದರು. ಅಲ್ಲದೇ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು. ಬಳಿಕ ಕೆಸ್ತೂರು ಕೊಪ್ಪಲು ಗ್ರಾಮಕ್ಕೆ ತೆರಳಿದ ಶಾಸಕರು ಪುನೀತ್ ಅವರ ಕುಟುಂಬದರಿಗೆ ಸಾಂತ್ವನ ಹೇಳಿ ವೈಯಕ್ತಿಕ ಪರಿಹಾರ ನೀಡಿ, ಸರ್ಕಾರದಿಂದ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಒಂದನೇ ಪುಟದಿಂದ

ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ

ಮೈಸೂರಿನ ಅಧಿಕಾರಿಗಳ ಮೊಬೈಲ್ ಸಂಖ್ಯೆ ನೀಡಿ ದೂರು ನೀಡುವಂತೆ ಸಲಹೆ ನೀಡಿದ್ದಾರೆ. ಅದರಂತೆ ವಿದೇಶಿ ಮಹಿಳೆ ಮೈಸೂರಿನ ಎಸ್‌ಪಿ ಕಚೇರಿಯಲ್ಲಿ ಬಂದು ದೂರು ದಾಖಲಿಸಿ, ದೆಹಲಿಗೆ ತೆರಳಿ ಅಲ್ಲಿನ ಅಮೆರಿಕಾ ರಾಯಭಾರಿ ಕಚೇರಿಗೂ ದೂರು ನೀಡಿದ್ದಾರೆ ಎನ್ನಲಾಗಿದೆ.

ಇಬ್ಬರ ಬಂಧನ: ವಿದೇಶಿ ಮಹಿಳೆ ಮೇಲಿನ ಲೈಂಗಿಕ ದೌರ್ಜನ್ಯ ವಿಚಾರವನ್ನು ದೆಹಲಿಯ ಅಮೆರಿಕಾ ರಾಯಭಾರಿ ಕಚೇರಿ ಅಧಿಕಾರಿಗಳು ದೆಹಲಿ ವಿದೇಶಾಂಗ ಇಲಾಖೆ ಕಚೇರಿಗೆ ತಿಳಿಸಿದ ಬೆನ್ನಲ್ಲೆ, ವಿದೇಶಾಂಗ ಇಲಾಖೆಯಿಂದ ರಾಜ್ಯ ಸರಕಾರಕ್ಕೆ ಇ–ಮೇಲ್ ಮೂಲಕ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಅದರಂತೆ ರಾಜ್ಯ ಸರಕಾರವು ಕೊಡಗು ಜಿಲ್ಲಾ ಪೊಲೀಸ್‌ಗೆ ಇ–ಮೇಲ್ ಮೂಲಕ ಕ್ರಮಕ್ಕೆ ಸೂಚಿಸಿದ ಕೂಡಲೇ ಎಚ್ಚೆತ್ತ ಪೊಲೀಸರು, ದೇವಿ ವಿಲ್ಲಾ ಹೋಂ ಸ್ಟೇ ಮಾಲೀಕ ವಿಶಾಲ್ ಪೊನ್ನಪ್ಪ ಮತ್ತು ಜಾರ್ಖಂಡ್ ಮೂಲದ ಕೆಲಸಗಾರ ವೃಜೇಶ್ ಕುಮಾರ್ ಎಂಬುವರನ್ನು ಬಂಧಿಸಿದ್ದು, ಅವರಿಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕುಟ್ಟಾದಲ್ಲಿ ಪ್ರಕರಣ ದಾಖಲು: ವಿದೇಶಿ ಮಹಿಳೆ ಮೇಲಿನ ಲೈಂಗಿಕ ದೌರ್ಜನ್ಯ ಆರೋಪದಡಿ ಇಬ್ಬರು ಆರೋಪಿಗಳನ್ನು ಬಂಧಿಸಿರುವುದಾಗಿ ಸ್ಪಷ್ಟಪಡಿಸಿರುವ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಕುಟ್ಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಸಲಾಗುತ್ತಿದೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ.

ಮೈಸೂರಲ್ಲಿ ವೈದ್ಯಕೀಯ ತಪಾಸಣೆ: ಕೊಡಗಿನ ಹೋಂಸ್ಟೇನಲ್ಲಿ ಲೈಂಗಿಕ ದೌರ್ಜನ್ಯಕ್ಕೀಡಾದ ಅಮೆರಿಕ ಮೂಲದ ಮಹಿಳೆಯನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಇಂದು ವೈದ್ಯಕೀಯ ಪರೀಕ್ಷೆಗೊಳಪಡಿಸಲಾಗಿದ್ದು, ಬಳಿಕ ಅವರು ದೆಹಲಿಗೆ ತೆರಳಿದ್ದಾರೆಂದು ಹೇಳಲಾಗಿದೆ. ಚೆನ್ನೈನ ಅಮೆರಿಕ ರಾಯಭಾರಿ ಕಚೇರಿಯ ಮಹಿಳಾ ಸಿಬ್ಬಂದಿಯೊಬ್ಬರು ಈ ವೇಳೆ ಅವರ ಜೊತೆ ಇದ್ದರೆಂದು ತಿಳಿದುಬಂದಿದೆ. ಏ.25ರಂದು ವಾಷಿಂಗ್ಟನ್‌ಗೆ ಈ ಮಹಿಳೆ ತೆರಳಲು ವಿಮಾನ ಟಿಕೆಟ್ ಬುಕ್ ಆಗಿದೆ ಎಂದು ಕೆಲ ಮೂಲಗಳು ತಿಳಿಸಿವೆ.

3 ದಿನ ವೈಫೈ ಕಟ್: ವಿದೇಶಿ ಮಹಿಳೆ ಹೋಂ ಸ್ಟೇನಲ್ಲಿ ತಂಗಿದ್ದ ವೇಳೆ ಆರೋಪಿ ವೃಜೇಶ್ ಕುಮಾರ್ ಸಿಹಿ ಪಾನಕಕ್ಕೆ ಮತ್ತು ಬರುವ ಪದಾರ್ಥ ಬೆರೆಸಿ ಕೊಟ್ಟು ಲೈಂಗಿಕ ದೌರ್ಜನ್ಯ ಎಸಗಿದ್ದು, ಸಂತ್ರಸ್ತೆ ಯಾರನ್ನೂ ಸಂಪರ್ಕಿಸಲು ಸಾಧ್ಯವಾಗದಂತೆ ಹೋಂ ಸ್ಟೇ ಮಾಲೀಕ ವಿಶಾಲ್ ಪೊನ್ನಪ್ಪ ವೈಫೈ ಸಂಪರ್ಕ ಕಡಿತ ಮಾಡಿ ಪ್ರಕರಣ ಮುಚ್ಚಿಹಾಕಲು ಯತ್ನಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಚೆನ್ನೈ ಮತ್ತು ದೆಹಲಿಯ ಅಮೆರಿಕಾ ರಾಯಭಾರಿ ಕಚೇರಿ ಅಧಿಕಾರಿಗಳು ಮಂಗಳವಾರ ಕೊಡಗು ಜಿಲ್ಲೆಗೆ ಆಗಮಿಸಿ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ. ಇಷ್ಟಾದರೂ ಪ್ರಕರಣವನ್ನು ಪೊಲೀಸ್ ಇಲಾಖೆ ಗೌಪ್ಯವಾಗಿಟ್ಟಿದ್ದೇಕೆ ಎಂಬ ಅನುಮಾನ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ಘಟನೆ ಮುಚ್ಚಿಹಾಕಲೆತ್ನಿಸಿದ್ದಾರೆ!

ಅತ್ಯಾಚಾರ ನಡೆದಿರುವ ಬಗ್ಗೆ ಪೊಲೀಸರಿಗೆ ಗೊತ್ತಾದ ತಕ್ಷಣ ಕ್ರಮ ತೆಗೆದುಕೊಂಡಿದ್ದಾರೆ. ಘಟನೆಯ ಆರೋಪಿಗಳನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವ ಮೂಲಕ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಆರೋಪಿ ಜಾರ್ಖಂಡ್ ಮೂಲದವನು ಎನ್ನಲಾಗಿದ್ದು, ಪರಿಶೀಲನೆ ನಡೆಯುತ್ತಿದೆ ಎಂದರು.

ಎಲ್ಲಾ ಮಾತಾಡಿದಂತೆ ನಾನು ಹೇಳಿದ್ದೇನೆ: ಬೆಟ್ಟಿಂಗ್ ಕುರಿತಂತೆ ಕೋರ್ಟ್ ಆದೇಶದ ಬಗ್ಗೆ ಹೆಚ್ಚು ಮಾತನಾಡಲು ಇಚ್ಛಿಸುವುದಿಲ್ಲ, ಕಬ್ಬಡಿ ಆಟ ನಡೆಯುವಾಗ ಹಳ್ಳಿಯಲ್ಲಿ ಎಲ್ಲರೂ ಮಾತನಾಡುವ ಹಾಗೆ ನಾನೂ ಮಾತನಾಡಿದ್ದೇನೆ.

ಕಾನೂನು ದೃಷ್ಟಿಯಿಂದ ಅದು ತಪ್ಪು. ಆದರೆ, ನಾನು ಯಾವ ರೀತಿ ಹೇಳಿದ್ದೇನೆ ಎನ್ನುವುದು ಮುಖ್ಯವಾಗುತ್ತದೆ. ನಾನೇನಾದರೂ ಬೆಟ್ಟಿಂಗ್ ಪ್ರಮೋಟ್ ಮಾಡಿ ಎಂಬುದಾಗಿ ಹೇಳಿದ್ದರೆ ಅದು ಸರಿಯಲ್ಲ. ನಾನು ಒಬ್ಬ ಜವಾಬ್ದಾರಿ ಸ್ಥಾನದವನಾಗಿ, ಪ್ರಮೋಟ್ ಮಾಡುತ್ತೇನೆ ಎಂದರೆ ಶುದ್ಧ ಸುಳ್ಳು, ಮಾತನ್ನು ಅರ್ಥೈಸಿಕೊಳ್ಳುವುದರ ಮೇಲೆ ನಿಂತಿದೆ.

ತಮಾಷೆನೂ ಮಾಡಬಾರದಾ...: ತಮಾಷೆನೂ ಮಾಡುವಂತಿಲ್ಲ ಎಂಬಂತಾಗಿದೆ. ನಾನು ಕಾನೂನು ಗೌರವಿಸುವವನು, ಕಾನೂನು ರಕ್ಷಣೆ ಮಾಡುವ ಖಾತೆ ನಿಭಾಯಿಸುತ್ತಿದ್ದೇನೆ, ಕಾನೂನಿಗೆ ಗೌರವ ಕೊಡಬೇಕಲ್ಲವೇ, ಕಾನೂನು ಏನು ಕ್ರಮ ತೆಗೆದುಕೊಳ್ಳುತ್ತದೋ, ಅದಕ್ಕೆ ಬಿಟ್ಟಿದ್ದೇನೆ. ಕೋರ್ಟ್‌ನಿಂದ ನೋಟಿಸ್ ಕೊಟ್ಟಿರಲಿಲ್ಲ, ನೋಟಿಸ್ ಬಂದಿದ್ದರೆ ಅರ್ಥೈಸಲಾಗುತ್ತಿತ್ತು, ಗಂಭೀರವಾಗಿ ಪರಿಗಣಿಸಬೇಡಿ ಎಂದು ಮನವರಿಕೆ ಮಾಡಲಾಗುತ್ತಿತ್ತು. ನೋಟಿಸ್ ಬಂದಿಲ್ಲ, ಏಕಾಏಕಿಯಾಗಿ ಆದೇಶ ಮಾಡಿದ್ದಾರೆ. ಕಾನೂನಿಗೆ ಗೌರವ ಕೊಡಬೇಕು, ಗೌರವಿಸುತ್ತೇನೆ ಎಂದರು. ಸಚಿವ ಸಂಪುಟ ಪುನರ್ ರಚನೆ ವಿಚಾರ ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಬಿಟ್ಟಿದ್ದು, ನಾವು ಹೇಳಿದರೆ ಅಪ್ರಸ್ತುತವಾಗುತ್ತದೆ ಎಂದರು.

5.08 ಎಕರೆ ಭೂಮಿ ಪುನಃ ರೇಷ್ಮೆ ಕಾರ್ಖಾನೆ ವಶಕ್ಕೆ

ಸರಣಿ ಪ್ರತಿಭಟನೆ ಮಾಡಿ, ಆಕ್ರೋಶ ವ್ಯಕ್ತಪಡಿಸಿದ್ದರು. ಅಂತೂ ಪ್ರತಿಭಟನೆಗೆ ಮಣಿದಿದ್ದ ಸರ್ಕಾರ ಮಾ.27ರಂದು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರು ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ಪ್ರಸ್ತಾವನೆ ಕೈ ಬಿಟ್ಟಿರುವುದಾಗಿ ವಿಧಾನಸಭೆಯಲ್ಲೇ ಘೋಷಿಸಿದ್ದರು.

ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಕ್ರಿಯೆಯಿಂದ ಹಿಂದೆ ಸರಿದಿರುವುದಾಗಿ ಸರ್ಕಾರ ಘೋಷಣೆ ಮಾಡಿದ್ದರೂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿದ್ದ 5.08 ಎಕರೆ ಭೂಮಿಯನ್ನು ರೇಷ್ಮೆ ಇಲಾಖೆಗೆ ವಾಪಸ್ ನೀಡಿರಲಿಲ್ಲ. ಈ ಮಧ್ಯೆ ರೇಷ್ಮೆ ಇಲಾಖೆ ಆಯುಕ್ತರು ಪತ್ರ ಬರೆದು ಭೂಮಿ ವಾಪಸ್ ನೀಡುವಂತೆ ಕೋರಿದ್ದರು. ಇದೀಗ ಸರ್ಕಾರ ಅಧಿಕೃತವಾಗಿ ಆದೇಶ ಹೊರಡಿಸಿದ್ದು, ಈ ಹಿಂದೆ ರೇಷ್ಮೆ ಇಲಾಖೆಗೆ ಸೇರಿದ 5 ಎಕರೆ ಭೂಮಿಯನ್ನು ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ 2025ರ ಜು.14ರಂದು ಹೊರಡಿಸಿದ್ದ ಆದೇಶವನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯುತ್ತಿರುವುದಾಗಿ ಏ.21ರಂದು ಸರ್ಕಾರದ ಅಧೀನ ಕಾರ್ಯದರ್ಶಿ ಎಸ್.ಪ್ರಮೀಳ ಸರ್ಕಾರದ ಪರವಾಗಿ ಆದೇಶಿಸಿದ್ದಾರೆ.

ಮುಂದಿನ ಪ್ರಕ್ರಿಯೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಈ ಹಿಂದೆ ಹಸ್ತಾಂತರಿಸಿದ್ದ ಭೂಮಿ ಹಿಂಪಡೆಯುವುದಾಗಿ ಸರ್ಕಾರ ಆದೇಶಿಸಿರುವ ಹಿನ್ನೆಲೆಯಲ್ಲಿ ರೇಷ್ಮೆ ಇಲಾಖೆ ತಿ.ನರಸೀಪುರದ ತಹಸೀಲ್ದಾರ್‌ಗೆ ಪತ್ರ ಬರೆದು ಸರ್ಕಾರದ ಆದೇಶ ಪ್ರತಿಯನ್ನು ಲಗತ್ತಿಸಿದರೆ, ವಾರದೊಳಗೆ ಆರ್‌ಟಿಸಿಯಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಸರನ್ನು ತೆಗೆದು, ರೇಷ್ಮೆ ಇಲಾಖೆ ಹೆಸರು ಸೇರಿಸುವ ಪ್ರಕ್ರಿಯೆ ನಡೆಯಲಿದೆ. ಸರ್ಕಾರದ ಎರಡು ಇಲಾಖೆ ನಡುವಿನ ಭೂ ಹಸ್ತಾಂತರ ಪ್ರಕ್ರಿಯೆ ನಡೆದಿರುವುದರಿಂದ ಭೂಮಿ ಹಿಂಪಡೆಯುವ ಪ್ರಕ್ರಿಯೆ ಸುಲಭವಾಗಿ ಸಾಗುತ್ತದೆ. ಮುಂದಿನ ಒಂದು ವಾರದಲ್ಲಿ ರೇಷ್ಮೆ ಇಲಾಖೆ ಸುಪರ್ದಿಯಲ್ಲಿ 13.11 ಎಕರೆ ಭೂಮಿ ಇರಲಿದೆ.

ಕ್ರೀಡಾಂಗಣ ನಿರ್ಮಾಣ ಸೂಕ್ತವಲ್ಲ: ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಗುರುತಿಸಿದ ಸ್ಥಳದ ಪಕ್ಕ ನೂಲು ತಯಾರಿಕಾ ಘಟಕದ ಬಾಯ್ಲರ್ ಯಂತ್ರಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ, ಮುಂದಿನ ದಿನಗಳಲ್ಲಿ ಮತ್ತೊಂದು ಬಾಯ್ಲರ್ ಅಳವಡಿಸಲು ನಿರ್ಧರಿಸಲಾಗಿದೆ. ಇದರಿಂದ ಹೊಗೆ ಮತ್ತು ಧೂಳು ಹೊರ ಬರುವುದು. ಹಾಗಾಗಿ ತಾಲೂಕು ಕ್ರೀಡಾಂಗಣ ನಿರ್ಮಾಣ ಸೂಕ್ತವಲ್ಲ ಎಂದು ಸರ್ಕಾರ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಇಟಿಪಿ ಘಟಕ ನಿರ್ಮಾಣ: ಕಪಿಲಾ ನದಿ ನೀರು ರೇಷ್ಮೆ ನೂಲು ತಯಾರಿಕೆಗೆ ಪೂರಕವಾಗಿದ್ದು, ಮುಂಬರುವ ದಿನಗಳಲ್ಲಿ ನೂಲು ತೆಗೆಯುವ ಸಾಮರ್ಥ್ಯ ಹೆಚ್ಚಿಸಲು ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕದಲ್ಲಿ ಹೊಸದಾಗಿ 4 ಸ್ವಯಂಚಾಲಿತ ನೂಲು ರೀಲಿಂಗ್ ಯಂತ್ರ ಅಳವಡಿಸಲು ಕಾರ್ಯ ಯೋಜನೆ ರೂಪಿಸಲಾಗಿದೆ. ಇದಕ್ಕೆ ಪ್ರತಿದಿನ 10 ಲಕ್ಷ ಲೀಟರ್ ನೀರಿನ ಅವಶ್ಯಕತೆಯಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈಗಾಗಲೇ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ತ್ಯಾಜ್ಯ ನೀರು ಸಂಸ್ಕರಣ ಘಟಕ(ಇಟಿಪಿ) ಸ್ಥಾಪಿಸುವಂತೆ ಸೂಚನೆ ನೀಡಿದೆ. ಇದಕ್ಕಾಗಿ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಸ್ಥಳದ ಅವಶ್ಯಕತೆ ಇರುವುದರಿಂದ ಇಲ್ಲಿ ಕ್ರೀಡಾಂಗಣ ಕಷ್ಟಸಾಧ್ಯವಾಗುತ್ತದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ರನ್ಯಾರಾವ್ ಜೈಲಿನಿಂದ ಬಿಡುಗಡೆ

ಆರೋಪದಡಿ ಮಾರ್ಚ್ 3ರಂದು ಡಿಆರ್‌ಐ ಅಧಿಕಾರಿಗಳು ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ಯಾ ರಾವ್ ಅವರನ್ನು ಬಂಧಿಸಿದ್ದರು. ಚಿನ್ನ ಸಾಗಣೆ, ಮಾರಾಟಕ್ಕೆ ನೆರವು ನೀಡಿದ್ದ ಆರೋಪದ ಮೇರೆಗೆ ರನ್ಯಾ ಸಹಚರರಾದ ತರುಣ್ ರಾಜ್ ಕುಂಡೂರು ಹಾಗೂ ಸಾಹಿಲ್ ಜೈನ್ ಅವರನ್ನು ಬಂಧಿಸಲಾಗಿತ್ತು. ರನ್ಯಾ ರಾವ್, ತರುಣ್ ಕೊಂಡೂರು ರಾಜ್‌ಗೆ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು 2025ರ ಮೇ 20ರಂದು ಜಾಮೀನು ಮಂಜೂರು ಮಾಡಿತ್ತು. ಇದಕ್ಕೂ ಮುನ್ನ ಅಂದರೆ ಏಪ್ರಿಲ್ 22ರಂದು ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ(ಕಾಫಿಪೋಸಾ) 3(1) ಸೆಕ್ಷನ್ ಅಡಿಯಲ್ಲಿ ರನ್ಯಾ ವಿರುದ್ಧ ಬಂಧನದ ಆದೇಶ ಹೊರಡಿಸಲಾಗಿತ್ತು. ಕಾಫಿಪೋಸಾ ಪ್ರಕರಣದಲ್ಲಿ ಬಂಧನವಾದರೆ, ಒಂದು ವರ್ಷ ಜೈಲಿನಿಂದ ಬಿಡುಗಡೆ ಆಗುವಂತೆ ಇಲ್ಲ. ಹೀಗಾಗಿ, ಜಾಮೀನು ಲಭಿಸಿದ್ದರೂ ರನ್ಯಾ ಕಾರಾಗೃಹದಲ್ಲೇ ಇದ್ದರು. ಕಾಫಿಪೋಸಾದಡಿ ಆದೇಶ ಹೊರಡಿಸಿ ಬುಧವಾರಕ್ಕೆ ಒಂದು ವರ್ಷವಾಗಿದ್ದು, ಈ ಹಿಂದೆಯೇ ಲಭಿಸಿದ ಜಾಮೀನಿನ ಮೇಲೆ ರನ್ಯಾ ಬಿಡುಗಡೆ ಆಗಿದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದೆ. ಸದ್ಯಕ್ಕೆ ಮೇಲ್ಮನವಿ ಸಲ್ಲಿಸುತ್ತಿಲ್ಲ' ಎಂದು ಡಿಆರ್‌ಐ ಮೂಲಗಳು ತಿಳಿಸಿವೆ.

ತರುಣ್ ರಾಜ್ ಕುಂಡೂರು ಹಾಗೂ ಸಾಹಿಲ್ ಜೈನ್ ಅವರಿಗೂ ಜಾಮೀನು ಲಭಿಸಿದ್ದು ಸದ್ಯದಲ್ಲೇ ಅವರು ಬಿಡುಗಡೆ ಆಗಲಿದ್ದಾರೆ ಎಂದು ಮೂಲಗಳು ಹೇಳಿವೆ.

ದೋಷಾರೋಪ ಪಟ್ಟಿ ಸಲ್ಲಿಸಿದ್ದ ಇ.ಡಿ: 'ಅಕ್ರಮ ಹಣ ವರ್ಗಾವಣೆ (ತಡೆ) ಕಾಯ್ದೆಯ (ಪಿಎಂಎಲ್‌ಎ) ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯಕ್ಕೆ ಕಳೆದ ಫೆಬ್ರುವರಿ ಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ರನ್ಯಾ ರಾವ್, ಸಹಚರರು ಒಂದು ವರ್ಷದಲ್ಲಿ 102.55 ಕೋಟಿ ಮೌಲ್ಯದ 127 ಕೆ.ಜಿ ಚಿನ್ನವನ್ನು ಕಳ್ಳ ಸಾಗಣೆ ಮಾಡಿದ್ದಾರೆಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

ಅನಿವಾರ್ಯವಲ್ಲ!!

ನಮಗೆ ನೀಡಿದ್ದ ಶೇಕಡ 4ರಷ್ಟು ಮೀಸಲಾತಿ ವಿಚಾರ ಇನ್ನೂ ಬಾಕಿ ಇದೆ. ಗೋಹತ್ಯೆ ಮತ್ತು ಧರ್ಮಾಂತರ ಕುರಿತ ಕಾನೂನುಗಳನ್ನು ತಕ್ಷಣ ಪರಿಶೀಲಿಸಿ ಸರಿಪಡಿಸಬೇಕು. ಜವಾಬ್ದಾರಿ ಇಲ್ಲದ ಹೇಳಿಕೆಗಳು ಮತ್ತು ಅಶಿಸ್ತಿನ ವರ್ತನೆ ಸಮುದಾಯದ ಏಕತೆ ಮತ್ತು ವಿಶ್ವಾಸಕ್ಕೆ ಹಾನಿ ಮಾಡುತ್ತದೆ. ಮುಸ್ಲಿಂ ಸಮುದಾಯವನ್ನು ವಿಭಜಿಸುವ ಕೆಲಸ ಮಾಡಬೇಡಿ. ಅಂತಹ ಪರಿಸ್ಥಿತಿ ನಿರ್ಮಾಣವಾದರೆ, ಅದನ್ನು ಎದುರಿಸುವ ಶಕ್ತಿ ನಮಗಿದೆ. ಕಾಂಗ್ರೆಸ್ ನಾಯಕರು ಕ್ರಮ ಕೈಗೊಳ್ಳದಿದ್ದರೆ, ನಮ್ಮ ರಾಜಕೀಯ ನಿಲುವನ್ನು ಮರು ಪರಿಶೀಲಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬರಲೂ ನಾವೇ ಕಾರಣ. ರಾಜ್ಯದ 60 ಕ್ಷೇತ್ರಗಳಲ್ಲಿ ನೀವು ನಮ್ಮಿಂದ ಗೆದ್ದಿದ್ದೀರಿ. ಇಷ್ಟಾದರೂ ಶೇ.14ರಷ್ಟಿರುವ ಮುಸ್ಲಿಂ ಸಮುದಾಯಕ್ಕೆ ಕೇವಲ ಇಬ್ಬರು ಸಚಿವರನ್ನಾಗಿ ಮಾಡಿದ್ದೀರಿ, ಲಿಂಗಾಯತರಿಗೆ 8 ಸ್ಥಾನ ನೀಡಿದ್ದೀರಿ. ಅಧಿಕಾರಕ್ಕೆ ತಂದ ಸಮುದಾಯಕ್ಕೆ ಕಾಂಗ್ರೆಸ್ ಅನ್ಯಾಯ ಮಾಡುತ್ತಿದೆ. ನಾವು ಇದನ್ನು ಸಹಿಸುವುದಿಲ್ಲ, ನಿಮಗೆ ಪಾಠ ಕಲಿಸಲು ಎರಡು ವರ್ಷ ಬಹಳ ದೂರ ಇಲ್ಲ ಎಂದು ಎಚ್ಚರಿಸಿದ್ದಾರೆ.

ಇಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ

ಈ ವರ್ಷ ಪ್ರಥಮ ಬಾರಿಗೆ ವಿಶೇಷವಾಗಿ ವಿದ್ಯಾರ್ಥಿಗಳ ಫಲಿತಾಂಶದ ಅಂಕ ಪಟ್ಟಿಯನ್ನು (ಮಾರ್ಕ್ ಕಾರ್ಡ್) ಡಿಜಿಲಾಕರ್ (https:www.digilocker.gov.in) ನಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆ ನಂತರ ಲಭ್ಯವಿರಲಿದೆ. ವೆಬ್‌ಸೈಟ್ ಮೂಲಕ ವಿದ್ಯಾರ್ಥಿಗಳು ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅಂಕಪಟ್ಟಿಯನ್ನು ಡಿಜಿಲಾಕರ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಈ ವೀಡಿಯೋ ಲಿಂಕ್ (https:tinyurl.com/mw84wmh9) ಬಳಸಿ ತಿಳಿದುಕೊಳ್ಳಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಟ–ಮಂತ್ರ!

ಆ ಶಕ್ತಿ ಇರೋದು ಮಾಜಿ ಸಚಿವ ರಾಜಣ್ಣರಿಗೆ ಮಾತ್ರ!



ಬೆಂಗಳೂರು, ಏ.22(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಟ–ಮಂತ್ರ ಮಾಡುವ ಶಕ್ತಿ ಇರುವುದು ಮಾಜಿ ಸಚಿವ ಕೆಎನ್. ರಾಜಣ್ಣ ಅವರಿಗೆ ಮಾತ್ರ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಪ್ತ, ಕಾಂಗ್ರೆಸ್‌ನ ಹಿರಿಯ ಶಾಸಕ ಎಚ್.ಸಿ.ಬಾಲಕೃಷ್ಣ ಇಂದಿಲ್ಲಿ ಬಾಂಬ್ ಸಿಡಿಸಿದ್ದಾರೆ.

ಮುಖ್ಯಮಂತ್ರಿ ಆಪ್ತರೇ ಮಾಡಿಸಿರಬಹುದು, ಬೇರೆಯವರು ಮಾಡಿಸಿದರೆ ಸಿದ್ದರಾಮಯ್ಯ ಬಿಡುತ್ತಾರಾ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಟ–ಮಂತ್ರ ಮಾಡುವ ಶಕ್ತಿ ರಾಜಣ್ಣ ಅವರನ್ನು ಹೊರತುಪಡಿಸಿ ಇನ್ಯಾರಿಗಿದೆ! ಎಂದು ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ಅವರಿಗೆ ವಯೋಸಹಜ ಸಮಸ್ಯೆ ಇರಬಹುದು. ಇದರಿಂದ ಅವರು ಕ್ರಿಯಾಶೀಲರಾಗದಿರಲು ಸಾಧ್ಯವಿದೆ. ಆದರೆ, ಈಗಲೂ ಅವರು ಆಡಳಿತದಲ್ಲಿ ಚುರುಕಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ

ಶಾಸಕ ಬಾಲಕೃಷ್ಣ ಎದಿರೇಟು

ಸರ್ಕಾರ ನಡೆಸುವ ಶಕ್ತಿಯೂ ಇದೆ. ಉಪಮುಖ್ಯಮಂತ್ರಿ ಮೇಲಿನ ಕೋಪಕ್ಕೆ ರಾಜಣ್ಣ ಅವರ ಹೆಸರು ಪ್ರಸ್ತಾಪಿಸದೆ, ಮಾಟ–ಮಂತ್ರದ ವಿಚಾರ ಮಾತನಾಡಿದ್ದಾರೆ.

ಮಾಟ–ಮಂತ್ರ ಮಾಡಿಸುವವರ ಕುಟುಂಬ ಸರ್ವನಾಶ ಆಗಿಬಿಡುತ್ತದೆ ವಾಮಾಚಾರ ಮಾಡಿದವರನ್ನು ನಾವು ಕಂಡಿದ್ದೇವೆ. ಅವರು ಈಗ ಎಂತಹ ಸ್ಥಿತಿಯಲ್ಲಿದ್ದಾರೆ ಎಂಬುದು ನಮಗೆ ಗೊತ್ತು ಅಂತಹ ಮೂರ್ಖತನಕ್ಕೆ ಯಾರೂ ಕೈಹಾಕಲ್ಲ ಎಂದರು. ಮಾಟ–ಮಂತ್ರ ಮಾಡಿ ಯಾರದ್ದೋ ಬಾಯಿ ಮುಚ್ಚಿಸಲು ಆಗಲ್ಲ. ಹಾಗೇನಾದರೂ ಆಗುವುದಿದ್ದರೆ ವಾಮಾಚಾರಿಗಳು ಎಂತೆಂಥವರ ಬಾಯಿ ಮುಚ್ಚಿಸುತ್ತಿದ್ದರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವಿಚಾರದಲ್ಲಿ ಪಕ್ಷದ ವರಿಷ್ಠರು ಎಚ್ಚರಿಕೆ ನೀಡಿದ್ದಾರೆಯೇ ಹೊರತು, ಅವರನ್ನೇನು ನೇಣು ಹಾಕಿಲ್ಲ.

ಒಕ್ಕಲಿಗರು, ಲಿಂಗಾಯತರು ಸೇರಿದಂತೆ ಎಲ್ಲ ಸಮುದಾಯದವರು ಪ್ರಾತಿನಿಧ್ಯ ಕೇಳುತ್ತಾರೆ. ಅದೇ ರೀತಿ ಇಮಾಮೂ ಕೇಳಿದ್ದಾರೆ, ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ಅಂಬೇಡ್ಕರ್ ಜಯಂತಿ...



ನಂಜನಗೂಡು ತಾಲೂಕು, ಹೆಬ್ಯಾ ಗ್ರಾಮದಲ್ಲಿ ಡಾ.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯನ್ನು ಭಾನುವಾರ ಅರ್ಥಪೂರ್ಣವಾಗಿ ಆಚರಿಸಿ, ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಗ್ರಾಪಂ ಮಾಜಿ ಉಪಾಧ್ಯಕ್ಷ ರಾಜಣ್ಣ, ಹೆಚ್.ಎಸ್.ಶಶಾಂಕ್, ಹೆಚ್.ಪಿ.ಜಗದೀಶ್, ನಂಜುಂಡಿ, ಯತೀಶ್ ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಪ್ರೀತಿಸಿ ಮದುವೆಯಾಗಿದ್ದ ಗಂಡನಿಗೆ ಕೈಕೊಟ್ಟು ಸ್ನೇಹಿತನ ಜೊತೆ ಪತ್ನಿ ಎಸ್ಕೇಪ್!

ಬೆಂಗಳೂರು: ಪ್ರೀತಿಸಿ, ಕೊನೆಗೆ ಮನೆಯವರನ್ನು ಒಪ್ಪಿಸಿ ಮದುವೆಯಾಗಿದ್ದ ಮಹಿಳೆಯೊಬ್ಬರು ಇದೀಗ ಗಂಡನನ್ನು ಬಿಟ್ಟು ಆತನ ಸ್ನೇಹಿತನ ಜೊತೆ ಪರಾರಿಯಾಗಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಜಿಮ್ ಟ್ರೈನರ್ ನಿತೇಶ್ ಎಂಬುವರನ್ನು ನಂದಿನಿ (ಹೆಸರು ಬದಲಾಯಿಸಲಾಗಿದೆ) ವಿವಾಹವಾಗಿದ್ದಳು. ಆದರೆ ಈಗ ಗಂಡನಿಗೆ ಕೈಕೊಟ್ಟು ಅಣ್ಣನ ಸಮಾನ ಎಂದು ಹೇಳುತ್ತಿದ್ದನ ಜೊತೆ ಮಹಿಳೆ ಓಡಿಹೋಗಿರುವುದು ಸಂಚಲನ ಮೂಡಿಸಿದೆ. ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ನಿತೇಶ್ ಮತ್ತು ನವೀನ್ ಸ್ನೇಹಿತರಾಗಿದ್ದರು. ನಂತರ ನಿತೇಶ್ ನಂದಿನಿಯನ್ನು ಪ್ರೀತಿಸಿ ಮದುವೆಯಾಗಿದ್ದನು. ಇನ್ನು ನವೀನ್, ನಿತೇಶ್ ಮನೆಯಲ್ಲೇ ಬಾಡಿಗೆಗೆ ವಾಸವಿದ್ದನು. ಈ ವೇಳೆ ಇಬ್ಬರ ಮಧ್ಯೆ ಸಲುಗೆ ಬೆಳೆದಿದೆ. ಇದನ್ನು ಗಮನಿಸಿದ ನಿತೇಶ್ ಪತ್ನಿಗೆ ಬುದ್ಧಿವಾದ ಹೇಳಿದ್ದಾನೆ. ಅಲ್ಲದೆ ಮನೆಯನ್ನು ಬದಲಾಯಿಸಿದ್ದನು. ಇಷ್ಟಾದರೂ ನಂದಿನಿ ಆತನ ಸಹವಾಸವನ್ನು ಬಿಟ್ಟಿರಲಿಲ್ಲ. ನಿನ್ನೆ ಹೊಟ್ಟೆನೋವು ಎಂದು ಕೆಲಸಕ್ಕೆ ರಜೆ ಹಾಕಿದ್ದ ಪತ್ನಿ ನವೀನ್ ಜೊತೆ ನಾಪತ್ತೆಯಾಗಿದ್ದಾಳೆ.

ಮೈಸೂರು ಮಿತ್ರ

ತಾಂತ್ರಿಕ ಕ್ಷೇತ್ರದಲ್ಲಿ ಹೈಟೆಕ್ ಸ್ಪರ್ಶ; ಸೆನ್ಸಾರ್ ಡಿಸೈನ್ ಲ್ಯಾಬ್ ಆರಂಭ

ಮೈಸೂರು, ಏ.22(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿಗೆ ತಾಂತ್ರಿಕ ಕ್ಷೇತ್ರದಲ್ಲಿ ಹೈಟೆಕ್ ಸ್ಪರ್ಶ ನೀಡಲು ಸರ್ಕಾರ ಮುಂದಾಗಿದ್ದು, ಅದರಂತೆ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸ್ವಯಂ ಉದ್ಯೋಗದ ಶಕ್ತಿ ಹೆಚ್ಚಿಸುವ ಉದ್ದೇಶದಿಂದ ಮೈಸೂರು ಜಿಲ್ಲೆಯಲ್ಲಿ 1.25 ಕೋಟಿ ರೂ. ವೆಚ್ಚದಲ್ಲಿ ಸೆನ್ಸಾರ್ ಡಿಸೈನ್ ಲ್ಯಾಬ್ ಆರಂಭಗೊಳ್ಳಲಿದೆ.

ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ, ಸಂಶೋಧನೆ ಮತ್ತು ನವೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ನಗರದ ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಈ ಲ್ಯಾಬ್ ತೆರೆಯಲು ಉದ್ದೇಶಿಸಲಾಗಿದ್ದು, ಕರ್ನಾಟಕ ಸ್ಟಾರ್ಟಪ್ ಸೆಲ್, ಎಲೆಕ್ಟ್ರಾನಿಕ್ಸ್, ಐಟಿ & ಬಿ.ಟಿ. ಇಲಾಖೆ, ಕರ್ನಾಟಕ ಸರ್ಕಾರ ಆವರ್ತಿತ ಇನೋವೇಶನ್ ಲ್ಯಾಬ್ ಯೋಜನೆ ಅಡಿಯಲ್ಲಿ ಈ ಕಾಲೇಜನ್ನು ಆಯ್ಕೆ ಮಾಡಲಾಗಿದೆ.



ಪ್ರಯೋಗಾಲಯದ 3ಡಿ ಮಾದರಿ



> ಸರ್ಕಾರಿ ಕಾಲೇಜು ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಈ ಕಾರ್ಯಕ್ರಮ ಮಾಡುತ್ತಿದ್ದು, ಮೈಸೂರಲ್ಲಿ ಶೀಘ್ರದಲ್ಲಿಯೇ ಲ್ಯಾಬ್ ಆರಂಭವಾಗಲಿದೆ. ಇದರಿಂದಾಗಿ ಸಾವಿರಾರು ಮಂದಿ ವಿದ್ಯಾರ್ಥಿಗಳು, ಯುವ ಉದ್ಯಮಿಗಳಿಗೆ ಅನುಕೂಲವಾಗಲಿದೆ.
> –ಬಿ.ರಂಜಿತ್ ಗೌಡ, ಉಪನ್ಯಾಸಕರು, ಎಲೆಕ್ಟ್ರಾನಿಕ್ ವಿಭಾಗ, ಸಿಪಿಸಿ ಕಾಲೇಜು

ಮೈಸೂರಿನ ಸೆನ್ಸಾರ್ ಡಿಸೈನ್ ಲ್ಯಾಬ್ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೊದಲನೆಯದಾಗಿದೆ. ಈ ಪ್ರಯೋಗಾಲಯದಲ್ಲಿ ಬಯೋಫೋಟೋನಿಕ್ಸ್ ಮೂಲತತ್ವಗಳು, ಆಪ್ಟಿಕಲ್ ಬಯೋಸೆನ್ಸರ್ಸ್ ಮತ್ತು ಫೋಟೋನಿಕ್ ಸೆನ್ಸಾರ್ ವಿನ್ಯಾಸ, ಫೋಟೋನಿಕ್ ಸಾಧನೋಪಕರಣಗಳು ಮತ್ತು ಪ್ರಯೋಗಾತ್ಮಕ ತಂತ್ರಗಳು, ಬಯೋಮೆಡಿಕಲ್ ಸಿಗ್ನಲ್ ಪ್ರೊಸೆಸಿಂಗ್ ಮತ್ತು ಡೇಟಾ ವಿಶ್ಲೇಷಣೆ, ಬಯೋಸೇಫ್ಟಿ, ವೈದ್ಯಕೀಯ, ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸೆನ್ಸಾರ್ ಉತ್ಪನ್ನಗಳ ಅಭಿವೃದ್ಧಿ, ಸಂಶೋಧನೆ ಹಾಗೂ ಪರೀಕ್ಷೆಗಳು ನಡೆಯಲಿವೆ.

ರಾಜ್ಯ ಸರ್ಕಾರದ ಐಟಿ ಮತ್ತು ಬಿಟಿ ಇಲಾಖೆ ವ್ಯಾಪ್ತಿಯಲ್ಲಿನ ಕರ್ನಾಟಕ ನಾವಿನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಗೆ ಸಿಪಿಸಿ ಪಾಲಿಟೆಕ್ನಿಕ್‌ನ ಆಯ್ಕೆ ಶ್ರೇಣಿ ಉಪನ್ಯಾಸಕ ಬಿ.ರಂಜಿತ್ ಗೌಡ ಅವರು ಸಲ್ಲಿಸಿದ ವೈಜ್ಞಾನಿಕ ಸಂಶೋಧನಾ ವರದಿಯನ್ನು ಪರಿಗಣಿಸಿ, ಪ್ರಯೋಗಾಲಯ ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಸೊಸೈಟಿಗೆ ನಾನಾ ವಿಷಯದಡಿ 2 ಸಾವಿರ ತಾಂತ್ರಿಕ ಕಾಲೇಜುಗಳಿಂದ ಸಂಶೋಧನಾ ವರದಿ ಸಲ್ಲಿಕೆಯಾಗಿದ್ದವು. ಅದರಲ್ಲಿ 20 ಸಂಶೋಧನಾ ವರದಿಗಳು ಮಾತ್ರ ಆಯ್ಕೆಯಾಗಿದ್ದು, ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕೂಡ ಒಂದಾಗಿದೆ.

ಪ್ರಯೋಗಾಲಯದಲ್ಲಿ ಜೈವಿಕ ತಂತ್ರಜ್ಞಾನ, ವೈದ್ಯಕೀಯ, ಎಲೆಕ್ಟ್ರಾನಿಕ್ಸ್, ಸಿವಿಲ್ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆಪ್ಟಿಕಲ್ ಸೆನ್ಸಾರ್ ಉತ್ಪನ್ನಗಳ ತಯಾರಿಕೆ ಸಂಶೋಧನೆಗಳು ನಡೆಯಲಿವೆ. ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ನೆರೆ ಜಿಲ್ಲೆಗಳಲ್ಲಿನ ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳು ಸೆನ್ಸಾರ್ ಉತ್ಪನ್ನಗಳ ಸಂಶೋಧನೆ ನಡೆಸಬಹುದಾಗಿದೆ. ಇದರೊಂದಿಗೆ ಖಾಸಗಿಯಾಗಿ ಯುವ ಉದ್ಯಮಿಗಳು ಮತ್ತು ಕಂಪನಿಗಳು ಸಹ ಸಂಶೋಧನೆ ನಡೆಸುವುದರೊಂದಿಗೆ ತಾವು ಸಿದ್ಧಪಡಿಸುವ ಸೆನ್ಸಾರ್ ಉತ್ಪನ್ನಗಳ ಪರೀಕ್ಷೆ ನಡೆಸಲು ಅವಕಾಶ ಸಿಗಲಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಉಪನ್ಯಾಸಕ ಬಿ.ರಂಜಿತ್ ಗೌಡ, ಇದೇ ಮೊದಲ ಬಾರಿಗೆ ಮೈಸೂರಲ್ಲಿ ನವೀನ ತಂತ್ರಜ್ಞಾನ ಒಳಗೊಂಡ ಲ್ಯಾಬ್ ನಿರ್ಮಾಣಕ್ಕಾಗಿ 1.25 ಕೋಟಿ ಹಣ ಬಿಡುಗಡೆ ಮಾಡಿದ್ದು, ಅದರಲ್ಲಿ ಮೊದಲ ಕಂತು 55 ಲಕ್ಷ 20 ದಿನಗಳ ಹಿಂದೆಯೇ ಬಿಡುಗಡೆಯಾಗಿದೆ. ಕಾಲೇಜು ಆವರಣದಲ್ಲೇ ಲ್ಯಾಬ್ ನಿರ್ಮಿಸುವ ಉದ್ದೇಶ ಹೊಂದಿದ್ದು, ಸೂಕ್ತ ಸ್ಥಳಾವಕಾಶಕ್ಕಾಗಿ ಹುಡುಕಾಟ ನಡೆದಿದೆ. ಕಟ್ಟಡ ಗುರುತಿಸಿದ ಬಳಿಕ ಲ್ಯಾಬ್ ಆರಂಭವಾಗಲಿದೆ.

ಮೊದಲ ಹಂತದಲ್ಲಿ 55 ಲಕ್ಷ 2ನೇ ಹಂತದಲ್ಲಿ 35 ಲಕ್ಷ, 3ನೇ ಹಂತದಲ್ಲಿ 25 ಲಕ್ಷ, ಹಾಗೂ 4 ಮತ್ತು 5ನೇ ಹಂತದಲ್ಲಿ ತಲಾ 5 ಲಕ್ಷ ಹಣ ಬಿಡುಗಡೆಯಾಗಲಿದ್ದು, ಪ್ರಯೋಗಾಲಯಕ್ಕೆ ಅಗತ್ಯವಾದ ಯಂತ್ರೋಪಕರಣಗಳು, ಮೂಲ ಸೌಕರ್ಯಗಳನ್ನು ಕಲ್ಪಿಸಲು ಬಳಕೆಯಾಗಲಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯೂತ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಭೂತ್ ಬಂಗ್ಲಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಲವ್ ಮಾಕ್‌ಟೇಲ್–3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಮಿ. ಎಕ್ಸ್ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಬೆಂಗಳೂರು ಇನ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕೆಂಡದ ಸೆರಗು (ಕ) + ಕ್ಯಾಲೆಂಡರ್ (ಕ)	2+2 ಪ್ರದರ್ಶನಗಳು

ಲೋಹಿತ್ ದೊರೆಸ್ವಾಮಿ ಅವರಿಗೆ ಸನ್ಮಾನ



ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರು ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಲೋಹಿತ್ ದೊರೆಸ್ವಾಮಿ ಅವರನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು. ಈ ಸಂದರ್ಭ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ, ಪಿ.ಎಂ. ಮಹದೇವಸ್ವಾಮಿ, ದೇವಪ್ಪ ಗುರುಬಸಳ್ಳಿ ಹುಂಡಿ, ಪಾಪಣ್ಣ ಮೋಸನಬಾಯನ ಹಳ್ಳಿ, ಸಂತೋಷ್ ಮುಂತಾದವರು ಉಪಸ್ಥಿತರಿದ್ದರು

ಸಿಇಟಿ : ಜೀನ್ಸ್, ಶೂ, ಕುರ್ತ, ಪೈಜಾಮ ನಿಷೇಧ

ಬೆಂಗಳೂರು, ಏ.22(ಕೆಎಂಶಿ)–ಕುರ್ತ, ಪೈಜಾಮ, ಜೀನ್ಸ್ ಪ್ಯಾಂಟ್, ಶೂ ಹಾಕಿಕೊಂಡು ಬರುವ ವಿದ್ಯಾರ್ಥಿಗಳಿಗೆ ವೃತ್ತಿಪರ ಪದವಿ ಕೋರ್ಸ್‌ಗಳ (ಸಿಇಟಿ) ಪ್ರವೇಶ ಪರೀಕ್ಷೆಗೆ ಅವಕಾಶ ಇಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇಂದಿಲ್ಲಿ ಎಚ್ಚರಿಕೆ ನೀಡಿದೆ.

ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಏಪ್ರಿಲ್ 23 ಹಾಗೂ 24ರಂದು ಪರೀಕ್ಷೆ ನಡೆಸುತ್ತಿದೆ.

ಪರೀಕ್ಷಾ ಅಕ್ರಮ ತಡೆಗೆ ಇಂತಹ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅನಾಹುತಗೊಂದಲ ತಪ್ಪಿಸಲು ಇದೇ ಮೊದಲ ಬಾರಿಗೆ ಪ್ರತೀ ಕೇಂದ್ರಕ್ಕೆ ಒಬ್ಬ ವಸ್ತ್ರಸಂಹಿತೆ ಅಧಿಕಾರಿಯನ್ನು ನೇಮಿಸಲಾಗಿದೆ.



ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಅರ್ಧ ತೋಳಿನ ಬಟ್ಟೆ ಧರಿಸಬೇಕು, ಸಾಧ್ಯವಾದಷ್ಟೂ ಕಾಲರ್ ಇಲ್ಲದಿರುವುದನ್ನು ಧರಿಸಿಕೊಂಡು ಬರುವುದು ಉತ್ತಮ.

ಪುರುಷರು ಜೇಬು ಇಲ್ಲದ, ಕಡಿಮೆ ಜೇಬುಗಳಿರುವ ಸರಳ ಪ್ಯಾಂಟ್ ಧರಿಸಬೇಕು, ಅಲ್ಲದೆ, ಮೊಬೈಲ್, ಬ್ಲೂಟೂಥ್, ಇಯರ್ ಫೋನ್, ಮೈಕ್ರೋ ಫೋನ್ ಇತ್ಯಾದಿ ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ಪರೀಕ್ಷಾ ಕೊಠಡಿಗಳಿಗೆ ನಿಷೇಧಿಸಲಾಗಿದೆ.

ವಿದ್ಯಾರ್ಥಿಗಳು ಒಮ್ಮೆ ಕೆಇಎ ಜಾಲತಾಣದಲ್ಲಿ ಇರುವ ವಸ್ತ್ರ ಸಂಹಿತೆ ವಿವರಗಳನ್ನು ಓದಿಕೊಂಡು ಪರೀಕ್ಷೆ ಬರೆಯಬೇಕು.

ಪರೀಕ್ಷೆ ಆರಂಭಕ್ಕೂ ಎರಡು ಗಂಟೆ ಮೊದಲು ತಮಗೆ ನಿಗದಿಪಡಿಸಿದ ಕೇಂದ್ರದಲ್ಲಿ ಹಾಜರಿರುವಂತೆ ಆದೇಶಿಸಲಾಗಿದೆ.

ಈ ಬಾರಿ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಒಟ್ಟು ಅಭ್ಯರ್ಥಿಗಳು 3,30,479, ಈ ಪೈಕಿ ಹುಡುಗರು 1,44,380, ಹುಡುಗಿಯರು 1,86,099, ವಿಶೇಷ ಚೇತನರು 970 ಮಂದಿ ಸೇರಿದ್ದಾರೆ. ಒಟ್ಟು ಪರೀಕ್ಷಾ ಕೇಂದ್ರಗಳು 745 ಇರಲಿದ್ದು, ಉಪಮುಖ್ಯ ಅಧೀಕ್ಷರು 745, ವಸ್ತ್ರ ಸಂಹಿತಾಧಿಕಾರಿ 745, ಪರೀಕ್ಷಾ ಕೇಂದ್ರದ ಸಿಬ್ಬಂದಿ 12,665, ಸಿಸಿಟಿವಿ ಕ್ಯಾಮರಾ 15,265, ಕೊಠಡಿ ಮೇಲ್ವಿಚಾರಕರು 13,770, ಫ್ಲೈಯಿಂಗ್ ದಳ 3,304, ಮುಖ ಚಹರೆ ದಳ 3,304 ಇರಲಿದ್ದಾರೆ.

ಏಪ್ರಿಲ್ 23ರಂದು ಭೌತ ವಿಜ್ಞಾನ ಮತ್ತು ರಾಸಾಯನ ವಿಜ್ಞಾನ ಹಾಗೂ 24ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆ ನಡೆಯಲಿದ್ದು, ಬಿಗಿ ಬಂದೋಬಸ್ತ್ ಮಾಡಲಾಗಿದೆ.

ಪ್ರತ್ಯೇಕ ಪ್ರಕರಣಗಳಲ್ಲಿ

ಕೆಆರ್‌ಎಸ್, ಕಬಿನಿ ಹಿನ್ನೀರಲ್ಲಿ ಇಬ್ಬರು ಜಲಸಮಾಧಿ

ಮೈಸೂರು/ಹೆಚ್.ಡಿ.ಕೋಟೆ, ಏ.22(ಬಿಎಲ್‌ಯು)– ಪ್ರತ್ಯೇಕ ಪ್ರಕರಣಗಳಲ್ಲಿ ಕೆಆರ್‌ಎಸ್ ಹಾಗೂ ಕಬಿನಿ ಹಿನ್ನೀರಲ್ಲಿ ಮುಳುಗಿ ಇಬ್ಬರು ಸಾವನ್ನಪ್ಪಿದ್ದಾರೆ.



ಸುಪ್ರೀತ್

ಮೈಸೂರು ತಾಲೂಕು ಮಾಧವಗೆರೆ ಗ್ರಾಮದ ನಿವಾಸಿ ಲಿಂಗರಾಜು(26), ಹೆಚ್.ಡಿ.ಕೋಟೆ ತಾಲೂಕು ಅಂಕನಾಥಪುರ ಗ್ರಾಮದ ನಿವಾಸಿ, ಡಿ.ಬಿ.ಕುಪ್ಪೆ ಅರಣ್ಯ ವ್ಯಾಪ್ತಿಯ ಅರಣ್ಯ ರಕ್ಷಕ ಸುಪ್ರೀತ್ ಸಾವನ್ನಪ್ಪಿದವರು.

ಮೈಸೂರು: ಮಾಧವಗೆರೆ ಗ್ರಾಮದ ಲಿಂಗರಾಜು ಭಾನುವಾರ ಮಧ್ಯಾಹ್ನ ಚಿಕ್ಕರಹಳ್ಳಿ ಬಳಿ ಕೆಆರ್‌ಎಸ್ ಹಿನ್ನೀರಿನಲ್ಲಿ ಈಜಲು ಹೋದ ವೇಳೆ ಮುಳುಗಿ ಸಾವನ್ನಪ್ಪಿದ್ದಾರೆ. ಸಂಜೆ ವೇಳೆಗೆ ಶವ ನೀರಿನಲ್ಲಿ ತೇಲುತ್ತಿರುವುದನ್ನು ಗಮನಿಸಿದ ಗ್ರಾಮಸ್ಥರು ಪೊಲೀಸರಿಗೆ ವಿಚಾರ ಮುಟ್ಟಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಕೆಆರ್‌ಎಸ್ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಹೊರ ತಂದು, ಮೈಸೂರಿನ ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್.ಡಿ.ಕೋಟೆ: ಅಂಕನಾಥಪುರ ಗ್ರಾಮದ ನಿವಾಸಿ, ಡಿ.ಬಿ.ಕುಪ್ಪೆ ಅರಣ್ಯ ವ್ಯಾಪ್ತಿಯ ಅರಣ್ಯ ರಕ್ಷಕ ಸುಪ್ರೀತ್, ಬುಧವಾರ ಬೆಳಗ್ಗೆ ಉದ್ಬೂರು ಗೇಟ್ ಕಳ್ಳಬೇಟೆ ತಡೆ ಶಿಬಿರ ಬಳಿಯ ಕಬಿನಿ ಹಿನ್ನೀರಿನಲ್ಲಿ ಈಜಲು ತಮ್ಮ ಇನ್ನಿಬ್ಬರು ಸಹೋದ್ಯೋಗಿಗಳಾದ ಅಮನ್, ಅಯ್ಯಪ್ಪ ಅವರೊಂದಿಗೆ ತೆರಳಿದ್ದರು. ಈಜುತ್ತಿದ್ದ ವೇಳೆ ಆಯಾಸಗೊಂಡಿದ್ದ ಸುಪ್ರೀತ್ ತನ್ನ ಸಹೋದ್ಯೋಗಿಗಳಿಗೆ ತಾನು ದಡಕ್ಕೆ ತೆರಳುವುದಾಗಿ ತಿಳಿಸಿ, ನದಿಯಿಂದ ಹೊರಬರುತ್ತಿದ್ದ ವೇಳೆ ತೀರಾ ಆಯಾಸಗೊಂಡು ನೀರಿನಲ್ಲಿ ಮುಳುಗಿದ್ದಾರೆ ಎನ್ನಲಾಗಿದೆ. ಇದೇ ವೇಳೆ ಸ್ಥಳದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಅಂತರಸಂತೆ ಠಾಣೆ ಪೊಲೀಸರು ಬೀಡು ಬಿಟ್ಟಿದ್ದಾರೆ.

ಇದನ್ನು ಗಮನಿಸಿದ ಸಹೋದ್ಯೋಗಿಗಳಾದ ಅಮನ್, ಅಯ್ಯಪ್ಪ ತಕ್ಷಣ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳ ಸಿಬ್ಬಂದಿ ಕಬಿನಿ ಹಿನ್ನೀರಿಗೆ ಇಳಿದು ಸುಪ್ರೀತ್‌ಗಾಗಿ ಶೋಧ ಕಾರ್ಯ ನಡೆಸಿದರಾದರೂ ಇದುವರೆಗೂ ಅವರ ಶವ ಪತ್ತೆಯಾಗಿಲ್ಲ. ಆದರೂ ಕಾರ್ಯಾಚರಣೆಯನ್ನು ಮುಂದುವರೆಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಜಿ.ಸೋಮಣ್ಣ, ಸಿಬ್ಬಂದಿಗಳಾದ ಪ್ರಮುಖ ಅಗ್ನಿಶಾಮಕ ಅಶೋಕ, ಅಗ್ನಿಶಾಮಕರಾದ ಪುಂಡಲೀಕ ಲಮಾಣಿ, ಮುನಿಸಿದ್ಧ ನಾಯಕ, ರಾಹುಲ್ ಪಾಟೀಲ್, ಚಾಲಕ ಹೇಮಂತ್ ಕುಮಾರ್ ಇನ್ನಿತರರಿದ್ದರು. ಈ ಸಂಬಂಧ ತಾಲೂಕಿನ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಸ್ಪೃಶ್ಯತೆ ನಿವಾರಣೆಗೆ ಅಂತರ್ಜಾತಿ ವಿವಾಹ ಪ್ರಮುಖ ಹೆಜ್ಜೆ

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಪ್ರತಿಪಾದನೆ

ಮೈಸೂರು,ಏ.22– ಅಂತರ್ಜಾತಿ ವಿವಾಹವು ಅಸ್ಪೃಶ್ಯತೆ ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ತಿಳಿಸಿದರು.

ಮೈಸೂರು ವಿವಿ ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ, ಅಧ್ಯಯನ ಹಾಗೂ ವಿಸ್ತರಣೆ ಕೇಂದ್ರದ ವತಿಯಿಂದ ಬುಧವಾರ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂತರ್ಜಾತಿ ವಿವಾಹವು ಭಾರತದಲ್ಲಿ ಸಾಮಾಜಿಕ ಬದಲಾವಣೆಯ ಒಂದು ಮುಖ್ಯ ಸಂಕೇತವಾಗಿದೆ. ಇದು ಜಾತಿ–ಭೇದವನ್ನು ಕಡಿಮೆ ಮಾಡುವುದಲ್ಲದೇ ಅಸ್ಪೃಶ್ಯತೆ ಹೋಗಲಾಡಿಸುವಲ್ಲಿ ಸಹಾಯಕವಾಗಿದೆ. ಆದರೆ ಅಂತರ್ಜಾತಿ ವಿವಾಹ ದೊಡ್ಡ ಮಟ್ಟದಲ್ಲಿ ಆಚರಣೆಗೆ ಬರುವಲ್ಲಿ ಇನ್ನೂ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ ಎಂದರು.

ನಗರ ಪ್ರದೇಶಗಳಲ್ಲಿ ಅಂತರ್ಜಾತಿ ವಿವಾಹಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಜಾತಿ ಆಧಾರಿತ ವಿರೋಧ, ಕುಟುಂಬದ ಒತ್ತಡ ಮತ್ತು ಸಾಮಾಜಿಕ ಬಹಿಷ್ಕಾರದ ಸಮಸ್ಯೆಗಳು ಕಾಣುತ್ತವೆ. ಕೆಲವು ಸಂದರ್ಭಗಳಲ್ಲಿ ಮರ್ಯಾದೆ ಹತ್ಯೆಯಂತಹ ಪ್ರಕರಣಗಳು ನಡೆಯುತ್ತಿವೆ ಎಂದು ವಿಷಾದಿಸಿದರು.



ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಪ್ರಸ್ತುತ ದೇಶವು ಸುಭೀಕ್ಷೆಯಿಂದಿರಲು ಬಸವಣ್ಣ ಅವರು ನೀಡಿದ ಕೊಡುಗೆಗಳೇ ಕಾರಣವಾಗಿವೆ. ಸರ್ವರನ್ನೂ ಸಮಾನರನ್ನಾಗಿ ಕಾಣುವ ಎಲ್ಲರನ್ನೂ ಒಳಗೊಂಡು ಸಮಾಜದ ಹಿತಕ್ಕಾಗಿ ಬದುಕುವ ಅವರ ಸಂದೇಶ ಹಲವು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವಾಗಿ ನಿಲ್ಲಲಿದೆ ಎಂದರು.

ಬಸವಣ್ಣನವರು ಪ್ರತಿಯೊಬ್ಬರೂ ದುಡಿಮೆಯಲ್ಲಿ ಪಾಲ್ಗೊಳ್ಳಬೇಕು. ಅದರಲ್ಲಿ ಬರುವ ಹಣವನ್ನು ಸಮಾನವಾಗಿ ಹಂಚಿಕೊಂಡು ಎಲ್ಲರೂ ಒಟ್ಟಾಗಿ ಬದುಕಬೇಕು ಎಂದು ತಿಳಿಸಿದ್ದಾರೆ. ಇದರಿಂದ ಸಮಾಜದಲ್ಲಿ ಒಳ್ಳೆಯ ಬದಲಾವಣೆ ನಿರೀಕ್ಷಿಸಲು ಸಾಧ್ಯವಿದೆ ಹಾಗಾಗಿ ಕಾಯಕವೇ ಕೈಲಾಸ ತತ್ತ್ವವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕೆಂದರು.

ಬಳಿಕ ಸಂಪನ್ಮೂಲ ವ್ಯಕ್ತಿಗಳಿಂದ ವಚನಗಳಲ್ಲಿ ಮಾನವೀಯ ಮೌಲ್ಯಗಳು, ಶರಣ ಮೇದರ ಕೇತಯ್ಯನವರ ವಚನಗಳು; ಜಾನಪದೀಯ ಅಧ್ಯಯನ ಕುರಿತು ತಾತ್ವಿಕ ಚಿಂತನ ಗೋಷ್ಠಿ ನಡೆಯಿತು. ಮಧ್ಯಾಹ್ನದ ಬಳಿಕ ವಚನ ಸಾಹಿತ್ಯದಲ್ಲಿ ಕಾಯಕ, ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಬಸವಣ್ಣನವರ ಚಿಂತನೆಗಳು, ಬಸವಣ್ಣನವರ ವಚನ ಸಾಹಿತ್ಯದ ವೈಶಿಷ್ಟ್ಯಗಳು ಕುರಿತು ಗೋಷ್ಠಿಗಳು ನಡೆದವು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ, ಬಸವೇಶ್ವರ ಸಾಪಸಂಅವಿ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೆ. ಕೇಶವನ್ ಪ್ರಸಾದ್ ಹಾಗೂ ಇತರರಿದ್ದರು.

ಹಿಂದಿಗೆ ಗ್ರೇಡ್ ನೀಡುವ ವಿಚಾರ: ವಿದ್ಯಾರ್ಥಿಗಳಲ್ಲಿ ಗೊಂದಲ

ಎಐಎಸ್‌ಡಿಎಸ್‌ಓ ಜಿಲ್ಲಾ ಸಮಿತಿ ಟೀಕೆ

ಮೈಸೂರು, ಏ.22(ಎಸ್‌ಪಿಎನ್)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ವಿಚಾರವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಆತುರಾತುರವಾಗಿ ಅಂಕದ ಬದಲು ಗ್ರೇಡ್ ನೀಡಲಾಗುವುದು ಎಂದು ನಿರ್ಧಾರ ಪ್ರಕಟಿಸಿ, ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸಿದೆ ಎಂದು ಎಐಡಿಎಸ್‌ಓ ಜಿಲ್ಲಾ ಸಮಿತಿ ಟೀಕಿಸಿದೆ

ಹಿಂದಿ ವಿಷಯಕ್ಕೆ ಅಂಕದ ಬದಲು ಗ್ರೇಡ್ ನೀಡಲಾಗುವುದು ಎಂದು ರಾಜ್ಯ ಸರ್ಕಾರ ರಾಜಕೀಯ ಪ್ರಚಾರ ಪಡೆಯಲು ಯತ್ನಿಸಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುವ ಸಂದರ್ಭದಲ್ಲಿ ತೃತೀಯ ಭಾಷೆಗೆ ಏಕಾಏಕಿ ಅಂಕದ ಬದಲು ಗ್ರೇಡ್ ನೀಡುತ್ತೇವೆ ಎಂದು ಸರ್ಕಾರ ಘೋಷಿಸಿದ ತಕ್ಷಣ, ಲಕ್ಷಾಂತರ ಮಕ್ಕಳು ಪರೀಕ್ಷೆಯಲ್ಲಿ ಮಹತ್ವ ಇಲ್ಲ ಎಂದು ಭಾವಿಸಿ ಹಿಂದಿ ವಿಷಯವನ್ನು ಲಘುವಾಗಿ ಪರಿಗಣಿಸುತ್ತಾರೆ ಎಂದು ಎಐಡಿಎಸ್‌ಓ ಜಿಲ್ಲಾ ಸಮಿತಿ ಕಾರ್ಯದರ್ಶಿ ನಿತಿನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮುಂದುವರೆದು, ರಾಜ್ಯ ಸರ್ಕಾರಕ್ಕೆ ವಿದ್ಯಾರ್ಥಿಗಳ ಜೀವ ಹಾಗೂ ಭವಿಷ್ಯದ ಕುರಿತು ಕಿಂಚಿತ್ತು ಕಾಳಜಿ ಇಲ್ಲದ ಮೇಲೆ ಇಂತಹ ನಿರ್ಧಾರ ಪ್ರಕಟಿಸಲಾಗಿದೆಯೇ?. ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಯಾವುದೇ ಪ್ರಜಾತಾಂತ್ರಿಕ ಪ್ರಕ್ರಿಯೆ ಅನುಸರಿಸದೇ ತೃತೀಯ ಭಾಷೆಗೆ ಅಂಕದ ಬದಲು ಗ್ರೇಡ್ ನೀಡುತ್ತೇವೆ ಎಂದು ಏಕಾಏಕಿ ಘೋಷಿಸಿದ ಕಾರಣ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ಗುಮ್ಮ ಆವರಿಸಿದಂತಾಗಿದೆ ಎಂದು ರಾಜ್ಯ ಸರ್ಕಾರದ ನಡೆಯನ್ನು ಕಟುವಾಗಿ ಟೀಕಿಸಿದ್ದಾರೆ.

ಎಲ್ಲಾ ತಜ್ಞರ ಬೇಡಿಕೆಯಂತೆ ದ್ವಿಭಾಷಾ ನೀತಿಯನ್ನು ಅನುಷ್ಠಾನಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದ್ದಲ್ಲಿ ಅನುಷ್ಠಾನಗೊಳಿಸುವ ದಾರಿ ಇದಲ್ಲ. ಮಕ್ಕಳನ್ನು ಅತಂತ್ರಕ್ಕೆ ದೂಡಿ, ಯಾವ ತಜ್ಞರ ಜೊತೆಯೂ ಚರ್ಚಿಸದೇ ಇಂತಹ ಮೂಲಭೂತ ಬದಲಾವಣೆಗಳನ್ನು ಫಲಿತಾಂಶ ಬರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲ. ದ್ವಿಭಾಷಾ ನೀತಿಯ ಉನ್ನತ ಆಶಯಕ್ಕೂ ಬೆಲೆ ಇರುವುದಿಲ್ಲ ಎಂದು ಆರೋಪಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಹೊಸ ನೀತಿ ಪ್ರಕಟಿಸುವ ಮೊದಲು ಎಲ್ಲಾ ವಿಷಯ ತಜ್ಞರೊಂದಿಗೆ ಚರ್ಚಿಸಿ, ತದನಂತರ ರಾಜ್ಯ ಸರ್ಕಾರ ತನ್ನ ನಿರ್ಧಾರ ಪ್ರಕಟಿಸಲಿ ಹಾಗೂ ಹಿಂದಿ ವಿಷಯಕ್ಕೆ ಅಂಕ ನೀಡುವ ವಿಚಾರದ ಗೊಂದಲದ ವಾತಾವರಣಕ್ಕೆ ತೆರೆ ಎಳೆಯಬೇಕು. ರಾಜ್ಯ ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅಡಗಿದೆ ಎಂದು ತಿಳಿಸಿದ್ದಾರೆ.

ಭಾರತಕ್ಕೆ ಬರುತ್ತಿದ್ದ ಹಡಗು ಸೇರಿ ಮೂರು ಹಡಗುಗಳನ್ನು ವಶಕ್ಕೆ ಪಡೆದ ಇರಾನ್!

ನವದೆಹಲಿ, ಏ.22– ಭಾರತಕ್ಕೆ ಬರುತ್ತಿದ್ದ ಹಡಗಿನ ವಿರುದ್ಧ ಇರಾನ್ ಮತ್ತೊಮ್ಮೆ ಕ್ರಮಕ್ಕೈಗೊಂಡಿದೆ. ಇರಾನಿನ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್ ಹಾರ್ಮುಜ್ ಜಲಸಂಧಿಯ ಮೂಲಕ ಭಾರತಕ್ಕೆ ಬರುತ್ತಿದ್ದ ಹಡಗಿನ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡಿದೆ. ಇರಾನಿನ ಮಿಲಿಟರಿ ಒಟ್ಟು ಮೂರು ಹಡಗುಗಳನ್ನು ವಶಪಡಿಸಿಕೊಂಡಿದೆ. ಹಾರ್ಮುಜ್ ಜಲಸಂಧಿಯನ್ನು ದಾಟಲು ಪ್ರಯತ್ನಿಸುತ್ತಿದೆ ಎಂದು ಎರಡು ಹಡಗುಗಳ ಮೇಲೆ ಇರಾನ್‌ನ ಐಆರ್‌ಜಿಸಿ ದಾಳಿ ನಡೆಸಿ ವಶಪಡಿಸಿಕೊಂಡಿದ್ದು ಅವುಗಳನ್ನು ಇರಾನ್ ಜಲಗಡಿಯೊಳಕ್ಕೆ ಕರೆದೊಯ್ಯಲಾಗಿದೆ ಎಂದು ಇರಾನ್ ರಾಜ್ಯ ಮಾಧ್ಯಮ ವರದಿ ಮಾಡಿದೆ.

ಇಸ್ಲಾಮಿಕ್ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್‌ನ ನೌಕಾಪಡೆಯು ಇಂದು ಬೆಳಿಗ್ಗೆ ಹಾರ್ಮುಜ್ ಜಲಸಂಧಿಯಲ್ಲಿ ಮೂರು ಉಲ್ಲಂಘನೆ ಹಡಗುಗಳನ್ನು ಗುರುತಿಸಿ ತಡೆಹಿಡಿದಿದೆ ಎಂದು ಗಾರ್ಡ್‌ಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬ್ರಿಟಿಷ್ ಮಿಲಿಟರಿಯ ಯುಕೆ ಸಾಗರ ವ್ಯಾಪಾರ ಕಾರ್ಯಾಚರಣೆ ಕೇಂದ್ರ ಪ್ರಕಾರ, ಇರಾನ್ ಬುಧವಾರ ಬೆಳಿಗ್ಗೆ ಹಾರ್ಮುಜ್ ಜಲಸಂಧಿಯಲ್ಲಿ ಮೊದಲು ಕಂಟೇನರ್ ಹಡಗಿನ ಮೇಲೆ ಗುಂಡು ಹಾರಿಸಿತು. ನಂತರ ಸ್ವಲ್ಪ ಸಮಯದ ನಂತರ ಎರಡನೇ ಹಡಗಿನ ಮೇಲೂ ಗುಂಡು ಹಾರಿಸಿತು. ಇರಾನಿನ ರಾಜ್ಯ ದೂರದರ್ಶನ ನಂತರ ಈ ಹಡಗುಗಳನ್ನು ಐಆರ್‌ಜಿಸಿ ಕಣ್ಗಾವಲಿನಲ್ಲಿ ಇರಾನ್‌ಗೆ ಕರೆದೊಯ್ಯಲಾಗುತ್ತಿದೆ ಎಂದು ಹೇಳಿದೆ. ಇವುಗಳನ್ನು ಎಂಎಸ್ಸಿ ಫ್ರಾನ್ಸೆಸ್ಕಾ ಮತ್ತು ಎಪಾಮಿನೊಂಡಾಸ್ ಎಂದು ಗುರುತಿಸಲಾಗಿದೆ. ತರುವಾಯ ಐಆರ್‌ಜಿಸಿ 3ನೇ ಹಡಗಾದ ಯುಫೋರಿಯಾ ಮೇಲೆ ದಾಳಿ ಮಾಡಿದೆ ಎಂದು ವರದಿ ಮಾಡಿದೆ. ಹಡಗು ಇರಾನಿನ ಕರಾವಳಿಯಲ್ಲಿ ಸಿಲುಕಿಕೊಂಡಿದೆ ಎಂದು ವರದಿಗಳು ಸೂಚಿಸುತ್ತವೆ. ಆದಾಗ್ಯೂ ಹೆಚ್ಚಿನ ವಿವರಗಳು ಬಹಿರಂಗಗೊಂಡಿಲ್ಲ.

ಮೊದಲ ಹಡಗಿನ ಮೇಲೆ ಐಆರ್‌ಜಿಸಿ ಗನ್‌ಬೋಟ್‌ನಿಂದ ದಾಳಿ ನಡೆಸಿತ್ತು. ಗುಂಡು ಹಾರಿಸುವ ಮೊದಲು ಐಆರ್‌ಜಿಸಿ ಯಾವುದೇ ಎಚ್ಚರಿಕೆ ನೀಡಲಿಲ್ಲ. ಏಜೆನ್ಸಿಯ ಪ್ರಕಾರ, ಯಾವುದೇ ಸಾವುನೋವುಗಳು ಸಂಭವಿಸಿಲ್ಲ. ಏತನ್ಮಧ್ಯೆ, ಹಡಗು ಇರಾನಿನ ಸಶಸ್ತ್ರ ಪಡೆಗಳ ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ ನಂತರ ಗುಂಡು ಹಾರಿಸಲಾಗಿದೆ ಎಂದು ಇರಾನಿನ ಸುದ್ದಿ ಸಂಸ್ಥೆ ನೂರ್ ನ್ಯೂಸ್ ಹೇಳಿಕೊಂಡಿದೆ. ಫಾರ್ಸ್ ನ್ಯೂಸ್ ಏಜೆನ್ಸಿ ಇದನ್ನು ಹಾರ್ಮುಜ್ ಜಲಸಂಧಿಯ ಮೇಲೆ ತನ್ನ ನಿಯಂತ್ರಣವನ್ನು ಕಾನೂನುಬದ್ಧವಾಗಿ ಜಾರಿಗೊಳಿಸಲು ಇರಾನ್‌ನ ಪ್ರಯತ್ನ ಎಂದು ಬಣ್ಣಿಸಿದೆ. ವರದಿಯ ಪ್ರಕಾರ, ಫೆ.28ರಂದು ಯುಎಸ್ ಮತ್ತು ಇಸ್ರೇಲಿ ವೈಮಾನಿಕ ದಾಳಿಯ ನಂತರ ಮಧ್ಯಪ್ರಾಚ್ಯದಲ್ಲಿ 30ಕ್ಕೂ ಹೆಚ್ಚು ಹಡಗುಗಳ ಮೇಲೆ ದಾಳಿ ಮಾಡಲಾಗಿದೆ.

ಹಿಂದು ಭಾವನೆಗಳಿಗೆ ಧಕ್ಕೆ ಆರೋಪ; ಕನ್ನಡಕ ಕಂಪನಿ ವಿರುದ್ಧ ಪ್ರತಿಭಟನೆ

ಮೈಸೂರಿನಲ್ಲಿರುವ ಕಂಪನಿಯ ಎರಡು ಮಳಿಗೆ ಎದುರು ಹಿಂದು ಜಾಗರಣ ವೇದಿಕೆ ಹೋರಾಟ



ಮೈಸೂರಿನ ಕಾಳಿದಾಸ ರಸ್ತೆಯ ಲೆನ್ಸ್‌ಕಾರ್ಟ್ ಕನ್ನಡಕ ಮಳಿಗೆ ಎದುರು ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.22(ಪಿಎಂ)– ಲೆನ್ಸ್‌ಕಾರ್ಟ್ ಕನ್ನಡಕ ಕಂಪನಿಯ ಮಳಿಗೆಗಳಲ್ಲಿ ಕೆಲಸ ಮಾಡುವ ನೌಕರರು ಹಣೆಗೆ ಕುಂಕುಮ ಹಚ್ಚಿಕೊಳ್ಳದಂತೆ, ಮಹಿಳಾ ನೌಕರರು ಬಳೆ ತೊಡದಂತೆ ನಿರ್ಬಂಧಿಸುವ ಮೂಲಕ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲಾಗುತ್ತಿದೆ ಎಂದು ಆರೋಪಿಸಿ ಹಿಂದೂ ಜಾಗರಣ ವೇದಿಕೆ ಮೈಸೂರು ಮಹಾನಗರ ಘಟಕದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಸದರಿ ಕಂಪನಿಯ ಮಳಿಗೆ ಎದುರು ಪ್ರತಿಭಟನೆ ನಡೆಸಿದ ಸಂಘಟನೆ ಕಾರ್ಯಕರ್ತರು, ಬಳಿಕ ಮಳಿಗೆ ಒಳಪ್ರವೇಶಿಸಿ ಅಲ್ಲಿನ ಸಿಬ್ಬಂದಿಗೆ ಕುಂಕುಮ ಹಚ್ಚಿ, ಕೈಗೆ ಕೇಸರಿ ದಾರ ಕಟ್ಟಿದರಲ್ಲದೆ, ಹಿಂದು ಭಾವನೆಗಳಿಗೆ ಧಕ್ಕೆ ಉಂಟಾಗುವಂತಹ ಯಾವುದೇ ಬೆಳವಣಿಗೆ ನಡೆದರೂ ತಮಗೆ ಮಾಹಿತಿ ನೀಡುವಂತೆ ಕೋರಿದರು. ಬಳಿಕ ಕಾಳಿದಾಸ ರಸ್ತೆಯಲ್ಲಿರುವ ಇದೇ ಕಂಪನಿಯ ಮಳಿಗೆ ಮುಂದೆ ಸಹ ಪ್ರತಿಭಟನೆ ನಡೆಸಿ, ನಂತರ ಒಳಪ್ರವೇಶಿಸಿ ಸಿಬ್ಬಂದಿಗೆ ಕುಂಕುಮ ಹಚ್ಚಿ, ದಾರ ಕಟ್ಟಿದರು.

ಈ ವೇಳೆ ಅಲ್ಲಿನ ನೌಕರರು, ಇಲ್ಲಿ ಆ ರೀತಿಯ ಯಾವುದೇ ನಿರ್ಬಂಧ ವಿಧಿಸಿಲ್ಲ ಎಂದು ಪ್ರತಿಭಟನಾಕಾರರಿಗೆ ತಿಳಿಸಿದರು. ಅದಕ್ಕೆ ಪ್ರತಿಭಟನಾಕಾರರು, ಮೈಸೂರಿನಲ್ಲಿ ಆಗದೇ ಇರಬಹುದು. ಆದರೆ ನಿಮ್ಮ ಕಂಪನಿಯ ಬೇರೆಡೆ ಆಗಿದೆ. ಇಲ್ಲಿಯೂ ಅಂತಹ ನಿರ್ಬಂಧ ವಿಧಿಸಿದ್ದಲ್ಲಿ ವಿರೋಧಿಸಬೇಕು. ಜೊತೆಗೆ ನಮಗೆ ಮಾಹಿತಿ ನೀಡಿ ಎಂದು ಮನವಿ ಮಾಡಿದರು.

ಪ್ರತಿಭಟನೆ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ವೇದಿಕೆಯ ಮೈಸೂರು ಮಹಾನಗರ ಘಟಕದ ವಸಂತ್ ಕುಮಾರ್, ಲೆನ್ಸ್‌ಕಾರ್ಟ್ ಕಂಪನಿಯವರು ತಮ್ಮ ಮಳಿಗೆಯ ನೌಕರರಿಗೆ ಬಿಂದಿ ಹಚ್ಚಿಕೊಳ್ಳದಂತೆ, ಮೂಗುತಿ ಧರಿಸದಂತೆ, ಬಳೆ ತೊಡದಂತೆ ನಿರ್ಬಂಧ ವಿಧಿಸಿದ್ದಾರೆ. ಆ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲಾಗುತ್ತಿದೆ. ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರು. ಅದಾಗ್ಯೂ ಹಿಂದುಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲೆನ್ಸ್‌ಕಾರ್ಟ್ ಕಂಪನಿ ಉತ್ಪನ್ನಗಳನ್ನು ಪ್ರತಿಯೊಬ್ಬ ಭಾರತೀಯ ಸನಾತನ ಹಿಂದು ಧರ್ಮೀಯರು ತಿರಸ್ಕಾರ ಮಾಡಬೇಕು. ಸನಾತನ ಹಿಂದು ಧರ್ಮದ ವಿರುದ್ಧ ಹೇಳಿಕೆ ನೀಡುವವರು ಭಾರತದಲ್ಲಿ ಇರಲು ಅನರ್ಹರು. ಇವರು ಗ್ರಾಹಕರು ಕುಂಕುಮ ಹಾಗೂ ಬಳೆ ಹಾಕಿಕೊಂಡು ಬಂದರೆ ಅವರ ಬಳಿ ವ್ಯಾಪಾರ ಮಾಡುತ್ತಾರೆ. ಅಲ್ಲಿ ಕೆಲಸ ಮಾಡುವವರಿಗೆ ಮಾತ್ರ ಧಾರ್ಮಿಕ ಸ್ವಾತಂತ್ರ್ಯ ಇಲ್ಲ. ಅನ್ಯ ಧರ್ಮೀಯರಿಗೆ ಇರದ ನಿರ್ಬಂಧ ಹಿಂದೂಗಳಿಗೆ ಮಾತ್ರ ಏಕೆ. ಇವರು ಮುಂದಿನ ದಿನಗಳಲ್ಲಿ ಎಲ್ಲವನ್ನು ಸರಿಪಡಿಸಿಕೊಳ್ಳಬೇಕು. ಇಲ್ಲವಾದರೆ ಇಡೀ ದೇಶದಾದ್ಯಂತ ವೇದಿಕೆಯಿಂದ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ವೇದಿಕೆಯ ಕಾರ್ಯಕಾರಿ ಸಮಿತಿ ಸದಸ್ಯ ಸಂದೇಶ್, ವಿದ್ಯಾರ್ಥಿ ಪ್ರಮುಖ್ ಶ್ರೀನಿಧಿ, ಆರ್‌ಜೆ ಅವಿನಾಶ್, ಸರ್ವಜನ ಹಿತ ರಕ್ಷಣಾ ಮಹಿಳಾ ವೇದಿಕೆ ರಾಜ್ಯಾಧ್ಯಕ್ಷೆ ಯಶೋಧಾ ನಾರಾಯಣ್, ಪ್ರಧಾನ ಕಾರ್ಯದರ್ಶಿ ಯಶೋಧಾ ರಾಜ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ರಾಜಸ್ಥಾನ್ ವಿರುದ್ಧ ಲಕ್ನೋಗೆ ಹೀನಾಯ ಸೋಲು

ಲಕ್ನೋ, ಏ.22(ವಿವಿಹೆಚ್)– ರಾಜಸ್ಥಾನ್ ಬೌಲರ್‌ಗಳ ಸಾಂಘಿಕ ದಾಳಿಗೆ ಕುಸಿದ ಆತಿಥೇಯ ಲಕ್ನೋಸೂಪರ್ ಜೈಂಟ್ಸ್ 40 ರನ್ ಅಂತರದ ಭಾರೀ ಸೋಲು ಕಂಡಿತು.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ರಾಜಸ್ಥಾನ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಲಕ್ನೋ 18 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 119 ರನ್ ಗಳಿಸಿ, ಸೋಲೊಪ್ಪಿಕೊಂಡಿತು.



ಲಕ್ನೋ ಬ್ಯಾಟರ್ ಐಡೆನ್ ಮಾರ್ಕ್ರಂ ವಿಕೆಟ್ ಕಿತ್ತ ಜೋಫ್ರಾ ಆರ್ಚರ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು.

ರಾಜಸ್ಥಾನದ ಆರಂಭಿಕರಾದ ವೈಭವ್ ಸೂರ್ಯವಂಶಿ (8) ಹಾಗೂ ಯಶಸ್ವಿ ಜೈಸ್ವಾಲ್(22) ಬ್ಯಾಟಿಂಗ್ ವೈಫಲ್ಯವನ್ನು ಕಂಡರು. ವಿಕೆಟ್ ಕೀಪರ್ ಧ್ರುವ್ ಜುರೇಲ್ ಸೊನ್ನೆ ಸುತ್ತಿದರು. ನಾಯಕ ರಿಯಾನ್ ಪರಾಗ್ (20) ಹಾಗೂ ಶಿಮ್ರಾನ್ ಹೆಡ್ಮೆಯರ್ (22) ಹೇಳಿಕೊಳ್ಳುವ ಇನ್ನಿಂಗ್ಸ್ ಆಡಲಿಲ್ಲ. ಕೆಳ ಕ್ರಮಾಂಕದಲ್ಲಿ ಉಪಯುಕ್ತ ಆಟವಾಡಿದ ರವೀಂದ್ರ ಜಡೇಜಾ 29 ಎಸೆತಗಳನ್ನು ಎದುರಿಸಿ ಎರಡು ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ ಅಜೇಯ 43 ರನ್ ಕಲೆಹಾಕಿದರು. ಉಳಿದಂತೆ ಡೊನೊವನ್ ಫೆರೇರಾ (20) ಹಾಗೂ ಶುಭಂ ದುಬೆ ಅಜೇಯ (19) ರನ್ ಗಳಿಸಿದರು.

ಲಕ್ನೋ ಪರ ಮೊಹಮ್ಮದ್ ಶಮಿ, ಪ್ರಿನ್ಸ್ ಯಾದವ್ ಹಾಗೂ ಮೊಹಸಿನ್ ಖಾನ್ ತಲಾ 2 ವಿಕೆಟ್ ಗಳಿಸಿದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಲಕ್ನೋಗೆ ಆರಂಭಿಕ ಆಘಾತ ಎದುರಾಯಿತು. ಆಯೋಷ್ ಬದೋನಿ ಇಲ್ಲದ ರನ್ ಕದಿಯಲು ಹೋಗಿ ರನ್‌ಔಟ್ ಆದರೆ, ನಾಯಕ ರಿಷಭ್ ಪಂತ್ ಮೂರು ಎಸೆತ ಎದುರಿಸಿ ಶೂನ್ಯ ಸುತ್ತಿ ಹೊರನಡೆದರು. ಬಳಿಕ ಬಂದ ಐಡೆನ್ ಮಾರ್ಕ್ರಂ 6 ಎಸೆತಗಳಲ್ಲಿ ಯಾವುದೇ ರನ್ ಗಳಿಸದೇ ನಿರ್ಗಮಿಸಿದರು. ಪ್ರಮುಖ 3 ಆಟಗಾರರು ಶೂನ್ಯ ಸಂಪಾದಿಸಿದ್ದರಿಂದ ಭಾಗಶಃ ಪಂದ್ಯ ರಾಜಸ್ತಾನದ ಪಾಲಾಯಿತು.

ಈ ವೇಳೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ಮಿಚೆಲ್ ಮಾರ್ಷ್ 41 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 55 ರನ್ ಕಲೆಹಾಕಿ ವಿಕೆಟ್ ಒಪ್ಪಿಸಿದರು. ಇವರಿಗೆ ಸಾಥ್ ನೀಡಿದ್ದ ನಿಕೋಲಸ್ ಪೂರನ್ ಸಹಾ 22(25) ರನ್‌ಗಳಿಗೆ ಆಟ ಮುಗಿಸಿದರು. ಈ ಜೋಡಿ ಬಳಿಕ ಮೇಲುಗೈ ಸಾಧಿಸಿದ ರಾಜಸ್ತಾನ್ ಪಂದ್ಯವನ್ನು ಗೆದ್ದುಕೊಂಡಿತು.

ಲಕ್ನೋ ಪರ ಉಳಿದಂತೆ ಮುಕುಲ್ ಚೌಧರಿ 7, ಮೊಹಮ್ಮದ್ ಶಮಿ 6, ಮಯಾಂಕ್ ಯಾದವ್ 5, ಮೋಹ್ಸಿನ್ ಖಾನ್ ಡಕ್ ಔಟ್ ಆದರೆ, ದಿಗ್ವೇಶ್ ರಾಠಿ ಅಜೇಯ 2 ರನ್ ಗಳಿಸಿದರು.

ರಾಜಸ್ಥಾನ್ ಪರ ಜೋಫ್ರಾ ಆರ್ಚರ್ 3 ವಿಕೆಟ್, ನಾಂಡ್ರೆ ಬರ್ಗರ್ ಹಾಗೂ ಬ್ರಿಜೇಶ್ ಶರ್ಮಾ ತಲಾ 2, ರವೀಂದ್ರ ಜಡೇಜಾ ಮತ್ತು ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು.

ಭಯೋತ್ಪಾದನೆ ವಿರುದ್ಧ ಹೋರಾಟಕ್ಕೆ ಭಾರತದ ಜೊತೆ ನಿಲ್ಲುತ್ತೇವೆ: ಇಸ್ರೇಲ್

ಜೆರುಸಲೇಂ, ಏ.22– ಎಲ್ಲ ವಿಧದ ಭಯೋತ್ಪಾದನೆ ವಿರುದ್ಧ ದೇಶವು ದೃಢ ಮತ್ತು ಅಚಲವಾಗಿ ನಿಲ್ಲಲಿದೆ ಎಂದು ಇಸ್ರೇಲ್ ಬುಧವಾರ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾವ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಒಂದು ವರ್ಷವಾಗಿದ್ದು, ದಾಳಿಯಲ್ಲಿ ಮಡಿದ ಮುಗ್ಧ ಜೀವಗಳನ್ನು ಸ್ಮರಿಸುತ್ತೇವೆ ಮತ್ತು ಸಂತ್ರಸ್ತರ ಕುಟುಂಬದ ಪರವಾಗಿ ನಿಲ್ಲುತ್ತೇವೆ ಎಂದು ಇಸ್ರೇಲ್ ವಿದೇಶಾಂಗ ಸಚಿವ ಗಿದಾನ್ ಸಾರ್ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಇಂತಹ ಬೆದರಿಕೆಗಳ ಮಟ್ಟಹಾಕಲು ಹಾಗೂ ಶಾಂತಿ, ಭದ್ರತೆ ಮತ್ತು ಸ್ಥಿರತೆಗಾಗಿ ಭಾರತದ ಜೊತೆಯಾಗಿ ನಿಲ್ಲುತ್ತೇವೆ' ಎಂದು ಅವರು ಹೇಳಿದ್ದಾರೆ.

ಕಳೆದ ವರ್ಷ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನ ಮೃತಪಟ್ಟಿದ್ದರು. ಇದಕ್ಕೆ ಪ್ರತಿಯಾಗಿ ಭಾರತ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಸಿ, ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ ಉಗ್ರರ ನೆಲೆಗಳನ್ನು ನಾಶ ಮಾಡಿತ್ತು.

ಅಬಕಾರಿ ತೆರಿಗೆ ವರದಿ ಕುರಿತು ಅಭಿಪ್ರಾಯ ತಿಳಿಸಲು ಅವಕಾಶ

ಮೈಸೂರು,ಏ.22(ಪಿಎಂ)– ರಾಜ್ಯದ ಅಬಕಾರಿ ತೆರಿಗೆ ವ್ಯವಸ್ಥೆ ಪರಿಶೀಲಿಸಲು ರಾಜ್ಯ ಸರ್ಕಾರ ರಚಿಸಿದ್ದ ಸಂಪನ್ಮೂಲ ಸಂಗ್ರಹ ಸಮಿತಿ (ಆರ್‌ಎಂಸಿ) ವರದಿ ಸಲ್ಲಿಸಿದ್ದು, ಆಸಕ್ತ ಪಾಲುದಾರರು ವರದಿ ಸಂಬಂಧ ತಮ್ಮ ಅಭಿಪ್ರಾಯ ತಿಳಿಸಲು ಅವಕಾಶ ಕಲ್ಪಿಸಲಾಗಿದೆ.

ವರದಿಯ ವ್ಯಾಪಕ ಪ್ರಚಾರ, ಸಮಾಲೋಚನೆಗಾಗಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ವೆಬ್‌ಸೈಟ್ (finance.karnataka.gov.in) ನಲ್ಲಿ ಲಭ್ಯಗೊಳಿಸಲಾಗಿದೆ. ಉದ್ಯಮ ಕ್ಷೇತ್ರದ ಪ್ರತಿನಿಧಿಗಳು, ಸಾರ್ವಜನಿಕ ಆರೋಗ್ಯ ತಜ್ಞರು, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ನಾಗರಿಕರು ಸೇರಿದಂತೆ ಆಸಕ್ತರು ವರದಿ ಬಗ್ಗೆ ತಮ್ಮ ಅಭಿಪ್ರಾಯಗಳನ್ನು spobud-fd@karnataka.gov.in ಗೆ ಕಳುಹಿಸಲು ಆಹ್ವಾನಿಸಲಾಗಿದೆ. ಮೇ 22ರ ಸಂಜೆ 5.30 ಅಭಿಪ್ರಾಯಗಳನ್ನು ಸಲ್ಲಿಸಲು ವಿನಂತಿಸಲಾಗಿದೆ.

ಇಂದು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ವಾರ್ಷಿಕೋತ್ಸವ

ಮೈಸೂರು,ಏ.22(ಪಿಎಂ)– ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ವಾರ್ಷಿಕೋತ್ಸವ ಹಾಗೂ ಹಾಸ್ಟೆಲ್ ದಿನಾಚರಣೆಯನ್ನು ಏ.23ರಂದು ಸಂಜೆ 4ಕ್ಕೆ ಇಲ್ಲಿನ ಚೆಲ್ಲಾರಂ ಡೈನಿಂಗ್ ಹಾಲ್‌ನಲ್ಲಿ ಆಯೋಜಿಸಲಾಗಿದೆ. ಪಶ್ಚಿಮ ಬಂಗಾಳ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಶೇಷ ಕರ್ತವ್ಯ ಅಧಿಕಾರಿ ಕೆಂಪಹೊನ್ನಯ್ಯ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ವಿಜ್ಞಾನಿ ಎಂ.ಆರ್.ವೀರೇಶ್‌ಕುಮಾರ್, ಜೆಎಸ್‌ಎಸ್ ಸಿಎಂಎಸ್ ಪ್ರಾಧ್ಯಾಪಕ ಎಂ.ರಂಗಸ್ವಾಮಿ ಪಾಲ್ಗೊಳ್ಳಲಿದ್ದು, ಕಾಲೇಜಿನ ಪ್ರಾಂಶುಪಾಲರಾದ ಬಿ.ಇಳಂಗೋವನ್ ಅಧ್ಯಕ್ಷತೆ ವಹಿಸಲಿದ್ದಾರೆ.

ನಿಧನ



ಶ್ರೀ ಕೀರ್ತಿ ಕೃಪಾನಿಧಿ

(ಮಾಜಿ ಶಾಸಕರು ಸಿದ್ದಮಾದಯ್ಯನವರ ಪುತ್ರ)

ಇವರು ದಿನಾಂಕ:22–04–2026 ರಂದು ದೈವಾಧೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ಮಾಂಬಳ್ಳಿ ಗ್ರಾಮದಲ್ಲಿ ದಿನಾಂಕ: 23–04–2026 ಗುರುವಾರ ನೆರವೇರಿಸಲಾಗುವುದು

ದುಃಖತಪ್ತರು: ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ನಗರ, ಕೆ. ಆರ್.ಮೊಹಲ್ಲಾ,, ಮಹಾಗಣಪತಿ ನಗರ, ವಿದ್ಯಾದಾಯಿನಿ ಗರ್ಲ್ಸ್ ಹೈಸ್ಕೂಲ್ ಹತ್ತಿರ, ಅಂಬ, ನಾಲ ಸ್ಟ್ರೀಟ್, ಮನೆ ನಂ. 1362 ರಲ್ಲಿ ವಾಸವಾಗಿರುವ ಲೇಟ್. ಶ್ರೀ. ಎಂ. ಮುದ್ದಯ್ಯ ರವರ ಮಗನಾದ ಸುಮಾರು 54 ವರ್ಷದ ಶ್ರೀ. ಎಂ. ಮಂಜುನಾಥ ರವರಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕ್ರಯಪತ್ರವನ್ನು ನೊಂದಾಯಿಸಿ ಕೊಳ್ಳಲು ತಯಾರಿರುತ್ತೇವೆ, ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 07 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂದಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೊಂದಣಿ ಮಾಡಿಕೊಳ್ಳ ಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 4ನೇ ಹಂತ, 2ನೇ ಫೇಸ್, ಇಲ್ಲಿರುವ ನಿವೇಶನ ಸಂಖ್ಯೆ 4815, ನಗರಸಭೆ, ಹೂಟಗಳ್ಳಿ ರವರು ವಿತರಿಸಿರುವ ನಮೂನೆ–3 ಪ್ರಕಾರ ಸ್ವತ್ತಿನ ಸಂಖ್ಯೆ.7323576137, ವಿಸ್ತೀರ್ಣ ಪೂರ್ವ–ಪಶ್ಚಿಮ 6.00 ಮೀಟರ್, ಉತ್ತರ–ದಕ್ಷಿಣ 9.00 ಮೀಟರ್ ಒಟ್ಟು ವಿಸ್ತೀರ್ಣ 54 ಚದರ ಮೀಟರ್ ಗಳುಳ್ಳ ನಿವೇಶನ ಸದರಿ ನಿವೇಶನದಲ್ಲಿ ಕಟ್ಟಿರುವ ನೆಲಮಹಡಿ 35.00 ಚದರ ಮೀಟರ್ ಮತ್ತು ಮೊದಲನೇ ಮಹಡಿ 35.00 ಚದರ ಮೀಟರ್ ಗಳುಳ್ಳ ಕಟ್ಟಡ, ಆರ್.ಸಿ.ಸಿ. ಮೇಲ್ಚಾವಣಿ, ಗ್ರಾನೈಟ್ ನೆಲಹಾಸುಹುಳ್ಳ ಮನೆ, ಸದರಿ ಮನೆಗೆ ಚಕ್ಕುಬಂದಿ: ಪೂರ್ವಕ್ಕೆ : ಸೈಟ್ ನಂ.4814, ಪಶ್ಚಿಮಕ್ಕೆ : ಸೈಟ್ ನಂ.4816, ಉತ್ತರಕ್ಕೆ : ಸೈಟ್ ನಂ.4798, ದಕ್ಷಿಣಕ್ಕೆ : ರಸ್ತೆ.

ಸಹಿ/– ನಾಗೇಶ ಕೆ, ಎಂ.ಬಿ.ಎ. ಎಲ್.ಎಲ್.ಬಿ.
ವಕೀಲರು, ನಂ.1197, 12/2,
ಕೃಷ್ಣರಾಜ ಬುಲೆವಾರ್ಡ್ ರಸ್ತೆ,
ಮೈಸೂರು ಟೆನ್ನಿಸ್ ಕೋರ್ಟ್ ಮುಂಬಾಗ,
ಚಾಮರಾಜಪುರಂ, ಮೈಸೂರು
ಮೊ: 9538842045

ದಿನಾಂಕ: 22–04–2026, ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನನ್ನು ಅದರ ಮಾಲೀಕರಾದ ಮೈಸೂರು ನಗರ, ರಾಜರಾಜೇಶ್ವರಿ ನಗರ, ವಾಟರ್ ಟ್ಯಾಂಕಿನ ಹತ್ತಿರ, ಬಿ.ಇ.ಎಂ.ಎಲ್ ಎರಡನೇ ಹಂತ, ಮನೆ ನಂಬರ್ 92 ರಲ್ಲಿ ವಾಸವಾಗಿರುವ ಲೇಟ್ ಅಪ್ರಮೇಯ ರವರ ಮಗನಾದ ಸುಮಾರು 46 ವರ್ಷ ವಯಸ್ಸಿನ ಶಿವಕುಮಾರ ಎ. ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ' ತಕರಾರು, ವಗೈರೆಗಳು ಇದ್ದಂತ ಪಕ್ಷದಲ್ಲಿ ಅಂತ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಪ್ರಕಟಣೆ ಪ್ರಕಟವಾದ ದಿನದಿಂದ ಏಳು (07) ದಿನದ ಒಳಗೆ ಈ ಕೆಳಗೆ ನಮೂದಿಸಿರುವ ಕಚೇರಿಯ ವಿಳಾಸಕ್ಕೆ ದಾಖಲೆಯ ಸಮೇತ ತಮ್ಮ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ, ತಕರಾರು, ವಗೈರೆಗಳು ಸಾಬೀತಪಡಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ದಾಖಲೆಯ ಸಮೇತ ತಕರಾರು ವಗೈರೆಗಳು ಬರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಶೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತು ಖರೀದಿಸುವ ನಿಟ್ಟಿನಲ್ಲಿ ಕ್ರಮವಹಿಸಲು ಸಿದ್ಧರಿದ್ದು ಮುಂದೆ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬರಬಹುದಾದಂತಹ ತಂಟೆ ತಕರಾರಿಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಮತ್ತು ನಮ್ಮ ಕಕ್ಷಿದಾರರು ಶೆಡ್ಯೂಲ್ ಸ್ವತ್ತಿನ ಸದ್ಭವಿತ ಖರೀದಿದಾರರೆಂದು ಪರಿಗಣಿಸಲಾಗುವುದು.

ಶೆಡ್ಯೂಲ್

ಮೈಸೂರು ಜಿಲ್ಲೆ, ಹುಣಸೂರು ತಾಲೂಕು, ಬಿಳಿಕೆರ ಹೋಬಳಿ. ದೊಡ್ಡಬೀಚನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 111/5 ಒಟ್ಟು ವಿಸ್ತೀರ್ಣ 15 ಗುಂಟೆ ಜಮೀನು. ಸದರಿ ಜಮೀನಿನ ಚೆಕ್ಕುಬಂದಿ ಈ ಕೆಳಕಂಡಂತಿರುತ್ತದೆ. ಪೂರ್ವಕ್ಕೆ: ಮಲ್ಲೇ ರಾಜೆ ಅರಸು ರವರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ :ರಸ್ತೆ, ದಕ್ಷಿಣಕ್ಕೆ :ಮಲ್ಲೇ ರಾಜೆ ಅರಸು ರವರ ಜಮೀನು

ಸಹಿ/– ಬಿ.ಎಸ್.ಸಾವಂತ್, ವಕೀಲರು
ನಂಬರ್ 14, "ಶಾರದಾ',
ಮೂರನೇ ಮಹಡಿ, ವಿಶ್ವಮಾನವ ಜೋಡಿ ರಸ್ತೆ,
ಸರಸ್ವತಿಪುರಂ–570009.
ದೂರವಾಣಿ ಸಂಖ್ಯೆ: 9740097497

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಕಕ್ಷಿದಾರರು ಸ್ವತ್ತಿನ ಮಾಲೀಕರಾದ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ ಮತ್ತು ಅಂಚೆ, ಮಾವಿನಹಳ್ಳಿ ಗ್ರಾಮ, ಸಿದ್ದಪ್ಪಾಜಿ ದೇವಸ್ಥಾನ ರಸ್ತೆಯಲ್ಲಿ ವಾಸವಾಗಿರುವ "ಲಲಿತಾ ಲ್ಯಾಂಡ್ ಡೆವೆಲಪರ್'ನ ಮಾಲೀಕರಾದ ಶ್ರೀ. ಸಿದ್ದು ಬಿನ್ ಶ್ರೀ.ಚೌಡೇಗೌಡ ರವರ ಜೊತೆ "ಪರಸ್ಪರ ಒಡಂಬಡಿಕೆ ಪತ್ರ" (Memorandum of Understanding) ಮಾಡಿಕೊಳ್ಳಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಂಟೆ ತಕರಾರು, ಭಾಗಾಂಶ ಹಾಗೂ ಯಾವುದೇ ಹಣಕಾಸು ವ್ಯವಹಾರ ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 7 (ಏಳು) ದಿನಗಳ ಒಳಗಾಗಿ ನಮ್ಮ ಕಛೇರಿಯನ್ನು ಭೇಟಿ ಮಾಡಿ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಸದರಿ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಲಾಗುತ್ತದೆ, ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂ1: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂ.94/3 (ಹಳೆ ಸರ್ವೆ ನಂ. 94/2ಎ) ಒಟ್ಟು ವಿಸ್ತೀರ್ಣ 4 ಎಕರೆ 7 ಗುಂಟೆ ಸ್ವತ್ತಿನ ಪೈಕಿ 1 ಎಕರೆ 15 ಗುಂಟೆ ಸ್ವತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಲಕ್ಷ್ಮೀ ರವರ ಹಿಸ್ಸೆಗೆ ಬಂದ ಜಮೀನು, ದಕ್ಷಿಣಕ್ಕೆ : ಖಾಸಗಿ ಸ್ವತ್ತು

ಐಟಂ ನಂ2: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂ.94/4 (ಹಳೆ ಸರ್ವೆ ನಂ. 94/2ಎ) ಒಟ್ಟು ವಿಸ್ತೀರ್ಣ 4 ಎಕರೆ 7 ಗುಂಟೆ ಸ್ವತ್ತಿನ ಪೈಕಿ 1 ಎಕರೆ 15 ಗುಂಟೆ ಸ್ವತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಚಲುವಮ್ಮ ರವರ ಸ್ವತ್ತು, ದಕ್ಷಿಣಕ್ಕೆ : ಪುಟ್ಟಮ್ಮ ರವರ ಸ್ವತ್ತು

ಐಟಂ ನಂ3: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂ.94/5 (ಹಳೆ ಸರ್ವೆ ನಂ. 94/2ಎ) ಒಟ್ಟು ವಿಸ್ತೀರ್ಣ 4 ಎಕರೆ 7 ಗುಂಟೆ ಸ್ವತ್ತಿನ ಪೈಕಿ 35, ಗುಂಟೆ ಸ್ವತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ವರುಣ ನಾಲೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಖಾಸಗಿ ಸ್ವತ್ತು ದಕ್ಷಿಣಕ್ಕೆ : ಸಿದ್ದು ರವರ ಸ್ವತ್ತು

Sd/- Avinash .K., B.A., LL.B.,
Advocate
Office: CA-15, VHRS Building,
2nd Floor, New Kantharaj Urs Road, K.G. Koppal, Mysuru
Mob:9353361706, 9916300920

ದಿನಾಂಕ: 19–04–2026, ಸ್ಥಳ: ಮೈಸೂರು

ಮೈಸೂರು ಮಿತ್ರ 47 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಕ್ಕರೆ ನಗರ, ಮಂಡ್ಯ–571 402.

ಎಂಎಸ್‌ಕೋ/ಎಸ್ಟೇಟ್/11/2026–27 ದಿ:22–04–2026


ತೆಂಗಿನ ಎಳನೀರು ಫಸಲಿನ ಬಹಿರಂಗ ಟೆಂಡರ್ ಹರಾಜು ಪ್ರಕಟಣೆ

ಕಂಪನಿಯ ಆವರಣ ಮತ್ತು ಆಸ್ತಿಗಳಾದ ಕುವೆಂಪು ಶಾಲೆ ಗುತ್ತಲು, ಆಸ್ಪತ್ರೆ, ಈಜುಕೊಳ, ಸೆಂಟ್ರಲ್ ಆಫೀಸ್, ಕೇನ್ ಯಾರ್ಡ್ ಇ.ಟಿ.ಪಿ, ಬಯೋಗ್ಯಾಸ್ ಮತ್ತು ಕಂಪನಿಯ ಎಲ್ಲಾ ವಸತಿ ಗೃಹಗಳ ಆವರಣದಲ್ಲಿರುವ ತೆಂಗಿನ ಮರಗಳ ಎಳನೀರು ಫಸಲನ್ನು ಒಂದು ವರ್ಷದ ಅವಧಿಗೆ ಗುತ್ತಿಗೆಗೆ ನೀಡಲು ಬಹಿರಂಗ ಹರಾಜು ಮಾಡಲಾಗುವುದು (Open Action) ಹರಾಜು ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ:– (1) ಕಂಪನಿಯ ಆವರಣದ ಬಹಿರಂಗ ಹರಾಜನ್ನು ದಿನಾಂಕ : 29.04.2026 ರಂದು ಬೆಳಗ್ಗೆ:11–00 ಘಂಟೆಗೆ ಪ್ರಧಾನ ವ್ಯವಸ್ಥಾಪಕರವರ ಕಛೇರಿಯಲ್ಲಿ ನಡೆಸಲಾಗುವುದು. (2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ಡುದಾರರು ಸ್ಥಳದಲ್ಲಿ ರೂ.5000/–(ಐದು ಸಾವಿರ) ಗಳನ್ನು ಠೇವಣಿ ಆಗಿ ಪಾವತಿಸಿ ನಂತರ ಬಿಡ್ಡಿನಲ್ಲಿ ಭಾಗವಹಿಸುವುದು. (3) ಹರಾಜು ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿರುವ ಠೇವಣಿ ಹಣವನ್ನು ವಾಪಸ್ಸು ಮಾಡಲಾಗುವುದು. (4) ಕಂಪನಿಯ ಕೆಲಸದ ವೇಳೆಯಲ್ಲಿ ಬೆಳಿಗ್ಗೆ 10–00 ರಿಂದ ಸಂಜೆ 5–00 ಗಂಟೆ ಅವಧಿಯಲ್ಲಿ ಕಂಪನಿಯ ಆವರಣ ಮತ್ತು ವಿವಿಧ ಸ್ಥಳಗಳಿಗೆ ಬೇಟಿ ನೀಡಿ ತೆಂಗಿನ ಮರಗಳನ್ನು ವೀಕ್ಷಿಸಬಹುದು. ಈ ಹರಾಜು ಪ್ರಕ್ರಿಯೆ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಎಸ್ಟೇಟ್ ಸೂಪರ್‌ವೈಸರ್‌ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಮೊ:9448740861

ಸಹಿ/–ಪ್ರಧಾನ ವ್ಯವಸ್ಥಾಪಕರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/064/2026–27

ನಿಧನ ವಾರ್ತೆ



ಜನನ : 16–10–1988 ಮರಣ 22–04–2026

ತೊಣಚಿಕೊಪ್ಪಲ್ ಗ್ರಾಮದ ದಿವಂಗತ ಸಣ್ಣ ಮರಿಯಪ್ಪನವರ ದ್ವಿತೀಯ ಪುತ್ರ

ಮಂಜುನಾಥ್ ಎಂ. (ಟಗರು ಮಂಜು) ರವರು

ದಿನಾಂಕ 22–04–2026ರ ಬುಧವಾರ ಮಧ್ಯಾಹ್ನ 2ಗಂಟೆ ಸಮಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ, ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23–04–2026 ರಂದು ತೊಣಚಿಕೊಪ್ಪಲು ಮತ್ತು ಜನತಾನಗರದ ರುದ್ರಭೂಮಿಯಲ್ಲಿ ಬೆಳಗ್ಗೆ 11 ಗಂಟೆಗೆ ಕುರುಬಸಮಾಜದ ಸಂಪ್ರದಾಯದಂತೆ ನೆರವೇರಿಸಲಾಗುವುದು

ಇಂತಿ ದುಃಖತಪ್ತರು :

ಪುಷ್ಪಲತಾ ಮತ್ತು ಟಿ.ಬಿ.ಚಿಕ್ಕಣ್ಣ ಮಾಜಿ ಮಹಾಪೌರರು
ಮೃತರಪತ್ನಿ ಮಾಲತಿ, ಮಗ ರಚಿತ್ ಎಂ. ಅಕ್ಕ ಶೋಭಾ ಎಂ.
ಕೆಂಪಮ್ಮ ಮತ್ತು ಲೇ. ಪಾಪಣ್ಣ ಗುಡ್ಡಪ್ಪ, ಮೃತರತಾಯಿ ಪುಟ್ಟತಾಯಮ್ಮ ಲೇ. ಮರಿಯಪ್ಪ,
ಸಹೋದರರುಗಳಾದ ಸಿ.ಬಸವರಾಜು, ಬಸಪ್ಪ ಪಿ, ಚಿಕ್ಕಚಿಕ್ಕಣ್ಣ, ರವಿ ಪಿ., ಶಿವಕುಮಾರ್ ಎಂ.
ಹಾಗೂ ಅಪಾರ ಬಂಧು ಬಳಗ